SRI C. M. ARUMUGHAM.—I do not want to cause inconvenience.

MADAM SPEAKER.—It really causes inconvenience.

SRI C. M. ARUGMUGHAM.—Madam Speaker, that is a point which has to be brought to the notice of the House. Of ccurse, madam Speaker held that the only material point would be newspaper and that we can make use of it.

MADAM SPEAKER.—You can make use of it and have a discussion later in the evening after this is discussed. Let us do some business We have passed only three demands. Let us take it up aftar 6 P.M.

SRI C. M. ARUMUGHAM.—It is a sort of No-confidence on the Ministry.

MADAM SPEAKER.—Please help me. Let us do some business. After the demands, you can raise it.

DEMANDS FOR GRANTS

DEMAND NO. 21—RURAL DEVELOPMENT.

32. Rural Development

SRI M. MALLIKARJUNASWAMY (Minister for Community Development and Social Welfare).—

Madam, on the recommendation of the Governor, I beg to move :

"That a sum not exceeding Rs. 6,06,00,000 Inclusive of the sum ganted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 21 'Rural Development'.

DEMAND NO. 25—COMMUNITY DEVELOPMENT ETC.

37. Community Development Projects, National Extension Service and Local Development Works.

Madam, on the recommendation of the Governor, I beg to move :

"That a sum not exceeding Rs. 6,19,66 000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 25 'Community Development, etc'."

DEMAND NO. 27—MISCELLANEOUS, SOCIAL AND DEVELOPMENTAL ORGANISATIONS

39. Miscellaneous, Social and Developmental Organisations

Madam, on the recommendation of the Governor, I beg to move :
"That a sum not exceeding Rs. 14,39,37,000 inclusive of the sum granted 'on account' be granted to the Government to defray the charges which will come in course of payment during the financial year ening 31st day March 1974, in respect of Demand No. 27 'Miscellaneous Social and Developmental Organisations'."

MADAM SPEAKER.—Motion moved :

"That a sum not exceeding Rs. 6,06,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 21 'Rural Development'."

"That a sum not exceeding Rs. 6,19,66,000 inclusive of the sum granted 'on account' be granted to the Government to defray the charges which in course of payment during the financial year ending 31st day of March 1974, in respect of Demand No. 25 'Community Development, etc'."

"That a sum not exceeding Rs. 14,39,37,000 inclusive of the sum granted 'on account' be granted to the Government to defray the charges which will come incourse of payment during the financial year ending 31st day of March 1974, in respect of Demand No. 27 "Miscellaneous, Social and Developmental Organisations'."

Mr. Bangarappa will initiate the debate.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ: ಮಾನ್ಯ ಸಚಿವರು ಈಗತಾನೇ ಈ ಸದನದ ಮುಂದೆ ಮಂಡಿಸಿದಂಥ ಮೂರು ಬೇಡಿಕೆಗಳನ್ನು ಅಂದರೆ-ಡಿಮ್ಯಾಂಡ್ ನಂಬರ್ಸ್-21, 25 ಮತ್ತು 27, ಈ ಮೂರು ಬೇಡಿಕೆಗಳನ್ನೂ ವಿರೋಧಿಸಿ ನಾನು ಮಾತನಾಡುತ್ತಾ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಮಾನ್ಯ ಸಚಿವರು ಈ ಮೂರು ಬಾಬುಗಳಿಗೂ ಒಟ್ಟು ಸುಮಾರು 27 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಆದರೆ ಈ ಮೂರು ಬಾಬುಗಳನ್ನೂ ನಡೆಸತಕ್ಕ ಇಲಾಖೆಗಳೇನಿವೆ ಅವು ತಮ್ಮ ಕೆಲಸ ಕಾರ್ಯಗಳನ್ನು ಹೇಗೆ ನಿರ್ವಹಿಸಿವೆ, ಅಲ್ಲಿ ಆಡಳಿತ ಹೇಗೆ ನಡೆಯುತ್ತಿದೆ, ಅದೇನು ಕೆಟ್ಟಿದೆಯೇ ಅಥವಾ ಸರಿಯಾಗಿ ನಡೆಯುತ್ತಿದೆಯೇ ಮತ್ತು ರಾಜ್ಯಾಂಗಬದ್ಧವಾಗಿ ಸ್ಥಾನಗಳನ್ನು ಅಂದರೆ ಮೀಸಲಾಗಿರತಕ್ಕ ಸ್ಥಾನಗಳನ್ನು ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ವರಿಗೆ ಒದಗಿಸಲಾಗುತ್ತಿದೆಯೇ, ಅಂದರೆ ಇವೇನು ಸದುಪಯೋಗವಾಗುತ್ತಿದೆಯೇ ಅಥವಾ ದುರುಪಯೋಗವಾಗುತ್ತಿವೆಯೇ ಎಂಬುದನ್ನು ನಾವೀಗ ಆಲೋಚನೆ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಮೊಟ್ಟ ಮೊದಲನೇಯದಾಗಿ, ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳಲ್ಲಿ ಅವರು ಹೇಳಿರತಕ್ಕ ಪ್ರೊಬೇಷನ್ ಅಂಡ್ ಆಫ್ಟರ್ ಕೇರ್ ಸರ್ವೀಸ್ ಬಾಬಿಗೆ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಡೈರೆಕ್ಟರವರು, ಎಕ್ಸ್ ಅಫಿಷಿಯೋ ಚೀಫ್ ಇನ್ಸ್‌ಪೆಕ್ಟರ್ ಆಫ್ ಸರ್ಟಿಫೈಡ್ ಸ್ಕೂಲ್ಸ್ ಕೂಡ ಆಗಿದ್ದಾರೆ. ಹೀಗೆ ಎರಡು ಬಾಬುಗಳಿಗೆ ಒಬ್ಬರೇ ಅಧಿಕಾರಿಗಳನ್ನು ನೇಮಕ ಮಾಡಿದೆ. ಈ ದಿವಸ ಈ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್

(ಶ್ರೀ ಎಸ್. ಬಂಗಾರಪ್ಪ)

ಇಲಾಖೆಯ ಅಧಿಕಾರಿಗಳಿಗೆ ಆ ಒಂದು ಇಲಾಖೆಯ ಕೆಲಸ ಕಾರ್ಯಗಳನ್ನೇ ನೋಡಿಕೊಂಡಿದ್ದರೆ ಸಾಕಾಗಿತ್ತು. ಈ ಇಲಾಖೆಯ ಕೆಲಸಕಾರ್ಯಗಳು ದಿನ ದಿನಕ್ಕೂ ಬೆಳೆಯುತ್ತಿವೆ. ಆದುದರಿಂದ ಇವರಿಗೆ ಇನ್ನೊಂದು ಇಲಾಖೆಯನ್ನು ಜೊತೆಗೂಡಿಸಿದ್ದು ಬಹಳ ಅನಾನುಕೂಲವಾಗಿದೆ. ಈ ಪ್ರೊಬೇಷನ್ ಅಂಡ್ ಆಫ್ಟರ್ ಕೇರ್ ಬಾಬನ್ನೇ ಒಂದು ಅಲಾಯಿದ ಇಲಾಖೆಯನ್ನಾಗಿ ಮಾಡಿ ಇದನ್ನೇ ಪ್ರತ್ಯೇಕವಾಗಿ ಬೇರೊಬ್ಬ ಅಧಿಕಾರಿಗಳ ಕೈಲಿ ಇಟ್ಟಿದ್ದಿದ್ದರೆ ಸೋಷಿಯಲ್ ವೆಲ್ಫೇರ್ ಇಲಾಖೆಯಲ್ಲಿ ನಾವು ಈ ದಿವಸ ಸ್ವಲ್ಪ ಪ್ರಗತಿಯನ್ನು ಕಾಣಬಹುದಾಗಿತ್ತು. ಅದಕ್ಕೆ ಈಗ ಅವಕಾಶವಿಲ್ಲದಂತಾಗಿದೆ. ಒಬ್ಬರ ಮೇಲೆ ಹೊರಲಾರದಷ್ಟು ವಜ್ಜೆಯನ್ನು ಹೇರಿದ್ದಾರೆ. ಇದರಿಂದ ಸೋಷಿಯಲ್ ವೆಲ್ಫೇರ್ ಇಲಾಖೆಯ ಕೆಲಸಕಾರ್ಯಗಳು ಬಹಳ ಕುಂಠಿತವಾಗಿವೆ. ಆದುದರಿಂದ ಈ ಎರಡು ಬಾಬುಗಳಿಗೂ ಪ್ರತ್ಯೇಕ ಪ್ರತ್ಯೇಕ ಇಲಾಖಾ ಮುಖ್ಯಸ್ಥರನ್ನು ನೇಮಕ ಮಾಡಬೇಕೆಂದು ಹೇಳುತ್ತಿದ್ದೇನೆ. ಇನ್ನು ಇವುಗಳಲ್ಲಿ ನಡೆದಿರತಕ್ಕ ಲೋಪದೋಷಗಳ ವಿಷಯಕ್ಕೆ ನಾನು ಅನಂತರ ಬರುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ದಿವಸ ಸರ್ಕಾರದವರು ಅನೇಕ ಕೋಟಿರೂಪಾಯಿಗಳನ್ನು ಹರಿಜನ ಗಿರಿಜನರನ್ನು ಮೇಲಕ್ಕೆತ್ತಲು ಖರ್ಚು ಮಾಡುತ್ತಿದ್ದಾರೆ. ಬಹಳ ಸಂತೋಷದ ವಿಷಯ. ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿದವರನ್ನು ಮೇಲೆತ್ತುವುದಕ್ಕೂ ಕೂಡ ಪ್ರಯತ್ನ ಸಾಕಷ್ಟು ನಡೆಸಿದ್ದಾರೆ, ಆದರೆ ನನಗೇನು ಒಂದು ಅನುಮಾನ ಬಂದಿದೆ ಎಂದರೆ-ರಾಜ್ಯಾಂಗದಲ್ಲಿ ಹೇಳಿರತಕ್ಕ ಈ 18 ಪರ್ಸೆಂಟ್ ರಿಜರ್ವೇಷನ್ ಏನಿವೆ ಅದು ಆ ಹರಿಜನ ಗಿರಿಜನರ ವಿದ್ಯಾಶಾಲೆಗಳ ಪ್ರದೇಶದಲ್ಲಿ ಮತ್ತು ಸರ್ಕಾರಿನೌಕರಿಗಳಲ್ಲಿ ಸಿಕ್ಕುತ್ತಿದೆಯೇ ?

3-00 P. M.

ಈ ಹಕ್ಕನ್ನು ಜಾರಿಗೆ ಕೊಡುವ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿರುವ ಕಾಲೇಜುಗಳಿಗೆ ಪ್ರವೇಶಾವಕಾಶ, ಸರಕಾರಿ ಕ್ಷೇತ್ರದಲ್ಲಿ ನೌಕರಿಗಳಿಗೆ ಅವಕಾಶ, ಕಾರ್ಖಾನೆಗಳಲ್ಲಿ ನೌಕರಿಗಳಿಗೆ ಅವಕಾಶ, ಜಮೀನು ಹಂಚಿಕೆಯಲ್ಲಿ ಬಡವರಿಗೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಹರಿಜನ ಗಿರಿಜನರಿಗೆ ಸೇಕಡ 18 ರಷ್ಟು ಅವಕಾಶ ಮುಂತಾದ ಹಲವಾರು ಯೋಜನೆಗಳಲ್ಲಿ ರಾಜ್ಯಾಂಗ ಬದ್ಧವಾಗಿ ಕೊಟ್ಟಿರುವ ಹಕ್ಕುಗಳೇನಿವೆ ಅವನ್ನು ಸರಿಯಾಗಿ ಸರಕಾರ ಜಾರಿಗೆ ಕೊಟ್ಟಿಲ್ಲ. ಈ ಸಂಬಂಧದಲ್ಲಿ ಸರಕಾರ ವಿಫಲವಾಗಿದೆ. ಕಾರಣ ಹೇಳುತ್ತೇನೆ ಏಕೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು, ಅದಷ್ಟು ಇದನು ರುಜುವಾತು ಪಡಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಕಾಲೇಜುಗಳಲ್ಲಿ ಅಂದರೆ ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯಾಂಗಬದ್ಧವಾಗಿರುವ ಅವಕಾಶ ಸಾಕಷ್ಟು ಪ್ರಮಾಣದಲ್ಲಿದೆ. ಸರಕಾರಿ ಉದ್ಯೋಗಗಳಲ್ಲಿರುವ ಹರಿಜನ ಗಿರಿಜನರಿಗೆ ಪ್ರಮೋಷನ್ ಇತ್ಯಾದಿ ಸರಿಯಾಗಿ ಸಿಕ್ಕಿದೆ ಯೇ ? ರಾಜ್ಯಾಂಗದಲ್ಲಿರುವ ಹಕ್ಕನ್ನು ಸಂಪೂರ್ಣವಾಗಿ ಸದುಪಯೋಗಪಡಿಸಬೇಕು. ಸರಕಾರ ಇದಕ್ಕೆ ಅವಕಾಶಮಾಡಿದೆಯೇ ? ಪ್ರಮೋಷನ್ ಇತ್ಯಾದಿಗಳಲ್ಲಿ ಅನ್ಯಾಯವಾಗಬಾರದು ಎಂದು ಸಾಕಷ್ಟು ಗಮನ ಕೊಟ್ಟಿದೆಯೇ ? ಸ್ವಾತಂತ್ರ್ಯ ಬಂದಮೇಲೆ ಹಲವಾರು ದೊಡ್ಡ ದೊಡ್ಡ ಅಧಿಕಾರಿ ಗಳು ಅಧಿಕಾರಕ್ಕೆ ಬಂದಿದ್ದಾರೆ, ಅಸಿಸ್ಟೆಂಟ್ ಕಮಿಷನರ್, ತಾಸಿಲ್ದಾರ್; ಡಿ. ಸಿ. ಮುಂತಾದ ಕೆಲಸಗಳು ಸಿಕ್ಕಿವೆ, ಡಿವಿಜನಲ್ ಕಮಿಷನರ್ ಪದವಿಯೂ ಸಿಕ್ಕಿರಬಹುದು, ಅನೇಕ ಇಲಾಖೆಗಳಲ್ಲಿ ಡೈರೆಕ್ಟರುಗಳಾಗಿದ್ದಾರೆ, ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಅಂಡರ್ ಸೆಕ್ರೆಟರಿ ಆಗಿದ್ದಾರೆ, ಮಂತ್ರಿ ಕೂಡ ಆಗಿದ್ದಾರೆ. ರಾಜ್ಯಾಂಗಬದ್ಧವಾಗಿ ಕೊಟ್ಟಿರುವ ಈ ಸೌಲಭ್ಯ ಸಂಪೂರ್ಣವಾಗಿ ಸದುಪಯೋಗ ಮಾಡಿಕೊಂಡಿಲ್ಲ. ಕೆಲವರು ಮಾತ್ರ ಈ ಸೌಲಭ್ಯ ಪಡೆದರೆ ಸಾಲದು, ದೇಶದಲ್ಲಿ ಲಕ್ಷಾಂತರ ಜನರಿದ್ದಾರೆ. ಅಧಿಕಾರ ದೊರೆತವರು ತಪ್ಪುಮಾಡಿದ್ದಾರೆ' ಅವರು ಇತರರಿಗೆ ಸಹಾಯ ಮಾಡಿಲ್ಲ, ಇತರ ಹರಿಜನರಿಗೆ ಅನುಕೂಲ ಕಲ್ಪಿಸಿಲ್ಲ. ಡಿ. ಸಿ. ಆದವರು ಅಧಿಕಾರ ದುರುಪಯೋಗಮಾಡಿ ಕೊಂಡು ಭಾರಿ ಆಸ್ತಿ ಮಾಡಿಕೊಂಡಿದ್ದಾರೆ, ಬೆಂಗಳೂರಿನಲ್ಲಿ ಸೈಟು ಪಡೆದಿದ್ದಾರೆ, ಆಸ್ತಿ ಸಂಪಾದಿಸಿ ದ್ದಾರೆ. ಅವರ ಹೆಂಡತಿಯರಿಗೆ ಕೈಗೆ ಬಂಗಾರದ ಬಳೆ ಬೇಕು, ಅವನ್ನು ಅವರು ಹಾಕಬಾರದೆಂದು ನಾನು ಹೇಳುವುದಿಲ್ಲ, ಹಾಕುವ ಸಂಪ್ರದಾಯವಿದೆ. ಆದರೆ ಡಿ. ಸಿ. ಆದವನು ತಾನು ಹೇಗೆ ಆ ಪದವಿಗೆ ಬಂದೆ, ಏಕೆ ಸೇಕಡ 18 ರಷ್ಟು ಮೀಸಲಿಟ್ಟಿದ್ದಾರೆ ಎಂದು ನೋಡಬೇಕು. ಅಧಿಕಾರ ಸ್ಥಾನದಲ್ಲಿರುವವರು, ಮಂತ್ರಿಗಳು ಅಧಿಕಾರಿಗಳು ಎಲ್ಲರೂ ಕೂಡ ರಾಜ್ಯಾಂಗಬದ್ಧವಾದ ಸೌಲಭ್ಯ ಗಳನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಂಡಿದ್ದಾರೆ, ಬಡವರನ್ನು ಮೇಲಕ್ಕೆತ್ತಲು

ಅವರು ಪ್ರಯತ್ನಮಾಡಿಲ್ಲ. ಅವರು ಬೆಳೆದಹಾಗೆ ಅವರ ವರ್ಗಕ್ಕೆ ಸೇರಿದ ಇತರರೂ ಬೆಳೆದು ಮೇಲಕ್ಕೆ ಬರಲು ಪ್ರಯತ್ನ ಮಾಡಿರುವರೇ ? ಮಾಡಿದ್ದರೆ ರುಜುವಾತು ಮಾಡಬೇಕು. ಹರಿಜನರಿಗೆ ಮನೆ ಕಟ್ಟಿಕೊಳ್ಳಲು ಸೊಸೈಟಿಮಾಡಿ 11 ರೂಪಾಯಿಯ ಷೇರೋ ಏನೋ ಮಾಡಿದ್ದಾರೆ. ಆದರೆ ಆ ಸೊಸೈಟಿಯಲ್ಲೇನಾಗಿದೆಯೆಂಬುದು ಗೊತ್ತಿದೆಯೇ ? ಆ ಸೊಸೈಟಿ ಸಂಪೂರ್ಣವಾಗಿ ಡಿಫಾಲ್ಟ್ ಆಗಿದೆ, ಸೊಸೈಟಿಯಿದ್ದರೂ ಮನೆ ಕಟ್ಟಿಕೊಳ್ಳಲು ಅನುಕೂಲವಾಗಿಲ್ಲ. ಸೊಸೈಟಿ ಬಿಟ್ಟು ಹೊಸ ಯೋಜನೆಯಿದ್ದರೆ ಹೇಳಿ. ಹೌಸಿಂಗ್ ಬೋರ್ಡಿನ ವಿಚಾರ ಹೇಳುತ್ತಿಲ್ಲ, ಹಳ್ಳಿಗಳಿಗೆ ಅದು ಪ್ರವೇಶ ಮಾಡುತ್ತಿಲ್ಲ. ಮನೆ ಕಟ್ಟಿಕೊಳ್ಳಲು ಏನು ವ್ಯವಸ್ಥೆ ಮಾಡಲಾಗಿದೆ ಎಂಬುದನ್ನು ಉತ್ತರ ಕೊಡುವಾಗ ಹೇಳಬೇಕು. ಹರಿಜನ ಗಿರಿಜನರಿಗೆ, ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಏನು ಯೋಜನೆ ಮಾಡಿದ್ದೀರಿ ? ಈ ದಿವಸ ನಿಮ್ಮ ಮೇಲೆ ಚಾರ್ಜ್ ಮಾಡುತ್ತಿದ್ದೇನೆ. ಸೇಕಡ 18 ರಷ್ಟು ರಾಜ್ಯಾಂಗಬದ್ಧವಾಗಿ ಏನು ಮೀಸಲಿಟ್ಟಿದ್ದಾರೆ ಅದನ್ನು ಸಂಪೂರ್ಣವಾಗಿ ಹರಿಜನ ಮುಖಂಡರು ಕೆಲವರು ದುರುಪಯೋಗಪಡಿಸಿ ಕೊಂಡಿದ್ದಾರೆ ಎಂಬುದನ್ನು ಅವಗಾಹನೆಗೆ ತರುತ್ತಿದ್ದೇನೆ. ಈ ದಿವಸ ಹರಿಜನ ಅಧಿಕಾರಿಗಳು, ಮಂತ್ರಿಗಳು ಎಷ್ಟು ಆಸ್ತಿ ಮಾಡಿದ್ದಾರೆ, ಸೇಕಡ 18 ರಷ್ಟು ಮೀಸಲಾಗಿರುವುದನ್ನು ಎಷ್ಟು ದುರುಪಯೋಗಮಾಡಿಕೊಂಡಿದ್ದಾರೆ ಹರಿಜನ ಗಿರಿಜನರ ಹೆಸರಿನಲ್ಲಿ ಸ್ವಾತಂತ್ರ್ಯ ಬಂದಮೇಲೆ 25 ವರ್ಷಗಳಲ್ಲಿ ಎಷ್ಟಾಗಿದೆ ಎಂಬುದನ್ನು ಪರಿಶೀಲಿಸಬೇಕು. ಸಾವಿರಾರು ಕೋಟಿ ಹಣ ದುರುಪಯೋಗವಾಗಿವೆ. ಬಡವರು ಇನ್ನೂ ಕೂಡ ಬಡತನದಲ್ಲಿ ನರಳುತ್ತಿದ್ದಾರೆ, 25 ವರ್ಷ ಕಳೆದರೂ ಇನ್ನೂ ಮನೆ ಕಟ್ಟಿಕೊಂಡಿಲ್ಲ, ಅವರಿಗೆ ಬಾವಿಯಿಲ್ಲ, ಹರಿಜನರಿಗೇ ಪ್ರತ್ಯೇಕ ಭಾವಿ ತೋಡುತ್ತಿದ್ದಾರೆ. ಈ ವಿಚಾರದಲ್ಲಿ ಸಂಪೂರ್ಣವಾಗಿ ಪರಿಶೀಲನೆಯಾಗಬೇಕು. ಈ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು. ಜುಡಿಷಿಯಲ್ ಎನ್‌ಕ್ವೈರಿಯಾಗಬೇಕು. 25 ವರ್ಷಗಳಲ್ಲಿ ಹರಿಜನ ಗಿರಿಜನರಿಗಾಗಿರುವ ಅನ್ಯಾಯ ಅವರಿಗೆ ಮೀಸಲಾಗಿದ್ದ ಅನುಕೂಲತೆಗಳ ದುರುಪಯೋಗ ಮುಂತಾದುವುಗಳ ಬಗ್ಗೆ ಸಂಪೂರ್ಣ ಪರಿಶೀಲನೆಯಾಗಬೇಕು. ಇಂದು ಗ್ರಾಮೀಣ ಪ್ರದೇಶದಲ್ಲಿ ಇಷ್ಟು ಬಾವಿಗಳನ್ನು ತೆಗೆಸಿರುವುದಾಗಿ ಹೇಳುತ್ತಾರೆ. ಸುಮಾರು 8307 ಪಂಚಾಯ್ತಿಗಳಿವೆ, 175 ತಾಲ್ಲೂಕು ಬೋರ್ಡುಗಳಿವೆ. ಅವುಗಳಿಂದೇನು ಸಹಾಯವಾಗಿದೆ, ಎಷ್ಟು ಕೆಲಸವಾಗಿದೆ, ಎಷ್ಟು ಅನುಕೂಲವಾಗಿದೆ ಎಂಬುದನ್ನು ಹೇಳಬೇಕು.

ನಾನಾದರೂ ಕೂಡ ಅಧ್ಯಕ್ಷರ ಮುಖೇನ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮೊದಲು ಈ ಅಧಿಕಾರ ಕೇಂದ್ರೀಕರಣವಾಗುವುದನ್ನು ತಪ್ಪಿಸಬೇಕು. ಇಷ್ಟೆಲ್ಲಾ ಸೋಷಲಿಸಂ ಪ್ರಚಾರ ಮಾಡಿ ಇದನ್ನು ಮಾಡುವುದಕ್ಕಾಗುವುದಿಲ್ಲವೇ? ಡಿಸೆಂಟ್ರಲೈಸೇಷನ್ ಆಫ್ ಪವರ್ಸ್, ಅಧಿಕಾರ ವಿಕೇಂದ್ರೀಕರಣ ಆಗಬೇಕು. ಹಲವರು ಬೆಂಗಳೂರು, ಡೆಲ್ಲಿಯನ್ನು ನೋಡುವುದಾಗಲೀ, ಇಂಥ ಪರಿಸ್ಥಿತಿಯಲ್ಲಿ ನೋಡುವುದು ಬಹಳ ಕಷ್ಟ. ಜನರನ್ನು ಡೆಲ್ಲಿ, ಬೆಂಗಳೂರನ್ನು ನೋಡುವುದಕ್ಕೆ ಹಚ್ಚಬಾರದು. ಹರಿಜನರಿಗೆ ಜಮೀನು ಕೊಡಿಸಿ ಎಂದು ಹೇಳಿದರೆ, ಕಮಿಟಿಗಳನ್ನು ಮಾಡಿದ್ದೇವೆ, ಅರ್ಜಿಗಳು ತಹಸೀಲ್ದಾರರಿಗೆ ಹೋಗಬೇಕು, ಎಂದು ಹೇಳಿದರು. ಈ ರೀತಿ ಅರ್ಜಿಗಳನ್ನು ತೆಗೆದುಕೊಂಡು ಜಮೀನು ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ. ಬಡವರು ಇದಕ್ಕಾಗಿ ಬೆಂಗಳೂರು ನಗರಕ್ಕೆ ಬಂದು ಮಾನ್ಯ ಮಂತ್ರಿಗಳಲ್ಲಿ ಅರ್ಜಿಯನ್ನು ಕೊಟ್ಟಿದ್ದಾರೆ. ದೇಶದಲ್ಲಿ ಲಕ್ಷಾಂತರ ಜನರಿಂದ ಇವರು ಅರ್ಜಿಗಳನ್ನು ತೆಗೆದುಕೊಂಡಿದ್ದಾರೆ. ಅರ್ಜಿ ಕೊಡಿ, ಪರಿಶೀಲನೆ ಮಾಡಿ ನೋಡುತ್ತೇವೆ, ಎಂದು ಅರ್ಜಿಗಳನ್ನು ತೆಗೆದುಕೊಂಡು ಎಲ್ಲರನ್ನೂ ಅರ್ಜಿದಾರರನ್ನಾಗಿ ಮಾಡಿಬಿಟ್ಟಿದ್ದಾರೆ. There should be a deep judicial probe into all these matters. ನೀವು ದೇಶದಲ್ಲಿ ಸಂಪೂರ್ಣವಾಗಿ ಅರ್ಜಿದಾರರ ಸಮಾಜವಾದವನ್ನು ಉದ್ಭವ ಮಾಡಿದ್ದೀರಿ. ಅರ್ಜಿಗಳನ್ನು ಕೊಡುವುದು, ತೆಗೆದುಕೊಂಡು ಹೋಗುವುದು ಆಗಿದೆ. ಕಳೆದ 25 ವರ್ಷಗಳಲ್ಲಿ ಸಂಪೂರ್ಣವಾಗಿ ಅರ್ಜಿಗಳನ್ನು ತೆಗೆದುಕೊಳ್ಳುತ್ತಾ ಬಂದಿದ್ದಾರೆ. ಅರ್ಜಿ ಕೊಟ್ಟ ಮೇಲೆ ನಿಜವಾಗಿ ಕೆಲಸ ಮಾಡುತ್ತಾರೆಯೇ, ಇಲ್ಲ, ಈ ರೀತಿ ಇವರು ನಂಬಿಕೆಯನ್ನು ಸಂಪೂರ್ಣವಾಗಿ ಹಾಳು ಮಾಡಿದ್ದಾರೆ. ಜನರ ನಂಬಿಕೆಗೆ ಸಂಪೂರ್ಣ ದ್ರೋಹ ಮಾಡಿದ್ದಾರೆ. ಇವನ್ನು ಮಾನ್ಯ ಮಂತ್ರಿಗಳನ್ನು ಕೇಳುತ್ತೇವೆ, ಹಳ್ಳಿಗಾಡು ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಸಂಪೂರ್ಣವಾಗಿ ಮಾಡುವುದಕ್ಕೆ ಆಗಿಲ್ಲ ಎಂದು, ಅಲ್ಲಿಗೆ ಭೇಟಿ ಕೊಟ್ಟಿದ್ದೇವೆ, ಅಷ್ಟು ಭಾವಿಗಳನ್ನು ತೋಡಿಸಿದ್ದೇವೆ, ರಾಷ್ಟ್ರೀಯ ನೀರು ಸರಬರಾಜು ಯೋಜನೆ ಪ್ರಕಾರ ಇಷ್ಟೊಂದು ಮಾಡಿದ್ದೇವೆಂದು ಹೇಳಿದರೂ ಕೂಡ ನೀವು ಕಟ್ಟಿಸಿರತಕ್ಕ ಬಾವಿಗಳಲ್ಲಿ 100ಕ್ಕೆ 95ರಷ್ಟು ಬಾವಿಗಳಲ್ಲಿ ನೀರು ಇಲ್ಲ. ನೀವು ಹೇಳಬಹುದು ಮಳೆ ಬರಲಿಲ್ಲ ಎಂದು. ಕೆಲವು ದೃಷ್ಟಿಯಿಂದ ಇದು ಸ್ವಲ್ಪಮಟ್ಟಿಗೆ ಸರಿ ಇರಬಹುದು ಆದರೆ ಇದು ಸಂಪೂರ್ಣವಾಗಿ ಸರಿಯಲ್ಲ. ನೀವು ಮಾಡಿಸಿರತಕ್ಕ ಬಾವಿಗಳಲ್ಲಿ ನನ್ನ ಕ್ಷೇತ್ರವಾದ ಸೊರಬದಲ್ಲಿ ಅನೇಕ

(ಶ್ರೀ ಎಸ್. ಬಂಗಾರಪ್ಪ)

ಬಾವಿಗಳಲ್ಲಿ ರಿಂಗ್‌ಗಳನ್ನು ಕೂಡಿಸದೆ ಬಾವಿ ಬಿದ್ದು ಹೋಗಿದೆ. ಸೊರಬ ತಾಲ್ಲೂಕಿನ ಹಿರೇಕಸವಿ ಎಂಬ ಗ್ರಾಮದಲ್ಲಿ ರಿಂಗ್ಸ್ ಸೇರಿಸದೆ ಬಾವಿ ಬಿದ್ದು ಹೋಗಿದೆ, ತಾವು ಒಂದು ಗ್ರಾಮಕ್ಕೆ ಒಂದು ಸರ್ಕಾರಿ ಬಾವಿಯನ್ನು ಕೊಡುವುದು, ಎರಡನೆಯ ಬಾವಿಯನ್ನು ಕೊಡುವ ಪ್ರಶ್ನೆ ಬರುವುದಿಲ್ಲ ಎಂದು ಈ ರೀತಿ ಬಾವಿಗಳನ್ನು ಮಾಡಿದ ಲೆಕ್ಕವನ್ನು ಇಟ್ಟುಕೊಂಡು ಹೇಳುತ್ತೀರಿ. ಆದರೆ ಇವತ್ತು ಅಲ್ಲಿ ಬಾವಿ ರಿಂಗ್ಸ್ ಇಲ್ಲದೆ ಕುಸಿದು ಬಿದ್ದು ಹೋಗಿದೆ. ಆ ಹೊತ್ತಿನಲ್ಲಿ ಸರ್ಕಾರದವರು ಬೇರೆ ಕಾನೂನನ್ನು ಮಾಡುವುದು ಒಳ್ಳೆಯದು. ಇಂಥ ವಿಷಯದಲ್ಲಿ ತಾಲ್ಲೂಕು ಬೋರ್ಡಿನವರಿಗೆ ಅಧಿಕಾರ ಕೊಡಬೇಕು. ಅವರಿಗೆ ಮತ್ತೊಂದು ಬಾವಿಯನ್ನು ತೋಡುವುದಕ್ಕೆ ಅವಕಾಶವಿರಬೇಕು, ಬಾವಿ ತೋಡುವುದು ಮುಖ್ಯವಲ್ಲ, ನೀರು ಬರುವಂತೆ ಮಾಡಬೇಕು. ಈ ರೀತಿ ಕಾನೂನು ಮಾರ್ಪಾಟು ಮಾಡಬೇಕು, ಜೊತೆಗೆ ಹಳೆಯ ಬಾವಿಗಳನ್ನು ಆಳಮಾಡುವುದಕ್ಕೆ ತಾವು ಆದೇಶ ಕೊಡಬೇಕು. ಇರತಕ್ಕ ಬಾವಿಗಳಲ್ಲಿ ನೀರು ಸಿಕ್ಕುವುದಿಲ್ಲ. ಆದ್ದರಿಂದ ಹಳೆಯ ಬಾವಿಗಳನ್ನು ಆಳಮಾಡುವುದು ಒಳ್ಳೆಯದು ಎಂದು ನನ್ನ ಸಲಹೆಯನ್ನು ತಮ್ಮ ಮುಂದೆ ಇಡುತ್ತೇನೆ.

ಇನ್ನು ತಾಲ್ಲೂಕು ಬೋರ್ಡುಗಳ ಚುನಾವಣೆಗಳ ಬಗ್ಗೆ, ತಾವು ಬರಗಾಲ ಬಂತು ಚುನಾವಣೆಗಳನ್ನು ಮಾಡುವುದಕ್ಕೆ ನಮ್ಮಿಂದ ಆಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಈಗಲಾದರೂ ಹೇಳಿ, ಮಳೆಗಾಲ ಬರುತ್ತಿದೆ. ಎಲ್ಲಾ ಭಾಗದಲ್ಲಿಯೂ ಮಳೆ ಸಮೃದ್ಧಿಯಾಗಿ ಬೀಳುವುದಿಲ್ಲ, ಆದರೂ ಕೂಡ ಚುನಾವಣೆಯನ್ನು ಮಾಡುವುದನ್ನು ಈ ರೀತಿ ದಬ್ಬಿಕೊಂಡು ಹೋಗುವುದಕ್ಕೆ ಆಗುವುದಿಲ್ಲ, ಅದ್ದರಿಂದ ಇಂಥ ದಿವಸ ಚುನಾವಣೆ ಮಾಡುತ್ತೇವೆಂದು. ಈ ಕಾರಣಗಳಿಂದ ಪ್ರತಿ ತಾಲ್ಲೂಕು ಬೋರ್ಡಿನ ಅಧಿಕಾರವನ್ನು ಸರ್ಕಾರಕ್ಕೆ ತೆಗೆದುಕೊಂಡು ಅಲ್ಲಿ ಒಬ್ಬ ಆಡಳಿತ ಅಧಿಕಾರಿಯನ್ನು, ಅಡ್ಮಿನಿಸ್ಟ್ರೇಟರ್ ಅನ್ನು ನೇಮಕ ಮಾಡತಕ್ಕ ವಿಷಯ ಬಂದಿದೆ. ಇದಕ್ಕೆ ತಾವು ನೇರವಾಗಿ ಉತ್ತರ ಕೊಡಬೇಕು. ಹೀಗೆ ಮಾಡುವುದಕ್ಕೆ ತಾವು ಹೊರಟರೆ, ನನ್ನ ಪ್ರಕಾರ ಪ್ರಜಾಪ್ರಭುತ್ವದ ಕೊಲೆಯಾಗುತ್ತದೆ; ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಈಗ ತಾಲ್ಲೂಕು ಬೋರ್ಡು ಮಂಡಲಿಗಳು ಏನು ಇವೆ, ಅವುಗಳ ಅವಧಿಯನ್ನು ಮುಂದುವರಿಸುವುದಕ್ಕೆ ಕಾನೂನು ಇದ್ದಾಗ ಮುಂದುವರಿಸಲಿಕ್ಕೆ ಏನೂ ತಪ್ಪಾಗುವುದಿಲ್ಲ. ಅಲ್ಲಿ ಜನತಾ ಪ್ರತಿನಿಧಿಯನ್ನು ಇಟ್ಟುವ ಮುಂದೆ ಮಳೆಗಾಲ ಕಳೆದ ಕೂಡಲೇ, ಚುನಾವಣೆಗಳನ್ನು ಮಾಡುವುದಕ್ಕೆ ಆದಷ್ಟು ಶೀಘ್ರವಾಗಿ, ಇಂಥ ತಿಂಗಳಲ್ಲಿ ಮಾಡುತ್ತೇವೆ ಎನ್ನುವ ಖಚಿತವಾದ ಭರವಸೆಯನ್ನು ಕೊಡಬೇಕು ಎಂದು ನನ್ನ ಸಲಹೆಯನ್ನು ಸರ್ಕಾರದ ಮುಂದೆ ಇಡುತ್ತೇನೆ.

ಪಂಚಾಯತಿಯ ವಿಷಯದಲ್ಲಿ ಹೇಳುವುದಾದರೆ, ಅಕ್ವಿಜಿಷನ್ ಆಫ್ ಲ್ಯಾಂಡ್ ಬಗ್ಗೆ ಗ್ರಾಮೀಣ ಪ್ರದೇಶದಲ್ಲಿ ಬಹಳ ತೊಂದರೆಯಾಗಿದೆ. ಮನೆ ಕಟ್ಟುವುದಕ್ಕೆ ಆಯಾ ಪಂಚಾಯತಿಗಳು ರೆಸಲ್ಯೂಷನ್ ಅನ್ನು ಒಂದಲ್ಲ. ಎರಡಲ್ಲ, ಹತ್ತಾರು ಬಾರಿ ಮಾಡಿ ಕಳುಹಿಸಿದರೂ ಕೂಡ ಅಸಿಸ್ಟೆಂಟ್ ಕಮೀಷನರ್ ಅವರು ನಾವು ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ಪ್ರೊಸೀಜರ್ ಅನ್ನು ಫಾಲೋ ಮಾಡಬೇಕು ಎಂದು ಹೇಳುತ್ತಾರೆ. ಇದು ಬಹಳ ವಿಸ್ತಾರವಾದ ಪ್ರೊಸೀಜರ್, ಇದನ್ನು ಸುಲಭ ಮಾಡಬೇಕು. ಮತ್ತು ಎಷ್ಟು ತಡವಾದರೂ 15 ದಿವಸ ಅಥವಾ ಒಂದು ತಿಂಗಳಿಗಿಂತ ಜಾಸ್ತಿ ತಡವಾಗಬಾರದು. ಅದ್ದರಿಂದ ಈ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮೊಟ್ಟಮೊದಲು ತಾವು ಪಂಚಾಯತಿಗೆ ಹೆಚ್ಚಿನ ಅಧಿಕಾರವನ್ನು ಕೊಡಿ, ತಾಲ್ಲೂಕು ಬೋರ್ಡಿಗೆ ಕೊಡಿ, ಅದಕ್ಕೋಸ್ಕರ ನಾನು ಹೇಳಿದೆ, ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎಂದು. ಈ ರೀತಿ ಅಧಿಕಾರ ಹಂಚಿದರೆ ಪ್ರಜಾಪ್ರಭುತ್ವದ ಬೆಳವಣಿಗೆಯಾಗುತ್ತದೆ. ಒಬೀರಾಯನ ಕಾಲದ ಕಾನೂನನ್ನು ತೋರಿಸಿ, ಒಂದು ಕಡೆ ಪಂಚಾಯತಿಗಳಿಗೆ ಒಂದೆರಡು ಸ್ಥಾನಮಾನ ಕೊಟ್ಟು ಉಳಿದಿದ್ದೆಲ್ಲವನ್ನೂ ತಮ್ಮಲ್ಲೇ ಇಟ್ಟುಕೊಂಡು, ತಾಲ್ಲೂಕು ಬೋರ್ಡಿನವರು, ಪಂಚಾಯತಿಗಳವರು ಬೆಂಗಳೂರಿಗೆ ಬರುವಂತೆ ಮಾಡಿದರೆ ಹೇಗೆ ಎಂದು ಇದನ್ನು ತಮ್ಮ ಮುಂದೆ ಇಡುತ್ತೇನೆ. ದಯಮಾಡಿ ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ಮತ್ತು ತಾಲ್ಲೂಕು ಬೋರ್ಡು ಮತ್ತು ಪಂಚಾಯತಿಗಳಿಗೆ ಅಧಿಕಾರ ವಿಕೇಂದ್ರೀಕರಣವಾಗಬೇಕು. ಆಗ ಮಾತ್ರ ಈ ಪ್ರಜಾಪ್ರಭುತ್ವದ ಬೆಳವಣಿಗೆಯಾಗಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಹರಿಜನರಿಗೆ ಮನೆ ಕಟ್ಟುವುದಕ್ಕೆ ಕೆಲವು ಸಾರಿ ಅವರಿಗೆ 30 ಅಡಿ ಅಗಲ 40 ಅಡಿ ಉದ್ದ ಇರುವ ಸೈಟುಗಳನ್ನು ಮಾಡಿದ್ದಾರೆ. 1973ರ ಆಗಸ್ಟ್‌ನಲ್ಲಿ 35 ಲ ಸೈಟುಗಳನ್ನು ಕೊಡುತ್ತೇವೆಂದು ಹೇಳಿದರು, ಆದೂ ಟೈಂ ಮೀರಿ ಹೋಯಿತು. ಸರ್ಕಾರದ ಆದೇಶವನ್ನು ಅಧಿಕಾರಿಗಳು ಪರಿಪಾಲನೆ ಮಾಡಿಲ್ಲ. ಈಗ 40 ಅಡಿ ಅಗಲ 60 ಅಡಿ ಉದ್ದದ ಸೈಟುಗಳನ್ನು ಮಾಡಿದ್ದಾರೆ. ನಿಜವಾಗಲೂ ಒಬ್ಬ

ವ್ಯವಸಾಯಗಾರರಿಗೆ ಎಷ್ಟು ಜಾಗ ಬೇಕಾಗುತ್ತದೆ ಎಂದರೆ, ಅವನಿಗೆ ವಾಸದ ಮನೆಬೇಕು ದನವಿನ ಕೊಟ್ಟಿಗೆ ಬೇಕು. ತಿಪ್ಪೆಗುಂಡಿಗೆ ಬೇಕು, ಹುಲ್ಲು ಬವಣಿಗೆ ಬೇಕು, ಕಣಕ್ಕೆ ಜಾಗ ಬೇಕು, ಹೀಗೆ ಹತ್ತಾರು ಕೆಲಸಕ್ಕೆ ಜಾಗ ಅವನಿಗೆ ಬೇಕಾಗುತ್ತದೆ. ಬಾಂಬೆ ಫ್ಯಾಷನ್ ಸಿಸ್ಟಂ ತರಹ ನೋಡಿಕೊಂಡು 30—40, 40–60, ಅಡಿಗಳ ಸೈಟನ್ನು ಮಾಡುವುದು ಸರಿಯಲ್ಲ. ಸುಮಾರು ಅವನಿಗೆ 100–200 ಅಡಿಗಳ ಸೈಟು ಬೇಕು. ನೀವುಗಳೂ ಸಹ ಇದಕ್ಕಿಂತ ಕಡಿಮೆ ಜಾಗದ ಸೈಟುಗಳಲ್ಲಿ ವಾಸ ಮಾಡುತ್ತಿಲ್ಲ. ಬಡವರಿಗೆ, ವ್ಯವಸಾಯಗಾರರಿಗೆ ನಾನು ಮೇಲೆ ಹೇಳಿದಷ್ಟು ಮಿನಿಮಂ ಜಾಗ ಬೇಕು ಎಂದು ನನಗೆ ಅನ್ನಿಸುತ್ತದೆ. 100 ಅಡಿ ಅಗಲ 200 ಅಡಿ ಉದ್ದ ಬೇಕಾಗುತ್ತದೆ, ದಯ ಮಾಡಿ ಈ ವಿಷಯವನ್ನು ವಿಮರ್ಶೆಮಾಡಿ ಏಕೆಕ್ಕೆಂದರೆ ಮೈಸೂರು ರಾಜ್ಯದಲ್ಲಿ ಜಾಗ ಇರುವ ಕಡೆ ರೈತರಿಗೆ ಅನುಕೂಲವಾಗಲಿ ಎಂದು ಕಾನೂನು ತಿದ್ದುಪಡಿ ಮಾಡಿ ಜನರಿಗೆ ಉಪಯೋಗ ಮಾಡಿಕೊಡುತ್ತಾರೆಂದು ನಂಬಿದ್ದೇನೆ.

ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಮ್ ಇದರ ಬಗ್ಗೆ ಒಂದು ಸಾರಿ ಈ ಸದನದಲ್ಲಿ ಪ್ರಶ್ನೆ ಹಾಕಿದ್ದೇನೆ. ಯೂನಿಸೆಫ್‌ನಿಂದ ಎಷ್ಟು ಕೋಟಿ ರೂಪಾಯಿ ಬರುತ್ತದೆ? ಸೆಂಟ್ರಲ್ ಗೌರ್ನಮೆಂಟ್ ಕೋಟಾ ಎಷ್ಟು ಬರುತ್ತದೆ? ಸ್ಟೇಟ್ ಗೌರ್ನಮೆಂಟ್ ಕೋಟ ಕೆಲವು ಪರ್ಸೆಂಟೇಜ್ ಹಣವನ್ನು ಇದಕ್ಕೆ ಹಾಕಿದ್ದಾರೆ. ಅದು ನಿಜ ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಮ್ ಸಫಲ ಮಾಡುವುದಕ್ಕೆ ಈ ಅಧಿಕಾರವನ್ನು ನೀವು ಏನು ಕೊಟ್ಟಿದ್ದೀರಿ ಅದನ್ನು ಸಂಪೂರ್ಣವಾಗಿ ದುರುಪಯೋಗಮಾಡಿಕೊಂಡಿದ್ದಾರೆ. ಈ ಪ್ರೋಗ್ರಾಮ್ ಸಂಪೂರ್ಣ ಸಫಲತೆ ಆಗಬೇಕು ಎನ್ನುವ ಆಸೆ ಇದ್ದರೆ ದಯಮಾಡಿ ಬೇರೆ ಯೋಜನೆ ಮಾಡಬೇಕು ಮತ್ತು ಅದನ್ನು ಜಾರಿಗೆ ಕೊಡುವುದಕ್ಕೆ ಬೇರೆ ಏಜೆನ್ಸಿ ತಾವು ಮಾಡದೆ ಇದ್ದರೆ ಅದರ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಯೂನಿಸೆಫ್‌ನವರು ಹಲವಾರು ಕೋಟಿ ರೂಪಾಯಿಗಳು ಹಿಂದೆ ಕೊಟ್ಟಿದ್ದಾರೆ, ನಾಲ್ಕು ತಿಂಗಳ ಫ್ಯೂಚರ್ ಪ್ಲಾನ್‌ಗೆ ಎಷ್ಟು ಕೊಟ್ಟಿದ್ದಾರೆ ಎಂಬುದು ಗೊತ್ತಿದೆ. ಮುಂದೆ ಕೊಡುತ್ತಾರೆ. ಆದರೆ ಅದು ಸಂಪೂರ್ಣ ದುರುಪಯೋಗವಾಗದೆ ಸದುಪಯೋಗ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡುತ್ತೀರೆಂದು ನಾನು ನಂಬಿದ್ದೇನೆ. ಜೊತೆಗೆ ನ್ಯೂಟ್ರಿಷನ್ ಪ್ರೋಗ್ರಾಂ ಮತ್ತು ಫೀಡಿಂಗ್ ಪ್ರೋಗ್ರಾಂ ಎರಡು ಕೂಡ ಮಹಿಳಾ ಮಂಡಲಿಗಳು ನಡೆಸುತ್ತೇವೆಂದು ಹೇಳಿದ್ದೀರಿ, ಮಹಿಳಾ ಮಂಡಲಿಗಳು ಮೇಲೆ ಬರಬೇಕು. ಇಲ್ಲಿ ಎನ್ನುವ ವಾದ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಫೀಡಿಂಗ್ ಪ್ರೋಗ್ರಾಂ ಮತ್ತು ನ್ಯೂಟ್ರಿಷನ್ ಪ್ರೋಗ್ರಾಂ ಇವು ಎರಡು ಪ್ರೋಗ್ರಾಂಗಳನ್ನು ಸರ್ಕಾರ ಸ್ಯಾಂಕ್ಷನ್ ಮಾಡಿದೆ. ಅದನ್ನು ಮಂಡಲಿಗಳು ನಡೆಸುತ್ತಾ ಇಲ್ಲಿ ಅವು ಕೂಡ ಹಾಳು ಆಗಿವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಮಂಡ್ಯಾಕ್ಕೆ ಹೋದಾಗ ನೋಡಿದೆವು, ಗ್ರಾಮ ಸೇವಕರ ಟ್ರೈನಿಂಗ್ ನೋಡಿದ್ದೇವೆ, ಎಷ್ಟು ಬೇಕು ಅಷ್ಟು ಅನುಕೂಲ ಅವರ ಹತ್ತಿರವಿಲ್ಲ. ಮಹಿಳಾಮಂಡಲಿಗಳನ್ನು ಪ್ರಾರಂಭದಿಂದ ತಯಾರು ಮಾಡುವುದನ್ನು ನಾನು ನೋಡಿದೆ. ಇದಕ್ಕೆಲ್ಲಾ ಬೇರೆ ಯೋಜನೆ ಹಾಕದಿದ್ದರೆ ಸರಿಯಾದ ಕೆಲಸ ಮಾಡಲಿಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸೋಷಿಯಲ್ ವೇಲ್ ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಇನ್ಸ್‌ಪೆಕ್ಟರ್ ಆಫ್ ಸರ್ಟಿಫೈಡ್ ಸ್ಕೂಲ್ಸ್ ಅಧಿಕಾರಿಗಳ ವಿಚಾರದಲ್ಲಿ ಒಂದೆರಡು ಮಾತು ಹೇಳಬೇಕು. ಡೈರೆಕ್ಟರ್ ಆದವರು ಅವರು ಎಕ್ಸ್‌ಆಫಿಷಿಯೋ ಡೈರೆಕ್ಟರ್ ಆಗಿ ಸಂಪೂರ್ಣ ಅದ್ವಾನವಾಗಿದೆ, ಬೇರೆ ಆಫೀಸರ್ಸ್ ನಂಬಿಕೊಳ್ಳಬೇಕು ಡೈರೆಕ್ಟರ್ ತಮ್ಮ ಕಾಲ ವಿನಿಯೋಗ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಏನು ಅನ್ಯಾಯವಾಗಿದೆ ಎಂದು ಹೇಳುತ್ತೇನೆ. 2—3 ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ಇವೊತ್ತು ಸರ್ಟಿಫೈಡ್ ಸ್ಕೂಲು ಇಲಾಖೆಗೆ ಸಂಬಂಧಪಟ್ಟ ವಿಷಯದಲ್ಲಿ ಟೆಂಡರ್ ಫೈಲ್ಸ್ ಕಂಪ್ಲೀಟ್ ಆಗಿ ಟ್ಯಾಂಪರ್ ಆಗಿದೆ. ಇದೇ ಆಫೀಸಿನಲ್ಲಿ ಬೆಂಗಳೂರು ಮತ್ತು ಕಡೂರಿನೂ ಏನು ಅನ್ಯಾಯ ನಡೆದಿದೆ ಎಂದರೆ ಬೇಕಾದರೆ ಅಧಿಕಾರಿಗಳ ಹೆಸರನ್ನು ಹೇಳಬಹುದು. ಇಲ್ಲಿ ಟೆಂಡರ್ ಫೈಲ್ಸ್ ಟ್ಯಾಂಪರ್ ಮಾಡಿ ಅದರಲ್ಲಿ ತಪ್ಪು ತಪ್ಪು ಬರೆದು ಸಂಪೂರ್ಣ ಹಾಳು ಮಾಡಿ ಇಟ್ಟಿದ್ದಾರೆ. ಇದರ ಬಗ್ಗೆ ಒಬ್ಬರು ಪಾರ್ವತೀಕರ್ ಎಂಬುವರ ಮೇಲೆ ಅಪಾದನೆ ಮಾಡಿದ್ದಾರೆ. ಇವರು ಮೊದಲು ಬರೀ ಸೂಪರಿಂಟೆಂಡೆಂಟ್ ಆಫ್ ಸರ್ಟಿಫೈಡ್ ಸ್ಕೂಲ್ಸ್, ಬೆಂಗಳೂರು ಆಗಿ ಇದ್ದರು. ಇವರು ಗ್ರಾಜುಯೆಟ್ ಏನೂ ಅಲ್ಲ. ಇವರು ಬೇರು ಬಿಟ್ಟುಕೊಂಡು ಬಿಟ್ಟಿದ್ದಾರೆ. ಇವರ ಕೈಕೆಳಗೆ ಕೆಲಸ ಮಾಡುವ ಒಂದೆರಡು ಜನ ಸೇರಿಕೊಂಡು ಅಂದರೆ ಶೇಷಗಿರಿ ಕ್ಲಾರ್ಕ್, ಮತ್ತೊಬ್ಬರು ಕುಲಕರ್ಣಿ ಇವರು ಸೇರಿಕೊಂಡು ಟೆಂಡರ್ ಫೈಲ್ಸ್ ಸಂಪೂರ್ಣ ಟ್ಯಾಂಪರ್‌ಮಾಡಿ ತಪ್ಪು ತಪ್ಪು ತಿದ್ದಿಹಾಕಿದ್ದಾರೆ ಹಾಳು ಮಾಡಿಬಿಟ್ಟಿದ್ದಾರೆ. ಈ ಪಾರ್ವತಿಕರ್ ಮೇಲೆ ಮುದ್ದೇಬಿಹಾಳ್ ಎಂದು ಒಬ್ಬ

(ಶ್ರೀ ಎಸ್. ಬಂಗಾರಪ್ಪ)

ಎನ್‌ಕ್ವೈರಿ ಆಫೀಸರ್ ಹಾಕಿದರು. ಇವರು ಎರಡು ವರ್ಷಗಳು ಎನ್‌ಕ್ವೈರಿ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ರಿಪೋರ್ಟ್ ಹೈಯರ್ ಆಫೀಸರಿಗೆ ಕೊಟ್ಟ ಮೇಲೆ ಈ ವಿಷಯದ ಬಗ್ಗೆ 5 ಜನ ಎಂ. ಎಲ್. ಎ.ಗಳು ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ, ಪತ್ರ ಬರೆದರೂ ಕೂಡ ಆ ವಿಷಯದಲ್ಲಿ ಏನೂ ಆಗಿಲ್ಲ ಹಾಗೇ ಇದೆ. ಫರ್ದರ್ ಎನ್‌ಕ್ವೈರಿ ಮಾಡಬೇಕೆಂದು ಆಕ್ಷನ್ ತೆಗೆದುಕೊಳ್ಳದೆ ಇದನ್ನು ಮಿಸಸ್ ದೇವಿ ಎಂಬುವವರಿಗೆ ಎನ್‌ಕ್ವೈರಿ ಮಾಡಲಿಕ್ಕೆ ಹಾಕಿದರು. ಅಖೈರಿಗೆ ಪಾರ್ವತೀಕರ್ ಅವರನ್ನು ಡಿಸ್‌ಮಿಸ್ ಮಾಡಿ ಎಂದು ಕೇಳಿದಾಗ ಕೇಸ್ ಪ್ರೂವ್ ಆಗಿದೆ, ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಬರೆದರೂ ಕೂಡ ತಮ್ಮ ಇಲಾಖೆ ಅಧಿಕಾರಿಗಳು ಏನು ಕ್ರಮ ತೆಗೆದುಕೊಳ್ಳಲಿಲ್ಲ. ಅದರ ಬದಲು ಇನ್‌ಕ್ರಿಮೆಂಟ್ ಸ್ಟಾಪ್ ಮಾಡಿದರು. ಇಷ್ಟಾದರೂ ಕೂಡ ಟೆಂಡರ್ ಫೈಲ್ ಟ್ಯಾಂಪರ್ ಮಾಡಿ ತಪ್ಪು ತಪ್ಪು ಬರೆದು ಹಾಳು ಮಾಡಿದರೂ ಕೂಡ ಒಂದೆರಡು ಇನ್‌ಕ್ರಿಮೆಂಟ್ ಒಬ್ಬರಿಗೆ ಸ್ಟಾಪ್ ಮಾಡಿದರು ಇದು 6—7 ವರ್ಷಗಳಿಂದ ಹಾಗೇ ಇದೆ. ಸರ್ಕಾರ ಇದರ ಬಗ್ಗೆ ಯಾವ ರೀತಿಯ ಉತ್ತರ ಕೊಡದೆ ಇದೆ. ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕಾನ್‌ಫಿಡಿಯೆನ್ಸಿಲ್ ರಿಪೋರ್ಟ್ಸ್ ಕೂಡ ಸಾಕಷ್ಟು ಪ್ರಮಾಣದಲ್ಲಿ ಅದೇ ಆಫೀಸಿನಲ್ಲಿ ಟ್ಯಾಂಪರ್ ಆಗಿದೆ. ಕಾನ್‌ಫಿಡಿಯೆನ್ಸಿಯಲ್ ರಿಪೋರ್ಟ್ ಅವರ ಕೈಗೆ ಬಂತು ಪಾರ್ವತೀಕರ್ ಅಲ್ಲಿ ಸೇರಿಕೊಂಡು ಬೇರೆ ಬೇರೆ ಅಫೀಸರ್ಸ್ ಅವರಿಗೆ ಕಾನ್‌ಫಿಡೆನ್ಸಿಯಲ್ ರಿಪೋರ್ಟನ್ನು ವಿರುದ್ಧವಾಗಿ ತಯಾರು ಮಾಡಿ ಸಂಪೂರ್ಣವಾಗಿ ಹಾಳುಮಾಡಿದ್ದಾರೆ. ಅವರನ್ನು ಹಾಳುಮಾಡುವುದಕ್ಕೆ ದಾರಿ ಮಾಡಿ ಇಟ್ಟಿದ್ದಾರೆ. ಇನ್ನು ಈ ಮುದ್ದೇಬಿಹಾಳ್ ಆಫೀಸರ್ ಏನು ಇದ್ದಾರೆ ಅವರ ಮಗಳಿಗೆ ಅಂದರೆ ಶ್ರೀಮತಿ ಕುಮಾರಿ ಹೇಮಾವತಿ ಇವರನ್ನು ಅಪಾಯಿಂಟ್ ಮಾಡಿಸಿದ್ದಾರೆ. ಪ್ರೊಬೇಷನ್ ಆಫೀಸರ್ ಆಗಿ ನೇಮಕ ಮಾಡುವುದಕ್ಕೆ ತಮ್ಮ ಅಧಿಕಾರವನ್ನು ಉಪಯೋಗಿಸಿ ಕೊಂಡಿದ್ದಾರೆ; ಇವರ ಮನೆತನವೇ ಇಲಾಖೆಗೆ ಬಂದು ಚಲಾವಣೆಯಾಗಬೇಕು. ಉಳಿದವರಿಗೆ ಅವಕಾಶ ಇರಬಾರದು ಎಂದು ಮಾಡಿದ್ದಾರೆ. ಅವರಿಗೆ 5-4-1973 ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಬರೆದರೆ ಬಳ್ಳಾರಿಯಲ್ಲಿ ಇವರು 2—4—1973ರಲ್ಲಿ ಇವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಡಿಪಾರ್ಟ್‌ಮೆಂಟ್ ಆರ್ಡರ್ಸ್ 5—4—1973ಕ್ಕೆ ತಲುಪಬೇಕಾದರೆ ಮೊದಲೇ ಕೆಲಸಕ್ಕೆ ತೆಗೆದುಕೊಂಡು ಅಧಿಕಾರದಿಂದ ಇನ್‌ಪ್ಲ್ಯುಯೆನ್ಸ್‌ನಿಂದ ಶ್ರೀ ಮುದ್ದೇಬಿಹಾಳ್ 2—4—1973ಕ್ಕೆ ಡ್ಯೂಟಿ ರಿಪೋರ್ಟ್ ಮಾಡಿಕೊಂಡಿದ್ದಾರೆ. ಅನಂತರ 5-4-1973 ಗೌರ್ನಮೆಂಟ್ ಆರ್ಡರ್ ಬಂದಿದೆ. ಹೀಗೆ ಅಧಿಕಾರ ಸ್ಥಾನಮಾನ ದುರುಪಯೋಗಿಸಿಕೊಂಡಿದ್ದಾರೆ. ಇದರ ವಿಚಾರಣೆ ಸಂಪೂರ್ಣ ಆಗಬೇಕು ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ. ಶ್ರೀಮತಿ ನೀಲವೇಣಿ, ಸೆಕೆಂಡ್ ಡಿವಿಜನ್ ಕ್ಲಾರ್ಕ್ ತೆಗೆದುಕೊಂಡಿದ್ದಾರೆ ಇವರು ಅಸಿಸ್ಟೆಂಟ್ ಮೆಟ್ರಿನ್. ಅಸಿಸ್ಟೆಂಟ್ ಮೆಟ್ರಿನ್ ಆಗಿರತಕ್ಕವರು ಸೆಕೆಂಡ್ ಡಿವಿಜನ್ ಕ್ಲಾರ್ಕ್. ಕಂಪ್ಲೀಟ್ ರೂಲ್ಸ್ ರೆಗ್ಯುಲೇಷನ್ಸ್ ವಾಯಿಲೇಟ್ ಮಾಡಿ ಇವರನ್ನು ಏನು ಮಾಡಿದ್ದಾರೆ ಎಂದರೆ ಲೇಡಿ ಪ್ರೊಬೇಷನ್ ಆಫೀಸರ್ ಆಗಿ ಒಂದೇ ಸಾರಿ ತೆಗೆದುಕೊಂಡು ಬಳ್ಳಾರಿ ಡಿಸ್ಟ್ರಿಕ್ಟಿಗೆ ಪೋಸ್ಟ್ ಮಾಡಿದ್ದಾರೆ. ಇನ್ನು ಡಿ. ಜಿ. ಬಡಗೇರಿ ಇವರ ಇನ್‌ಪ್ಲ್ಯುಯೆನ್ಸ್‌ನಿಂದ ಸಂಪೂರ್ಣ ಸಹಾಯ ಮಾಡಿದ್ದಾರೆ ಎನ್ನುವ ವಿಷಯ ಗೊತ್ತಾಗಿದೆ. ಅಸಿಸ್ಟೆಂಟ್ ಮೆಟ್ರಿನ್ ಆಗಿದ್ದವರನ್ನು ತೆಗೆದುಕೊಂಡು ಪ್ರೊಬೇಷನ್ ಆಫೀಸರ್ ಆಗಿ ಹಾಕಿದ್ದಾರೆ. ಈ ವಿಷಯಕ್ಕೂ ಕೂಡ ಸರ್ಕಾರ ಏನು ಉತ್ತರ ಕೊಡುತ್ತಾರೆ ಅದನ್ನು ಸಭೆಗೆ ದಯಮಾಡಿ ತಿಳಿಸಬೇಕು.

ಶ್ರೀ ಮುದ್ದೇಬಿಹಾಳ್ ಇವರದ್ದೆಲ್ಲಾ ಸೇರಿ ಕಾನ್‌ಫಿಡೆನ್ಸಿಯಲ್ ರಿಪೋರ್ಟ್‌ನ್ನು ಟ್ಯಾಂಪರ್ ಮಾಡಿದ್ದಾರೆ. ಮತ್ತು ಮಿಸೆಸ್ ದೇವಿ ಅನ್ನುವವರಿಗೆ ಪ್ರಮೋಷನ್ ಕೊಟ್ಟಿದ್ದಾರೆ ಅನ್ನುವುದು ನಮಗೆ ಗೊತ್ತಾಗಿದೆ.

3-30 P.M.

ಇನ್ನು ಕೊನೆಯದಾಗಿ ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ಶ್ರೀ ಸಾತೇನಹಳ್ಳಿ ಅನ್ನುವ ಒಬ್ಬ ವ್ಯಕ್ತಿ ಏನು ಇದ್ದಾರೋ ಅವರು ಒಬ್ಬರು ಆಫೀಸರು ಆಗಿ ಹಾಸನದಲ್ಲಿ ಇದ್ದರು. ಅವರು ಸೂಪರಿಂಟೆಂಡೆಂಟ್ ಆಗಿ ಇದ್ದರು. ಅವರು ಮತ್ತು ಕಂಟ್ರಾಕ್ಟರೂ ಇಬ್ಬರೂ ಜೊತೆ ಸೇರಿ ಪರ್ಸನಲ್ ಬೆನಿಫಿಟ್ ಮಾಡಿಕೊಂಡಿದ್ದಾರೆ ಎಂದು 7 ವರ್ಷದ ಹಿಂದೆಯೇ ಅದರ ಎನ್‌ಕ್ವೈರಿ ಸ್ಟಾರ್ಟ್ ಆಗಿ ಅದನ್ನು ವಿಜಿಲೆನ್ಸ್ ಕಮಿಷನರ್‌ಗೆ ರೆಫರ್ ಮಾಡಿ ಅವರಿಂದ ಕಾನ್‌ಫಿಡೆನ್

ಯೆಲ್ ರಿಪೋರ್ಟ್ ಕೂಡ ಬಂದಿದೆ ಎಂದು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಯಾರು ಯಾರು ಹೇಳಿಕೆ ಕೊಟ್ಟಿದ್ದಾರೋ ಅವರ ಮೇಲೆಲ್ಲಾ ಬಿಗು ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಅಧ್ಯಕ್ಷರು.—ತಾವು ಈಗಾಗಲೇ ಬೇಕಾದಷ್ಟು ಉದಾಹರಣೆ ಕೊಟ್ಟಿದ್ದೀರಿ. ಇನ್ನು ಈ ಡಿಮ್ಯಾಂಡ್ ಬಗ್ಗೆ ಶ್ರೀಮಾನ್ ಅರುಮುಗಂರವರು ಇನ್ನೂ ಅನೇಕ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಮತ್ತು ಈ ಡಿಮ್ಯಾಂಡ್ ಬಗ್ಗೆ 6 ಗಂಟೆಗೆ ಉತ್ತರ ಪ್ರಾರಂಭ ಮಾಡಬೇಕಾಗಿದೆ. ಆದುದರಿಂದ ತಾವು ಜಾಗ್ರತೆಯಾಗಿ ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಅಧ್ಯಕ್ಷರ ಗಮನಕ್ಕೆ ಎಷ್ಟೋ ವಿಷಯಗಳನ್ನು ತಂದಿದ್ದೇನೆ. ಇನ್ನೂ ಎಷ್ಟೋ ವಿಷಯಗಳು ಅವರ ಗಮನಕ್ಕೆ ತರುವುದು ಇದ್ದರೂ ಕೂಡ ಅನೇಕ ನಮ್ಮ ಮಾನ್ಯ ಮಿತ್ರರು ಮಾತನಾಡುತ್ತಾರೆಂದು ತಿಳಿದು ಬಂದಿರುವುದರಿಂದ ನಾನು ಹೆಚ್ಚಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಅರುಮುಗಂರವರು ಈ ಬಗ್ಗೆ ಮಾತನಾಡುತ್ತಾರೆ. ಈಗ ನಾನು ಎಷ್ಟು ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಅದಕ್ಕೆ ದಯವಿಟ್ಟು ನೇರವಾದ ಉತ್ತರ ಕೊಡುತ್ತಾರೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಮತ್ತು ನಾನು ಕೊಟ್ಟಿರತಕ್ಕಂಥ ಸಲಹೆಗಳು ಏನು ಇದೆಯೋ ಅದಕ್ಕೆ ಸರಿಯಾದ ಉತ್ತರ ಕೊಡುತ್ತಾರೆ ಎನ್ನುವ ನಂಬಿಕೆ ನನಗೆ ಇರುವುದರಿಂದ ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

† ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್ (ಸಿರ್ಸಿ).—ಸನ್ಮಾನ್ಯ ಉಪಾಧ್ಯಕ್ಷರೇ ಈದಿನ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಗಳವರು ಡಿಮ್ಯಾಂಡ್ ನಂಬರ್. 21, 25, 27ಕ್ಕೆ ಸೇರಿದಂತೆ ಸುಮಾರು 26-27 ಕೋಟಿ ರೂಪಾಯಿಗಳ ಮೂರು ಡಿಮ್ಯಾಂಡ್‌ನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದನ್ನು ನಾನು ಪುಷ್ಟೀಕರಿಸುತ್ತಾ ಈ ಸಂದರ್ಭದಲ್ಲಿ ನಾನು ನಾಲ್ಕಾರು ಸಲಹೆಗಳನ್ನು ಕೊಡುವುದು ಸೂಕ್ತ ಎಂದು ನನಗೆ ತೋರುತ್ತದೆ. ಏತಕ್ಕೆಂದರೆ ಬಡತನದ ನಿವಾರಣೆ, ಸಾಮಾಜಿಕ ನ್ಯಾಯ ಇವುಗಳನ್ನು ಒದಗಿಸಿ ಕೊಡತಕ್ಕಂಥಾ ಸಿದ್ಧಾಂತಕ್ಕೆ ಒಪ್ಪಿಕೊಂಡಿದ್ದೇವೆ. ಆದುದರಿಂದ ಈ ಸರ್ಕಾರದಲ್ಲಿ ಈ 2 ಬಡತನವನ್ನೂ ನಿವಾರಣೆ ಮಾಡುತ್ತೇವೆ ಎನ್ನತಕ್ಕಂಥಾದ್ದನ್ನು ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಿ ಕೊಡುತ್ತೇವೆ. ಎನ್ನತಕ್ಕಂಥಾದ್ದನ್ನು ನೋಡುವುದಾದರೆ ಈ ಸಂದರ್ಭದಲ್ಲಿ ಗ್ರಾಮಾಭಿವೃದ್ಧಿ, ಮತ್ತು ಸಾಮಾಜಿಕ ವಿಕಾಸ ಅಭಿವೃದ್ಧಿ ಬಗ್ಗೆ ನಾವು ಕೆಲವು ಅಂಶಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಸಲಹೆಗಳನ್ನು ಮಾನ್ಯ ಮಂತ್ರಿಗಳು ಕಾರ್ಯಗತ ಮಾಡಬೇಕು ಎಂತ ಹೇಳುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು 25 ವರ್ಷ ಕಳೆದರೂ ಕೂಡ ಈ ಒಂದು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಕೊಡುತ್ತಿರುವ ವಿದ್ಯಾಭ್ಯಾಸವಾಗಲಿ ಅಥವಾ ಅವರ ಅಕ್ಷರತೆಯಾಗಲಿ ನೋಡಿದರೆ ಕೇವಲ ಶೇಕಡ 12 ಇದೆ. ನಮ್ಮ ರಾಜ್ಯದ 1971ನೇ ಇಸವಿಯ ಜನಸಂಖ್ಯೆ ನೋಡಿದರೆ 2 ಕೋಟಿ 98 ಲಕ್ಷ ಜನ ಇದ್ದಾರೆ. ಅಂದರೆ ಐವರಿಗೆ ಒಬ್ಬ ಭಾರತೀಯ ಹೇಗೋ ಹಾಗೆ ನಮ್ಮ ಕರ್ನಾಟಕದಲ್ಲಿ ಐವರಿಗೆ ಒಬ್ಬ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದ ಜನ ಇದ್ದಾರೆ. ಅವರ ಮುಂದಿನ ಆರ್ಥಿಕ ಮತ್ತು ಸಾಮಾಜಿಕ ಏಳಿಗೆಗೆ ನಾವು ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಏತಕ್ಕೆಂದರೆ ಅವರು ನಾನಾ ವಿಧದಲ್ಲಿ ದುಡಿಮೆ ಮಾಡತಕ್ಕಂಥ ಶ್ರಮಜೀವಿಗಳು. 1961ರಲ್ಲಿ 25 ಪರ್ಸೆಂಟ್ ಸ್ಟೇಟ್ ಲಿಟ್ರಸಿ ಇತ್ತು. ಅದರಲ್ಲಿ 9 ಪರ್ಸೆಂಟ್ ಷೆಡ್ಯೂಲ್ಡ ಕ್ಯಾಸ್ಟ್ ಮತ್ತು 8 ಪರ್ಸೆಂಟ್ ಷೆಡ್ಯೂಲ್ ಟ್ರೈಬ್ ಇತ್ತು. 1971 ರಲ್ಲಿ ಅದು 31'5 ಕ್ಕೆ ಏರಿತು. ಇದರಲ್ಲಿ ಷೆಡ್ಯೂಲ್ ಕ್ಯಾಸ್ಟ್ ಲಿಟ್ರಸಿ ಕೇವಲ 12.0 ನಲ್ಲೇ ನಿಂತಿದೆ. ಇದಕ್ಕೆ ಮೂಲ ಕಾರಣ ಏನೆಂದರೆ ಏನೋ ಇದರಲ್ಲಿ ಒಂದು ದೊಡ್ಡ ಲೋಪ ಸರ್ಕಾರದಲ್ಲಿ ನಡೆದು ಹೋಗಿದೆ. ಅದನ್ನು ನಾವು ಈ ಸರ್ಕಾರದಲ್ಲಿ ಸರಿಮಾಡಬೇಕು, ನಮ್ಮ ರಾಜ್ಯದಲ್ಲಿ ವಿಧ್ಯಾಭ್ಯಾಸಕ್ಕೆ ಸುಮಾರು 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದಕ್ಕೆ ಪ್ಲಾನಿಂಗ್ ಡೈರಕ್ಷನ್ ಇದೆ. ಅದು ಏನೆಂದರೆ 18 percent of the Budget should be allocated for the Welfare of the Schedule Castes and Scheduled Tribes ಅಂತ ಇದೆ. ಈ 90 ಕೋಟಿ ರೂಪಾಯಿಗಳಲ್ಲಿ ವಿದ್ಯಾಭ್ಯಾಸದ ಇಲಾಖೆಗೆ 18 ಪರ್ಸೆಂಟ್ ಅಂತ ನಿಗದಿ ಮಾಡಿ ಕಳೆದ 25 ವರ್ಷಗಳಿಂದ ಖರ್ಚು ಮಾಡಿದ್ದಾರೆಯೋ ? ಅಥವಾ ಈ ಸರ್ಕಾರ ಅಧಿಕಾರ ವಹಿಸಿಕೊಂಡು ಒಂದು ವರ್ಷವಾಯಿತು. ಆ ಅವಧಿಯಲ್ಲಾದರೂ ಕೂಡ ಇದನ್ನು ಪರಿಶೀಲನೆ ಮಾಡಿಲ್ಲ. ಅದುದರಿಂದ ಈ ಕಡೆ ಗಮನ ಕೊಟ್ಟು ವಿದ್ಯಾಭ್ಯಾಸದ ಇಲಾಖೆಗೆ ನೀವು ಖರ್ಚು ಮಾಡತಕ್ಕಂಥ 90 ಕೋಟಿ ರೂಪಾಯಿಗಳಲ್ಲಿ 18 ಪರ್ಸೆಂಟ್ ಅಂದರೆ 10-20 ಕೋಟಿ ರೂಪಾಯಿಗಳನ್ನು ನರ್ಸರಿ ಮತ್ತು

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಪ್ರೈಮರಿ ಸ್ಕೂಲುಗಳಿಗೆ ವಿಾಸಲಾಗಿಟ್ಟು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಹರಿಜನ-ಗಿರಿಜನ ಅಂತ ಏನು ಇದ್ದಾರೋ ಅಂಥವರಿಗೆ ಉಚಿತವಾಗಿ ಸ್ಲೇಟು; ಪುಸ್ತಕ, ಬಳಪ ಇವುಗಳನ್ನು ಒದಗಿಸಿ ಕೊಡ್ಟು ಅವರಿಗೆ ಅಕ್ಷರತೆಯನ್ನು ಹೆಚ್ಚಿಸತಕ್ಕಂಥ ಒಂದು ಮಾರ್ಗವನ್ನು ನಾವು ಮಾಡಬೇಕು. ಹಾಗಾದರೆ ನಮ್ಮ ರಾಜ್ಯದ ಹಾಗೂ ನಮ್ಮ ರಾಷ್ಟ್ರದ ಆಕಾಂಕ್ಷೆ ಏನು ಇದೆಯೋ ಅದನ್ನೂ ಕೂಡ ಹೆಚ್ಚಿಸುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಎರಡನೆಯವಾಗಿ ಇನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಗಂಡು ಮತ್ತು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಸ್ಕಾಲರ್‌ಷಿಪ್ ಕೊಡುತ್ತಿದ್ದಾರೆ ಮತ್ತು ಹಾಸ್ಟಲುಗಳನ್ನು ನಡೆಸತಕ್ಕಂಥ ಒಂದು ದೊಡ್ಡ ಜವಾಬ್ದಾರಿಯನ್ನೂ ಕೂಡ ಹೊತ್ತಿದ್ದಾರೆ. ಇದರಲ್ಲಿ ಸಾಮಾಜಿಕ ನ್ಯಾಯಗಳನ್ನು ಪರಿಶೀಲನೆ ಮಾಡುವುದಾಗಲಿ ಇಲ್ಲ. ಅಥವಾ ಇದರಿಂದ ಆಗತಕ್ಕ ಎಕ್ಸ್‌ಪ್ಲಾಯ್‌ಟೇಷನ್ ಹರಾಷ್‌ಮೆಂಟ್ ಮಾಡುವುದನ್ನು ತಡೆಗಟ್ಟಲು ಅದರ ಕಡೆ ಹೆಚ್ಚು ಗಮನ ಕೊಡುತ್ತಾ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿರುವ ಅನೇಕ ಮಕ್ಕಳಿಗೆ ಹಾಸ್ಟಲ್ ಫೆಸಿಲಿಟೀಸ್ ಇಲ್ಲ ಮತ್ತು ನೀವು ಕೊಡತಕ್ಕಂಥ ಸ್ಕಾಲರ್‌ಷಿಪ್ಸ್ ಸರಿಯಾಗಿ ಅವರಿಗೆ ದೊರೆಯುತ್ತಾ ಇಲ್ಲ. ಆದುದರಿಂದ ಸರ್ಕಾರದವರು ಅವರಿಗೆ ಒಂದು ಸಾಮಾಜಿಕ ನ್ಯಾಯವನ್ನು ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ. ಮತ್ತು ಅವರಿಗೆ ಒಂದು ದಾರಿ ದೀಪ ತೋರಿಸಬೇಕು. ಕಗ್ಗತ್ತಲೆಯಲ್ಲಿರತಕ್ಕಂಥ ಜನರಿಗೆ ಒಂದು ಬೆಳಕು ತೋರಿಸಿ ಅವರೆಲ್ಲರನ್ನು ಮನುಷ್ಯರನ್ನಾಗಿ ಮಾಡಬೇಕಾದರೆ ಪ್ರತಿಯೊಬ್ಬರಿಗೂ ಗಂಡಸರಾಗಲಿ ಹೆಂಗಸರಾಗಲಿ ವಿಧ್ಯಾಭ್ಯಾಸ ಕೊಡುವುದು ಅವಶ್ಯಕ ಎಂದು ಹೇಳುತ್ತೇನೆ. Either they should be given Compulsary scholarships or they should be given Hostel facilities. ಮತ್ತು ಈಗ ಪೋಷ್ಟ್ ಮೆಟ್ರಿಕ್ ಕೋರ್ಸ್‌ಗೆ ಏನು ಸ್ಕಾಲರ್‌ಷಿಪ್ ಕೊಡುತ್ತಿದ್ದೀರೋ ಅವರ ದರವನ್ನು ಡಬ್ಬಲ್ ಮಾಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಈಗ ಆಹಾರದ ಪರಿಸ್ಥಿತಿ ನೋಡಿದರೆ, ಈಗ ಕೊಡತಕ್ಕಂಥ ರೇಟು ಸ್ಕಾಲರ್‌ಷಿಪ್ ಕಡಿಮೆ, ಅದನ್ನು ಹೆಚ್ಚಿಸಬೇಕು ಎಂದು ಹೇಳುತ್ತೇನೆ.

ಇನ್ನು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ಹೇಳುತ್ತೇನೆ; ಏತಕ್ಕೆಂದರೆ ರಾಜ್ಯದಲ್ಲಿ ಹೆಣ್ಣುಮಕ್ಕಳ ಎಜುಕೇಷನ್ ಪರ್ಸೆಂಟೇಜ್ ತೆಗೆದುಕೊಂಡರೆ "ಜೀರೋ" ಇರುತ್ತದೆ. ಈಪ್ರೊತ್ತು ಅವರು ಮುಂದುವರೆಯಬೇಕಾದರೆ ಸರ್ವ ವಿಧದಲ್ಲೂ ಅವರಿಗೆ ಸಹಾಯ ಮಾಡಬೇಕು. ಈಗ ಇರತಕ್ಕಂಥ ಸಣ್ಣಪುಟ್ಟ ಹಾಸ್ಟಲುಗಳನ್ನು ರದ್ದು ಮಾಡಿ ಪ್ರತಿಯೊಂದು ಜಿಲ್ಲೆಯಲ್ಲೂ ರೆಸಿಡೆನ್ಸಿಯಲ್ ಹೈಸ್ಕೂಲ್ ಮತ್ತು ಮಿಡಲ್ ಸ್ಕೂಲ್‌ಗಳನ್ನು ತೆರೆಯಬೇಕು. In addition to General Education you must give them Craft Training, Embroidory, Tailoring Music etc, ಅಲ್ಲಿ ಸರಾಸರಿ 200 ಮಕ್ಕಳನ್ನು ಸೇರಿಸಿ ಅವರಿಗೆ ವಿದ್ಯೆಯನ್ನು ಕೊಡಬೇಕು. ಇದಕ್ಕೆ 10 ಲಕ್ಷ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲಾ. ಅವರಿಗೆ ಬಿಲ್ಡಿಂಗ್ ಕಟ್ಟಿಸಿ ಸರಿಯಾದ ವಸತಿ ಸೌಕರ್ಯ ಮಾಡಿಕೊಡಬೇಕು. ಒಂದು ಮನೆಯಲ್ಲಿ ಒಬ್ಬ ಹೆಣ್ಣು ಮಗಳು ವಿದ್ಯಾಂತರಾದರೆ ಇಡೀ ಸಂಸಾರವೇ ವಿದ್ಯಾವಂತರಾಗುತ್ತಾರೆ.

ಅದೇ ಮನೆಯಲ್ಲಿ ಒಬ್ಬ ಗಂಡು ಮಗ ವಿದ್ಯಾವಂತನಾದರೆ ಒಬ್ಬ ವ್ಯಕ್ತಿ ವಿದ್ಯಾವಂತನಾದ ಹಾಗೆ ಆಗುತ್ತದೆ. ಆದುದರಿಂದ ಈ ವಿಷಯವನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಅವಕಾಶ ಮಾಡಿಕೊಡಬೇಕು. ಮತ್ತು ಅವರಿಗೆ ಬಟ್ಟೆಯನ್ನು ಕೊಡುವ ವ್ಯವಸ್ಥೆಯನ್ನೂ ಮಾಡಬೇಕು. ಈಗಿರತಕ್ಕ ಏಡೆಡ್ ಹಾಸ್ಟಲುಗಳನ್ನು ಮತ್ತು ಜನರಲ್ ಹಾಸ್ಟಲುಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ತೆಗೆದುಕೊಂಡು ಅವುಗಳಲ್ಲಿ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡತಕ್ಕ ವ್ಯವಸ್ಥೆ ಮಾಡಬೇಕು. ಜನರಲ್ ಹಾಸ್ಟಲ್‌ಗಳಲ್ಲಿ ಒಂದು ಕೆಲಸ ಮಾಡಿದ್ದಾರೆ. ಷೆಡ್ಯೂಲ್ ಕ್ಯಾಸ್ಟ್ ಹಾಸ್ಟಲ್ ಎನ್ನುವುದನ್ನು ಜನರಲ್ ಹಾಸ್ಟಲ ಎಂದು ಕರೆದ 75 ಪರ್ಸೆಂಟ್ ಶೆಡ್ಯೂಲ್ ಕ್ಯಾಸ್ಟಿನವರಿಗೆ, 25 ಪರ್ಸೆಂಟ್ ಇತರ ಹಿಂದುಳಿದವರಿಗೆ ಸೀಟು ಕೊಡಬೇಕೆಂಬ ತತ್ವವಿದೆ. ಇವರ ಪ್ರಕಾರ 25 ಪರ್ಸೆಂಟ್ ಇತರ ಹಿಂದುಳಿದ ವರ್ಗದವರು ಬಾರದೆ ಇದ್ದರೆ ಅಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮಕ್ಕಳನ್ನು ಸೇರಿಸಿಕೊಳ್ಳುವುದಿಲ್ಲವೆನ್ನುವ ತತ್ವವಿದೆ. ಇದರಿಂದ ಅನೇಕ ನಿಮ್ನವರ್ಗದ ಮಕ್ಕಳಿಗೆ ತೊಂದರೆಯಾಗಿದೆ. ಆದ್ದರಿಂದ ಈ ಪ್ರಮಾಣವೇನಿದೆ ಅದನ್ನು 90 ಪರ್ಸೆಂಟ್ ಷೆಡ್ಯೂಲ್ ಕ್ಯಾಸ್ಟ್‌ವರಿಗೆ ಮತ್ತು 10 ಪರ್ಸೆಂಟ್ ಇತರ ಹಿಂದುಳಿದ ವರ್ಗಗಳಿಗೆ ಎಂದು ಬದಲಾಯಿಸಬೇಕು. ಅಲ್ಲದೆ ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟಲುಗಳಲ್ಲಿ 75 ಪರ್ಸೆಂಟ ಹಿಂದುಳಿದವರಿಗೆ ಮತ್ತು 26 ಪರ್ಸೆಂಟ್ ಷೆಡ್ಯೂಲ್‌ಕ್ಯಾಸ್ಟ್‌ನವರಿಗೆ ಸೀಟು ನಿಗದಿ ಮಾಡಿದ್ದಾರೆ.

ಷೆಡ್ಯೂಲ್ಡ್ ಕ್ಯಾಸ್ಟ್ ಮಕ್ಕಳು ಕಡಿಮೆ ಇದ್ದು, ಏನಾದರೂ ಮಾತನಾಡಿದರ ಇತರರು ಹೊಡೆದಾಟಕ್ಕೆ ಸಂಖ್ಯಾಲದಿಂದ ಬಂದ ನಿದರ್ಶನವಿದೆ. ಇದನ್ನು ತಪ್ಪಿಸುವ ಉದ್ದೇಶದಿಂದ 50 ಪರ್ಸೆಂಟ್ ಷಡ್ಯೂಲ್ ಕ್ಯಾಸ್ಟಿನವರಿಗೆ ಇಲ್ಲಿಯೂ ಸೀಟು ಕೊಡುವಹಾಗೆ ಅವಕಾಶ ಮಾಡಿಕೊಡಬೇಕು. ಜನರಲ್ ಹಾಸ್ಟಲ್ ಗಳು ದೇಶಾದ್ಯಂತ ಇವೆ. ಯಾವ ರಸ್ತೆಯಲ್ಲಿ ನೋಡಿದರೂ ಜನರಲ್ ಹಾಸ್ಟಲ್ ಇರುತ್ತದೆ. ಆದರೆ ಅದರ ಮುಂದೆ ಜಾತಿಯ ನಾಮಫಲಕಗಳಿರುತ್ತವೆ. ಎಲ್ಲ ಕಡೆಯೂ ಎಲ್ಲಾ ಜಾತಿಯವರ ಜನರಲ್ ಹಾಸ್ಟಲ್ ಎಂದು ಮಾತ್ರ ಬೋರ್ಡ ಹಾಕಬೇಕು ಮತ್ತು ಅಲ್ಲಿ 10 ಪರ್ಸೆಂಟ್ ಸೀಟುಗಳನ್ನು ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಮತ್ತು ಇತರರಿಗೆ ಕೊಡಬೇಕೆಂದಿರುವುದನ್ನು 18 ಪರ್ಸೆಂಟ್ ಮಾಡ ಬೇಕೆಂದು ಹೇಳುತ್ತೇನೆ. ಯಾರಾದರೂ ಇದಕ್ಕೆ ವಿರುದ್ಧವಾಗಿ ನಡೆದರೆ ಅವರಿಗೆ ಕೊಡುವಂಥ ಗ್ರಾಂಟನ್ನು ನಿಲ್ಲಿಸಬೇಕು. ಇದನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ.

ಕನ್‌ವೆಂಟ್, ಖಾಸಗಿ ಶಾಲೆಗಳು ಮತ್ತು ಕಾಲೇಜುಗಳಿವೆ ಅಲ್ಲಿ ಅಡ್ಮಿಷನ್‌ನಲ್ಲಾಗಲೀ, ಕೊಡತಕ್ಕ ಸೌಕರ್ಯಗಳಲ್ಲಾಗಲೀ, ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೌಕರ್ಯಗಳು ದೊರೆಯುತ್ತಿಲ್ಲ. ಅಲ್ಲಿ ಒಂದಕ್ಕೆ ನಾಲ್ಕರಷ್ಟು ಫೀವಸೂಲು ಮಾಡುವುದಲ್ಲದೆ ಡೊನೇಷನ್ ಸಹ ವಸೂಲು ಮಾಡುತ್ತಾರೆ. ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವುದಕ್ಕಾಗಿ ಅಲ್ಲಿಯೂ ಸಹ ಈ ಜನಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕು.

ಈಗಿರತಕ್ಕ ವಿದ್ಯಾಭ್ಯಾಸದ ರೀತಿ ನೀತಿ ಪಾಸ್‌ಪೋರ್ಟ್ ಆಫ್ ಜಾಬ್ಸ್ ಎನ್ನುವ ರೀತಿ ಇದೆ. ಅದನ್ನು ರೀ ಒರಿಯೆಂಟೇಶನ್ ಮಾಡಿ 'ಅರ್ನ್ ವೈಲ್ ಯು ಲರ್ನ್' ಎನ್ನುವ ಸ್ಕೀಂ ಜಾರಿಗೆ ತಂದು ಸ್ವತಂತ್ರವಾಗಿ, ಸ್ವಾವಲಂಬನೆಯಲ್ಲಿ ಬಾಳತಕ್ಕ ರೀತಿಯಲ್ಲಿ ವಿದ್ಯಾಭ್ಯಾಸದ ಕ್ರಮವನ್ನು ಬದಲಾಯಿಸುವ ರೀತಿಯಲ್ಲಿ ಎಲ್ಲಾ ರೆಸಿಡೆನ್‌ಷಿಯಲ್ ಹೈಸ್ಕೂಲು ಮತ್ತು ಹಾಸ್ಟಲುಗಳಲ್ಲಿ ಹೊಸ ಯೋಜನೆಯನ್ನು ಜಾರಿಗೆ ತರಬೇಕು.

ಇಂದು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ''ಕಾನ್‌ಸ್ಟಿಟ್ಯೂಷನ್ ಫ್ರಾಡ್'' ಮಾಡಿದ್ದಾರೆಂದು ಹೇಳುತ್ತೇನೆ. ಯಾವ ವಿಶ್ವವಿದ್ಯಾನಿಲಯದಲ್ಲಿಯೂ ಸೆನೆಟನಲ್ಲಾಗಲೀ, ಸಿಂಡಿಕೇಟಿನಲ್ಲಾಗಲೀ, ನಿಮ್ನವರ್ಗದವರಿಗೆ ಮತ್ತು ಇತರ ಹಿಂದುಳಿದ ವರ್ಗಗಳವರಿಗೆ ಅವಕಾಶಗಳನ್ನು ಕಲ್ಪಿಸಿಕೊಡತಕ್ಕ ಪದ್ಧತಿಯನ್ನು ಈಗ ನಿಯಮಾವಳಿಯಲ್ಲಿ ಅಳವಡಿಸಿ ಇಲ್ಲ. ಪ್ರೊಫೆಸರ್ಸ್, ಅಸಿಸ್ಟೆಂಟ್ ಪ್ರೊಫೆಸರ್ ಲೆಕ್ಚರರ್ಸ್ ನೇಮಕ ಮಾಡುವಾಗ ಕೂಡ ರಿಸರ್ವೇಷನ್ ಮಾಡುತ್ತಿಲ್ಲ. ಆದುದರಿಂದ ವಿಶ್ವವಿದ್ಯಾನಿಲಯಗಳಲ್ಲಿರುವ ಈ ಅನ್ಯಾಯವನ್ನು ಸರಿಮಾಡುವುದಕ್ಕೆ ಏಕರೂಪವಾದ ಕಾನೂನನ್ನು ತಂದು ಸಾಮಾಜಿಕ ನ್ಯಾಯ ದೊರಕುವಂತೆ ಎಲ್ಲ ವಿಧದಲ್ಲಿಯೂ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಗಳಿಗೆ ಅವಕಾಶವನ್ನು ಕಲ್ಪನೆ ಮಾಡಿಕೊಟ್ಟು, ಪ್ರಾತಿನಿಧ್ಯ ದೊರಕುವಂತೆ ಅವಕಾಶ ಮಾಡಿಕೊಡಬೇಕು. ಅವರೂ ಸಹ ಕಾಲಮಾನವರಿತು ಈ ಬಗ್ಗೆ ತಮ್ಮ ಮನೋಭಾವನೆಯನ್ನು ಬದಲಾಯಿಸುವಂತೆ ಮಾಡಬೇಕು.

ಐ. ಎ. ಎಸ್. ಮತ್ತು ಐ. ಪಿ. ಸಿ. ಪರೀಕ್ಷೆಗಳಿಗೆ ಕುಳಿತುಕೊಳ್ಳುವವರಿಗಾಗಿ ಟ್ರೇನಿಂಗ್ ಸೆಂಟರನ್ನು ತೆರೆದಿದ್ದಾರೆ. ಮದ್ರಾಸಿನ ಕೇಂದ್ರದಲ್ಲಿ 10 ಪರ್ಸೆಂಟ್ ರಿಸಲ್ಟ್ ಬರುತ್ತದೆ; ಅಹ್ಮದಾಬಾದಿನಲ್ಲಿ ಕೂಡ ಕಡಿಮೆ ರಿಸಲ್ಟ್ ಬರುತ್ತದೆ, ಡೆಲ್ಲಿ ಕೇಂದ್ರದಲ್ಲಿ ಮಾತ್ರ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ 90 ಪರ್ಸೆಂಟ್ ರಿಸಲ್ಟ್ ಬರುತ್ತಿದೆ. ಆದ್ದರಿಂದ ಈ ವರ್ಷದಿಂದ ಟ್ರೇನಿಂಗಿಗೆ ಕಳುಹಿಸುವುದಾದರೆ ಡೆಲ್ಲಿಗೆ ಹೆಚ್ಚು ಜನರನ್ನು ಕಳುಹಿಸಿಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

ಸಮಾಜ ಕಲ್ಯಾಣ ಇಲಾಖೆಯ ಅಡ್ಮಿನಿಸ್ಟ್ರೇಟಿವ್ ಸೆಟ್‌ಪ್ ತೆಗೆದುಕೊಂಡರೆ ಸ್ಟೇಟ್ ಲೆವಲ್‌ನಲ್ಲಿ ಪ್ಲಾನಿಂಗ್ ಡಿಪಾರ್ಟಮೆಂಟಿನಲ್ಲಿದೆ, ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ರೆವಿನ್ಯೂ ಇಲಾಖೆಯಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಬೋರ್ಡ್ ಅಭಿವೃದ್ಧಿ ಮಂಡಲಿಗಳಿಗೆ ಸೇರಿಸಿದ್ದಾರೆ. ಇದು ಸರಿಯಲ್ಲ. ಈ ಇಲಾಖೆ ಇದೇ ಪ್ರತ್ಯೇಕವಾಗಿ ಇರಬೇಕಾದ್ದು ಅಗತ್ಯ. ಸೂಪರ್‌ಟೈಂ ಸ್ಕೇಲ್ ಕೊಟ್ಟು ಕಮಿಷನರ್ ಮತ್ತು ಕಾರ್ಯದರ್ಶಿ ಎಂದು ಮಾಡಿರುವ ಹಾಗೆ ಈ ಇಲಾಖೆಗೂ ಒಬ್ಬ ಸೂಪರ್‌ಟೈಂ ಸ್ಕೇಲ್ ಅಧಿಕಾರಿಯವರನ್ನು ಹಾಕಬೇಕು, ಡಿಸ್ಟ್ರಿಕ್ಟ್ ವೆಲ್‌ಫೇರ್ ಇಲ್ಲವಾದರೆ ಹೋಂ ಸೆಕ್ರೆಟರಿಗೆ ಈ ಇಲಾಖೆ ವಹಿಸಬೇಕು ಆಫೀಸರ ಹುದ್ದೆಯನ್ನು ಕ್ಲಾಸ್ 1 ಮಾಡಿ, ಇಂಡಿಪೆಂಡೆಂಟ್ ಆಗಿ ಇಟ್ಟು ಅವರು ಹೆಚ್ಚು ಕೆಲಸ ಮಾಡುವಂತೆ ಮಾಡಬೇಕು. ಈಗ ಇರುವ ರೀತಿಯಲ್ಲಿ ಕೆಲಸವಾಗುವುದಿಲ್ಲ. ತಾಲ್ಲೂಕು ಮಟ್ಟದಲ್ಲಿರುವ ಇನ್‌ಸ್ಪೆಕ್ಟರಿಗೆ ಬದಲಾಗಿ ಅಲ್ಲಿ ಕ್ಲಾಸ್ 2 ಆಫೀಸರ್ ಎಂದು ಕರೆದು ಎಲ್ಲ ಇಲಾಖೆಗಳ ಮೇಲೆಯೂ ಚೆಕಿಂಗ್ ಮಾಡತಕ್ಕ ಅಧಿಕಾರವನ್ನು ಅವರಿಗೆ ಕೊಡಬೇಕು. ಹಾಗೆ ಮಾಡಿದರೆ ಹೆಚ್ಚು ಕೆಲಸವಾಗುತ್ತದೆ.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಸಮಾಜ ಕಲ್ಯಾಣ ಇಲಾಖೆಗೆ ಎಜುಕೇಷನ್ ಇಲಾಖೆಯಿಂದ ಡೆಪ್ಯುಟೇಷನ್ ಮೇಲೆ ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದಾರೆ. ಇದರ ಅವಶ್ಯಕತೆಯಾದರೂ ಏನಿತ್ತು ? ಇಲ್ಲೇ ಇರುವ ಸೀನಿಯರು ಆಫೀಸರುಗಳನ್ನೇತಕ್ಕೆ ನೇಮಕ ಮಾಡಬಾರದು ?

ಇನ್ನು ನ್ಯೂಟ್ರಿಷನ್ ಪ್ರೋಗ್ರಾಂಗಾಗಿ ಸುಮಾರು ಒಂದು ಕೋಟಿಯವರೆಗೆ ಖರ್ಚು ಮಾಡುತ್ತಿದ್ದಾರೆ, ಆದರೆ ಇದರಲ್ಲಿ ಹೆಚ್ಚು ಕೆಲಸಗಳಾಗುತ್ತಿಲ್ಲ. ಇದಕ್ಕಾಗಿ ಒಬ್ಬರು ಡೆಪ್ಯೂಟಿ ಡೈರೆಕ್ಟರನ್ನು ಹಾಗೂ ಇನ್ನೊಬ್ಬರು ಅಸಿಸ್ಟೆಂಟು ಡೈರೆಕ್ಟರನ್ನು ನೇಮಿಸಿ ಇದರ ಕೆಲಸಗಳು ಚೆನ್ನಾಗಿ ನಡೆಯುವಂತೆ ಪ್ರಯತ್ನ ಮಾಡಬೇಕು, ಇನ್ನು ಶೇಕಡಾ 18ರಷ್ಟು ರಿಸರ್ವೇಷನ್ ಸರಿಯಾಗಿ ಎಲ್ಲಾ ಇಲಾಖೆಗಳಲ್ಲೂ ಹಣ ಕೊಡುತ್ತಿಲ್ಲ. ಇದನ್ನು ಎಲ್ಲಿಯೂ ಕೊಟ್ಟಿಲ್ಲ, ಎಲ್ಲಿ ಕೊಡ ಲಾಗಿದೆ ಎನ್ನುವುದನ್ನು ಪರಿಶೀಲಿಸಲು ಇದಕ್ಕಾಗಿ ಪ್ರತ್ಯೇಕವಾಗಿ ಒಬ್ಬರು ಅಧಿಕಾರಿಗಳನ್ನು ಸರಕಾರ ನೇಮಕ ಮಾಡಬೇಕು ಮತ್ತು ಉಂಟಾಗಿರುವ ಲೋಪಗಳನ್ನು ಸರಿಪಡಿಸಬೇಕು. ಇಂದು ಎಷ್ಟೋ ಪಬ್ಲಿಕ್ ಅಂಡರ್ ಟೇಕಿಂಗ್ ಕಂಪನಿಗಳು ಹಾಗೂ ಬೋರ್ಡುಗಳಿವೆ. ಇವೆಲ್ಲಾ ಶೇಕಡಾ 18ರಷ್ಟು ಮೀಸಲು ಸ್ಥಾನಗಳನ್ನು ರಾಜ್ಯಾಂಗದಂತೆ ಕೊಡಬೇಕು. ಇದನ್ನು ಪರಿಶೀಲಿಸಿ ಹರಿಜನರು ಹಾಗೂ ಗಿರಿಜನರಿಗೆ ಅವಕಾಶ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ಅನ್‌ಟಚಬಿಲಿಟಿ ಹೋಗಲಾಡಿಸಲು ಪ್ರೋಪಗಾಂಡಿಸ್ಟ್ಸ್ ಎಂದು ನೇಮಕ ಮಾಡಲಿದ್ದಾರೆ. ಇದರ ಬಗ್ಗೆ ನೇಮಕವಾಗಿ ಸರಿಯಾದ ಪ್ರಚಾರ ಆಗಬೇಕು. ಇಂಟರು ಕ್ಯಾಸ್ಟು ಮ್ಯಾರೇಜುಗಳು ಹಾಗೂ ಡಿನ್ನರುಗಳು ಏರ್ಪಾಡು ಮಾಡಬೇಕು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇದರ ಬಗ್ಗೆ ಸಾಕಷ್ಟು ಪ್ರಚಾರವಾಗುತ್ತಿಲ್ಲ. ಮಹಾತ್ಮ ಗಾಂಧಿಯವರು ಹೇಳಿದಂತಹ ರಚನಾತ್ಮಕವಾದ ಕಾರ್ಯಗಳನ್ನು ಮಾಡುವಾಗ ಈ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು, ಬಿಜಾಪುರ ಹಾಗೂ ಬೆಳಗಾಂ ಇಂತಹ ಭಾಗಗಳಲ್ಲಿ ಹೆಚ್ಚು ಜನರನ್ನು ಪ್ರಾಪಗ್ಯಾಂಡಿಸ್ಟ್‌ಗಳನ್ನು ನೇಮಕ ಮಾಡಬೇಕು. ಇವರಿಂದ ಬಹಳ ಅನುಕೂಲ ಈ ಭಾಗದ ಜನರಿಗೆ ಸಿಗುತ್ತದೆ. ಇನ್ನು ರಾಜ್ಯದ ಕೆಲವು ಕಡೆ ಹಿಂದುಳಿದ ವರ್ಗಗಳಿಗೆ ಎಕ್ಸ್‌ಪ್ಲಾಯಿಟೇಷನ್ ಆಗಿದೆ ಇಂಜಸ್ಟೀಸ್ ಆಗಿದೆ ಎಂದು ಹೇಳುತ್ತಿದ್ದಾರೆ. ಇವನ್ನು ಸರಿಪಡಿಸಬೇಕು, ಅನ್‌ಟಚಬಿಲಿಟಿ ಕಾರ್ಯಕ್ರಮ ಮಾಡಲು ಒಂದು ಸ್ಪೆಷಲ್ ಪೋಲೀಸು ಸ್ಕ್ವಾಡ್‌ನ್ನೇ ಮಾಡಿ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಇರುವಂತೆ ವ್ಯವಸ್ಥೆ ಮಾಡಬೇಕು. ಸುಪ್ರೀಂ ಕೋರ್ಟು ತೀರ್ಪಿನ ಪ್ರಕಾರ ಸರಕಾರ ಪರಿಶೀಲನೆ ಮಾಡಿ ಷೆಡ್ಯೂಲ್ ಕ್ಯಾಸ್ಟ್ ಹಾಗೂ ಷೆಡ್ಯೂಲ್ ಟ್ರೈಬ್ಸ್ ವರ್ಗಗಳವರಿಗೆ ಆರ್ಟಿಕಲ್ 16 (4)ರಲ್ಲಿರುವಂತೆ ಮತ್ತು ಆರ್ಟಿಕಲ್ 335 ಮತ್ತು 46ರ ಪ್ರಕಾರ ಶೇಕಡಾ 18ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕು. ಹರಿಜನರ ಗೃಹನಿರ್ಮಾಣಕ್ಕೆ 330 ಕೋ-ಆಪರೇಟಿವ್ ಸೊಸೈಟಿಗಳು ಮಾಡಿದ್ದನ್ನು ಈಗ ಮುಚ್ಚಿದ್ದಾರೆ. ಇದನ್ನು ಮಲ್ಟಿಪರ್ಪಸ್ ಸೊಸೈಟಿಗಳಾಗಿ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕು. ಬರಗಾಲದ ಜಾಗದಲ್ಲಿದ್ದ ಹರಿಜನರು ಮಹಾರಾಷ್ಟ್ರಕ್ಕೆ ವಲಸೆ ಹೋಗುತ್ತಿದ್ದಾರೆ. ಇಂತಹ ಹರಿಜನ ಗಿರಿಜನರಿಗೆ ಅನುಕೂಲಗಳನ್ನು ಮಾಡಿಕೊಡುವ ಬಗ್ಗೆ ಗಮನ ಹೆಚ್ಚು ಕೊಡಬೇಕು.

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಮೇಲೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಹಾಗೂ ನೈರ್ಮಲ್ಯ ಇತ್ಯಾದಿಗಳನ್ನೆಲ್ಲಾ ಪಂಚಾಯತಿ ಹಾಗೂ ತಾಲ್ಲೂಕಾ ಬೋರ್ಡುಗಳಿಗೇ ವಹಿಸಿದ್ದಾರೆ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಗ್ರಾಮಾಂತರ ಪ್ರದೇಶಗಳ ಚಿತ್ರವನ್ನು ನೋಡಿದರೆ ಯಾವ ವಿಧದಲ್ಲೂ ಹಳ್ಳಿಗಳ ಅಭಿವೃದ್ಧಿಯಾಗಿಲ್ಲ. ಹಿಂದೆ ಹಳ್ಳಿಗಾಡಿನ ಜನರು ಯಾವ ಸ್ಥಿತಿಯಲ್ಲಿದ್ದರೋ ಇಂದೂ ಅದೇ ಕಷ್ಟಪರಿಸ್ಥಿತಿಯಲ್ಲಿದ್ದಾರೆ. ಮತ್ತು ಅವರ ಸ್ಥಿತಿ ಕೆಲವುಕಡೆಗಳಲ್ಲಿ ಬಹು ಚಿಂತಾಜನಕವಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇಂತಹ ಜನರ ಅಭಿವೃದ್ಧಿ ಮಾಡಬೇಕೆಂದು ಸರಕಾರ ಎಲ್ಲ ಅಧಿಕಾರಗಳನ್ನೂ ಪಂಚಾಯಿತಿಗಳಿಗೆ ಹಾಗೂ ತಾಲ್ಲೂಕಾ ಬೋರ್ಡುಗಳಿಗೆ ವಹಿಸಿದ್ದರೂ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಈ ಜನಕ್ಕೆ ಯಾವ ವಿಧವಾದ ಅಭಿವೃದ್ಧಿಯೂ ಬಂದಿಲ್ಲ, ಕೆಲವು ಕಡೆ ಇರುವ ಕನಿಷ್ಟ ಸೌಲಭ್ಯಗಳು ಕೂಡ ಹಳ್ಳಿಗಾಡಿನ ಜನರಿಗೆ ದೊರಕುತ್ತಿಲ್ಲ. ಯಾವ ಹಳ್ಳಿ ನೋಡಿದರೂ ಒಂದು ಕುಡಿಯುವ ಬಾವಿ ಇಲ್ಲವೇ ಒಂದು ರೋಡು ಇಲ್ಲವೇ ಒಂದು ಕಡೆ ಇರುವ ಕೆರೆ ರಿಪೇರಿ ಇವಿಷ್ಟು ಕೆಲಸಗಳಾಗುತ್ತಿವೆಯೇ ವಿನಾ ಬೇರೆ ಯಾವ ಕೆಲಸಗಳೂ ಆಗಿರುವುದು ಕಣ್ಣಿಗೆ ಕಾಣುತ್ತಿಲ್ಲ. ಬೇರೆ ಯಾವ ರೀತಿಯಲ್ಲೂ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಾಗಲಿಲ್ಲ. ತಾಲ್ಲೂಕಾ ಬೋರ್ಡುಗಳ ಹಾಗೂ ಪಂಚಾಯತಿ

ಗಳ ಆರ್ಥಿಕ ಸ್ಥಿತಿ ಬಹಳ ಹದಗೆಟ್ಟಿವೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಕಂದಾಯದ ಪೂರ್ತಿ ಹಣವನ್ನು ಪಂಚಾಯಿತಿ ಹಾಗೂ ತಾಲ್ಲೂಕಾ ಬೋರ್ಡ್‌ಗಳಿಗೆ ಕೊಟ್ಟರೂ ಅದು ಸಾಲುತ್ತಿಲ್ಲ. ಇದಕ್ಕಾಗಿ ಹೆಚ್ಚು ತೆರಿಗೆಗಳನ್ನು ಇವರು ಹಾಕಬಹುದು ಎಂದು ಸರಕಾರ ಹೇಳುತ್ತಿದೆ. ತೆರಿಗೆ ಹೆಚ್ಚು ಹಾಕಬೇಕು ಎಂದು ಹೇಳುವುದು ಅಷ್ಟು ಸಮಂಜಸವಾದ ವಿಚಾರವಲ್ಲ ಎಂದು ಇಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಮಗೆ ತಿಳಿದಿರುವಂತೆ ಪಂಚಾಯಿತಿಗಳ ಹಾಗೂ ತಾಲ್ಲೂಕಾ ಬೋರ್ಡುಗಳ ಉತ್ಪತ್ತಿ ಎರಡು ಲಕ್ಷ, ಇಲ್ಲವೇ ನಾಲ್ಕು ಅಥವಾ ಐದು ಲಕ್ಷಕ್ಕೆ ಮೇಲೆ ಇಲ್ಲ, ಇದರಲ್ಲಿ ತಾಲ್ಲೂಕಾ ಬೋರ್ಡುಗಳು ರಸ್ತೆ ನಿರ್ಮಾಣ ಮಾಡಬೇಕು, ಪಾಠಶಾಲೆಗಳನ್ನು ಕಟ್ಟಬೇಕು, ಕುಡಿಯುವ ನೀರಿನ ಬಾವಿಗೆ ಕಾಂಟ್ರಿಬ್ಯೂಷನ್ ಕೊಡಬೇಕು ಹಾಗೂ ಅಗತ್ಯವಾದ ಇನ್ನಿತರ ಕಾರ್ಯಕ್ರಮಗಳನ್ನು ಮಾಡಬೇಕು ಮತ್ತು ಗ್ರಾಮಾಂತರಗಳಲ್ಲಿರುವ ಇತರ ಸಮಸ್ಯೆಗಳ ಕಡೆಗೂ ಗಮನ ಕೊಡಬೇಕು, ಇವೆಲ್ಲವನ್ನೂ ಮಾಡಲು ಇಂತಹ ಸಂಸ್ಥೆಗಳಿಂದ ಸಾಧ್ಯವಾಗುವುದಿಲ್ಲ, ಇವರಿಗೆ ಸಾಕಾದಷ್ಟು ವರಮಾನವೇ ಇಲ್ಲದಿರುವಾಗ ಇವರು ಹೇಗೆ ತಾನೇ ಉತ್ಪತ್ತಿಯನ್ನು ಜಾಸ್ತಿ ಮಾಡಲು ಸಾಧ್ಯ ಹೆಚ್ಚಿಗೆ ತೆರಿಗೆ ಹಾಕಬೇಕು ಎಂದರೆ ಈಗಾಗಲೇ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಹಾಕಿರುವ ತೆರಿಗೆಯೇ ಜನರ ಮೇಲೆ ಹೆಚ್ಚಾಗಿರುವಾಗ ಇನ್ನು ಪಂಚಾಯಿತಿಯವರಿಗೆ ಹಾಗೂ ತಾಲ್ಲೂಕಾ ಬೋರ್ಡುಗಳಿಗೆ ಹೆಚ್ಚು ತೆರಿಗೆ ಹಾಕಲು ಅವಕಾಶ ಎಲ್ಲಿದೆ ? • ಯಾವ ರೀತಿ ಇವರು ಜಾಸ್ತಿ ಮಾಡಬಹುದು, ಇವರಿಗೆ ಸಂತೆಯ ಸುಂಕ ಒಂದು ಬಿಟ್ಟರೆ ಬೇರೆ ಯಾವ ಬಾಬಿನಿಂದಲೂ ಹೆಚ್ಚು ವರಮಾನ ಬರುವುದಿಲ್ಲ. ಇದು ಹೇಗಿದೆ ಎಂದರೆ ಹಿಂದೆ ತೆನಾಲಿ ರಾಮಕೃಷ್ಣ ಕುದುರೆ ಸಾಕಿದಂತಾಗಿದೆ. ಆ ರೀತಿ ಈಗ ಇರುವ ಪಂಚಾಯಿತಿ ಹಾಗೂ ತಾಲ್ಲೂಕಾ ಬೋರ್ಡುಗಳ ಸ್ಥಿತಿಯಾಗಿದೆ. ಈ ಬೋರ್ಡುಗಳಲ್ಲಿ ತಮ್ಮ ಮೆಚ್ಚಿಕೆ ತೋರಿಸುವುದಕ್ಕಾಗಿ ತಮ್ಮ ಪ್ರಭಾವವನ್ನು ಬೀರಿ ಜನಗಳಿಗೆ ಆಶ್ವಾಸನೆಗಳನ್ನು ಕೊಡಬಹುದು. ಆದರೆ ಯಾವ ಕೆಲಸಗಳನ್ನು ಜನರ ಸೌಕರ್ಯಗಳಿಗಾಗಿ ಮಾಡಲು ಸಾಧ್ಯವೇ ಇಲ್ಲ. ಎಂದು ಹೇಳಿದರೆ ಅದು ತಪ್ಪಾಗಲಾರದು. ತಾಲ್ಲೂಕಾ ಬೋರ್ಡುಗಳಿಗೆ ಏನು ಉತ್ಪತ್ತಿ ಬರುತ್ತದೆ ಎಂದರೆ ಲ್ಯಾಂಡು ರೆವೆನ್ಯೂ ಬಾಬಿನಿಂದ ಶೇಕಡಾ ಮುವ್ವತ್ತರಷ್ಟು ಬರುತ್ತಿದೆ ಮತ್ತು ಸಂತೆಯ ಸುಂಕ ಇರುವ ಕಡೆಗಳಲ್ಲಿ ಸ್ವಲ್ಪ ಬರುತ್ತದೆ, ಇದರಿಂದ ಬರುವ ಆದಾಯ ಇಲ್ಲಿನ ಕೆಲಸಗಳನ್ನು ಮಾಡಲು ಸಾಲದು. ಇದಕ್ಕೆ ಸಾಕಷ್ಟು ವರಮಾನವನ್ನು ಸರಕಾರದವರು ಒದಗಿಸಿಕೊಡಬೇಕು ಇಲ್ಲಿ ಒತ್ತಾಯ ಮಾಡುತ್ತೇನೆ. ಇಂದು ಬೇರೆ ಬಾಬುಗಳಿಂದ ಬೇಕಾದಷ್ಟು ವರಮಾನ ಬರುತ್ತಿದೆ. ಉದಾಹರಣೆಗೆ ಎಕ್ಸೈಜು ಬಾಬಿನಿಂದ ಸರಕಾರಕ್ಕೆ ಸುಮಾರು ಇಪ್ಪತ್ತು ಇಲ್ಲವೇ ಮೂವತ್ತು ಕೋಟಿ ರೂಪಾಯಿಗಳಷ್ಟು ಬರುತ್ತಿದೆ. ಇದರಲ್ಲಿ ಬರುತ್ತಿರುವುದು ಶೇಕಡ ತೊಂಬತ್ತು ಭಾಗ ಬರೀ ಗ್ರಾಮಾಂತರ ಪ್ರದೇಶಗಳಿಂದ ಬರುವ ಬಡ ಜನರಿಂದಲೇ ಬರುವ ದುಡ್ಡು, ಇಂತಹ ವರಮಾನದ ಸ್ವಲ್ಪ ಭಾಗವನ್ನಾದರೂ ಪಂಚಾಯಿತಿ ಹಾಗೂ ತಾಲ್ಲೂಕು ಬೋರ್ಡು ಸಂಸ್ಥೆಗಳಿಗೆ ಎಂದರೆ ಶೇಕಡಾ ಇಪ್ಪತ್ತೈದು ಭಾಗದಷ್ಟಾದರೂ ಒದಗಿಸಿ ಸಹಾಯ ಮಾಡಬೇಕು, ಇದರ ಬಗ್ಗೆ ಸರಕಾರ ಯಾವ ರೀತಿ ಮಾಡುತ್ತದೆ ಅದನ್ನು ನೋಡಬೇಕಾಗಿದೆ. ಹರಿಜನ ಮತ್ತು ಗಿರಿಜನರು ಬೆವರು ಸುರಿಸಿದ ಹಣದಿಂದ ಸರ್ಕಾರಕ್ಕೆ 20ರಿಂದ 30 ಕೋಟಿ ರೂಪಾಯಿಗಳವರೆಗೆ ತೆರಿಗೆ ಕೊಡುತ್ತಿದ್ದಾರೆ. ಈ ಕಾರಣದಿಂದ ಎಕ್ಸೈಜ್ ಬಾಬಿನಿಂದ ಬರುವ ಹಣದಲ್ಲಿ ಸ್ವಲ್ಪ ಭಾಗವನ್ನು ತಾಲ್ಲೂಕ್ ಬೋರ್ಡ್‌ಗಳಿಗೆ ಮತ್ತು ಪಂಚಾಯಿತಿಗಳಿಗೆ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

4-00 P. M.

ಇನ್ನು ತಾಲ್ಲೂಕ್ ಬೋರ್ಡಿನ ಅಧಿಕಾರ ವರ್ಗದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇಂದು ಪೋಸ್ಟ್ ಆಡಿಟ್ ಸಿಸ್ಟಮ್ ಇಲ್ಲಿ ಜಾರಿಯಲ್ಲಿದೆ. ಪ್ರತಿಯೊಂದು ತಾಲ್ಲೂಕ್ ಬೋರ್ಡಿನಲ್ಲಿಯೂ ಲಕ್ಷಾಂತರ ರೂಪಾಯಿಗಳ ಆಡಿಟ್ ಅಬ್ಜೆಕ್ಷನ್ ಇದೆ. ಒಂದು ವರ್ಷ, ಎರಡು ವರ್ಷ ಆದಮೇಲೆ ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನವರು ಬಂದು ಆಡಿಟ್ ಮಾಡುತ್ತಾರೆ. ತಮ್ಮ ಮನಸ್ಸಿಗೆ ಬಂದ ಹಾಗೆ ಬರೆದು ಹೋಗುತ್ತಾರೆ. ಯಾವ ಆಡಿಟ್ ಕೂಡ ಸರಿಯಾಗಿ ವಿಲೇವಾರಿ ಆಗಿಲ್ಲ. ಆಡಿಟ್ ಮಾಡುವುದಕ್ಕೆ ಬರುವ ಅಧಿಕಾರಿಗಳನ್ನು ಬಿ. ಡಿ. ಒ.ಗಳು ತಮ್ಮ ಜೀಪನ್ನು ಅವರಿಗೆ ಓಡಾಡಲು ಕೊಟ್ಟು ಟಿ. ಬಿ. ಯಲ್ಲಿ ಸರಿಯಾಗಿ ನೋಡಿಕೊಂಡು ಬಿಟ್ಟರೆ ಆಡಿಟ್‌ನಲ್ಲಿ ಯಾವ ಅಬ್ಜೆಕ್ಷನ್ ಸಹ ಇರುವುದಿಲ್ಲ. ಇಲ್ಲದಿದ್ದರೆ ಅಬ್ಜೆಕ್ಷನ್ ಹಾಕುತ್ತಾರೆಂದು ಕೇಳಿದ್ದೇನೆ. ಈಗಿನ ಕ್ರಮದಿಂದ ಯಾವ ಸಮಸ್ಯೆಯೂ ಬಗೆಹರಿಯುತ್ತಿಲ್ಲವಾದ್ದರಿಂದ ನನ್ನ ಒಂದು ಸಲಹೆ ಏನೆಂದರೆ ಪ್ರೀ ಆಡಿಟ್ ಸಿಸ್ಟಮನ್ನು ಜಾರಿಗೆ ತರಬೇಕು. ಈ ಪದ್ಧತಿ ಈಗ ಮುನಿಸಿಪಾಲಿಟಿಗಳಲ್ಲಿದೆ. ಈ ಒಂದು ಪದ್ಧತಿಯನ್ನು ಜಾರಿಗೆ ತಂದರೆ ಕಾನೂನು ಪ್ರಕಾರ ಹಣವನ್ನು ಖರ್ಚು ಮಾಡುವುದಕ್ಕೆ

(ಶ್ರೀ ಕೆ. ಎಚ್. ಹನುಮೇಗೌಡ)

ಅನುಕೂಲವಾಗುತ್ತದೆ ಮತ್ತು ಅವ್ಯವಹಾರವಾಗುವುದೂ ಸಹ ತಪ್ಪುತ್ತದೆ. ಈಗಿನ ಪದ್ಧತಿಯಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರವಾಗುವುದಕ್ಕೆ ಅವಕಾಶವಿದೆ. ಇದನ್ನು ಹೋಗಲಾಡಿಸಲು ಪ್ರೀ ಆಡಿಟ್ ಸಿಸ್ಟಮನ್ನು ಜಾರಿಗೆ ತರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಸಮಾಜ ವಿಕಾಸ ಯೋಜನೆಯನ್ನು ಜಾರಿಗೆ ತಂದಾಗ ಮೊದಮೊದಲು ಲಕ್ಷಾಂತರ ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡಿದರು. ಅನಂತರ ಆ ಯೋಜನೆಯನ್ನೇ ಕೈಬಿಟ್ಟರು. ಇಂದಿಗೂ ಸಹ ಸಮಾಜ ವಿಕಾಸ ಯೋಜನೆಯ ಅಂಗವಾಗಿ ಒಂದೊಂದು ಬ್ಲಾಕ್‌ಗೂ 20-30 ಜನ ಅಧಿಕಾರಿಗಳು ಇದ್ದಾರೆ. ಇವರಿಗೆಲ್ಲಾ ಸಂಬಳಕ್ಕಾಗಿಯೇ ಬಹಳಷ್ಟು ಹಣ ಖರ್ಚಾಗುತ್ತಿದ್ದರೂ ಸಹ ಈ ಯೋಜನೆಗೆ ಸರ್ಕಾರದವರು ಒದಗಿಸುತ್ತಿರುವುದು 10 ರಿಂದ 15 ಸಾವಿರ ರೂಪಾಯಿಗಳವರೆಗೆ ಮಾತ್ರ. ಇಷ್ಟು ಹಣವನ್ನು ಯಾವ ಪುರುಷಾರ್ಥಕ್ಕಾಗಿ ಕೊಡುತ್ತಿದ್ದಾರೋ ಗೊತ್ತಿಲ್ಲ. ಈ ಅಧಿಕಾರಿಗಳ ಪೈಕಿ ಕೈಗಾರಿಕಾ ಸೂಪರ್‌ವೈಜರ್ ಎಂಬುವರು ಸಹ ಇದ್ದಾರೆ. ಕೈಗಾರಿಕೆಗಳು ಇಲ್ಲದಿದ್ದರೂ ಸಹ ಇವರು ತಿಂಗಳಿಗೆ 20 ದಿವಸ ಟೂರ್ ಮಾಡುತ್ತಿದ್ದಾರೆ. ಆ ರೀತಿ ಟೂರ್ ಮಾಡಬೇಕೆಂದು ಕಾನೂನು ಇದೆಯಂತೆ. ಇದೇ ರೀತಿ ಅನೇಕ ರೀತಿಯ ಎಕ್ಸ್‌ಟೆನ್‌ಷನ್ ಆಫೀಸರ್‌ಗಳು ಇದ್ದಾರೆ. ಆದರೆ ಮೂರು ಕಾಸಿನ ಕೆಲಸ ಮಾತ್ರ ಆಗುತ್ತಿಲ್ಲ. ಈ ರೀತಿ ಅಧಿಕಾರಿಗಳು ಸುಳ್ಳು ಡೈರಿ ಬರೆಯುವುದಕ್ಕೆ ಮತ್ತು ತಪ್ಪು ದಾರಿಯಲ್ಲಿ ಹೋಗುವುದಕ್ಕೆ ಸರ್ಕಾರದವರೇ ಅವಕಾಶ ಮಾಡಿಕೊಟ್ಟಿದ್ದಾರೆಂದು ಹೇಳಬಹುದು. ಈ ಬಗ್ಗೆ ನನ್ನ ಸಲಹೆ ಎಂದರೆ ಸಮಾಜ ವಿಕಾಸ ಯೋಜನೆಯ ಅಂಗವಾಗಿ ಮೊದಲು ಒದಗಿಸುತ್ತಿದ್ದಂತೆ ಹೆಚ್ಚಿನ ಗ್ರಾಂಟನ್ನು ಒದಗಿಸಬೇಕು. ಇಲ್ಲದಿದ್ದರೆ ಈ ಅಧಿಕಾರಿಗಳನ್ನು ಬೇರೆ ಕಡೆಗೆ ಕಳುಹಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡಿನ ಪ್ರೆಸಿಡೆಂಟರು ಮತ್ತು ವೈಸ್-ಪ್ರೆಸಿಡೆಂಟರು ಮತ್ತು ಪಂಚಾಯಿತಿಯ ಛೇರ್ಮನ್ ಮತ್ತು ವೈಸ್-ಛೇರ್ಮನ್‌ಗಳು ನೇರವಾಗಿ ಚುನಾವಣೆಯಲ್ಲಿ ಆರಿಸಿ ಬರುವ ವ್ಯವಸ್ಥೆಯಾಗಬೇಕು. ಈ ವ್ಯವಸ್ಥೆಯನ್ನು ಜಾರಿಗೆ ತರುವುದಾಗಿ ಮಾನ್ಯ ಸಚಿವರೇ ಒಂದೆರಡು ಕಡೆ ಭಾಷಣ ಮಾಡಿದ್ದರು. ಅವರಂತೆ ಮಾಡುತ್ತಾರೆಂದು ನಂಬಿದ್ದೇನೆ.

ಇಂದು ಪ್ರತಿ ತಾಲ್ಲೂಕ್ ಬೋರ್ಡಿನಲ್ಲಿಯೂ ಗ್ರಾಮಸೇವಕರು ಎಂದು ಇದ್ದಾರೆ. ಇವರಿಗೆ ಸಂಬಳ ಕೊಡುವುದು, ರಜಾ ಮಂಜೂರು ಮಾಡುವುದು ಬಿ. ಡಿ. ಒ. ಆದರೂ ಸಹ ಇವರೆಲ್ಲರೂ ವ್ಯವಸಾಯ ಇಲಾಖೆಗೆ ಸೇರಿದವರಾಗಿದ್ದಾರೆ. ಇದರಿಂದ ಏನಾಗಿದೆ ಎಂದರೆ ಇವರನ್ನು ಕಂಟ್ರೋಲ್ ಮಾಡುವುದು ಕಷ್ಟವಾಗಿದೆ. ವ್ಯವಸಾಯ ಇಲಾಖೆಯಲ್ಲಿ ಕೇಳಿದರೆ ಬಿ. ಡಿ. ಒ. ಕೆಲಸ ಹೇಳಿದ್ದರು, ಹೋಗಿದ್ದೆ ಎಂದು ಹೇಳುತ್ತಾರೆ, ಬಿ. ಡಿ. ಒ. ಕೇಳಿದರೆ ವ್ಯವಸಾಯ ಇಲಾಖೆಯಲ್ಲಿ ಕೆಲಸ ಇತ್ತು ಹೋಗಿದ್ದೆ ಎಂದು ಹೇಳುತ್ತಾರೆ. ಈ ರೀತಿ ವಿವೇಕ ಇಲ್ಲದ ಕಾನೂನು ಮಾಡಿರುವುದರಿಂದ ಇವರ ತಪ್ಪು ದಾರಿಯಲ್ಲಿ ಹೋಗುವುದಕ್ಕೆ ಅವಕಾಶವಾಗಿದೆ. ಈ ತಪ್ಪನ್ನು ಸರಿಪಡಿಸಲು ಗ್ರಾಮಸೇವಕರ ಹತೋಟಿಯನ್ನು ಸಂಪೂರ್ಣವಾಗಿ ತಾಲ್ಲೂಕ್ ಬೋರ್ಡಿಗೆ ವಹಿಸಬೇಕು ಇಲ್ಲವೇ ವ್ಯವಸಾಯ ಇಲಾಖೆಗೆ ವಹಿಸಬೇಕು ಎಂದು ಹೇಳುತ್ತೇನೆ.

ಇಂದು ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಮಾಡಿಸಿದ್ದಾರೆ. ಯೋಜನೆ ಪ್ರಾರಂಭವಾದ ಒಂದು ತಿಂಗಳು ಮಾತ್ರ ಅಲ್ಲಿಯ ಜನರು ನೀರು ಕುಡಿದಿದ್ದಾರೆ ನಂತರ ಅದರ ಅನುಕೂಲವನ್ನು ಜನರು ಪಡೆಯುವುದಕ್ಕಾಗುತ್ತಿಲ್ಲ. ಇದಕ್ಕೆ ಕಾರಣವೆಂದರೆ ಪಂಪ್‌ಸೆಟ್ಟುಗಳು ಕೆಟ್ಟರೆ ಅದನ್ನು ರಿಪೇರಿ ಮಾಡಿಸಲು ಪಂಚಾಯಿತಿಯವರ ಹತ್ತಿರ ದುಡ್ಡು ಇರುವುದಿಲ್ಲ. ಮತ್ತೆ ಕೆಲವು ಪಂಚಾಯಿತಿಯವರಿಗೆ ಕರೆಂಟ್ ಚಾರ್ಜ್ ಕಟ್ಟಲು ಸಹ ದುಡ್ಡಿಲ್ಲ. ಈ ಕಾರಣದಿಂದ ಈ ಒಂದು ಜವಾಬ್ದಾರಿಯನ್ನು ಪಂಚಾಯಿತಿಯವರಿಂದ ತಪ್ಪಿಸಿ ತಾಲ್ಲೂಕ್ ಬೋರ್ಡಿನವರಿಗೆ ವಹಿಸಿ ಇಲ್ಲವೇ ಬೇರೆ ಏಜೆನ್ಸಿಯನ್ನಾದರೂ ಕ್ರಿಯೇಟ್ ಮಾಡಬೇಕು. ಈ ರೀತಿ ಮಾಡದಿದ್ದರೆ ಇಷ್ಟೊಂದು ಹಣವನ್ನು ಇದಕ್ಕಾಗಿ ಖರ್ಚು ಮಾಡಿಯೂ ಜನರಿಗೆ ಅನುಕೂಲವಾಗುವುದಿಲ್ಲವೆಂದು ಹೇಳುತ್ತೇನೆ. ಪಂಪ್ ಸೆಟ್ಟುಗಳು ಕೆಟ್ಟುಹೋದರೆ ಅದರ ಕಡೆಗೆ ಸರ್ಕಾರದವರು ಸರಿಯಾದ ಲಕ್ಷ ಕೊಟ್ಟು ರಿಪೇರಿ ಮಾಡಿಸುತ್ತಿಲ್ಲ, ಮತ್ತು ಆ ಬಗ್ಗೆ ಸರಿಯಾದ ವಿವೇಚನೆಯಿಂದ ವರ್ತಿಸುತ್ತಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ.

ನಮ್ಮ ಹಾಸನ ತಾಲ್ಲೂಕ್‌ನಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೆಗೆಸುವ ವಿಚಾರದಲ್ಲಿ ಕೆಲವು ಅಧಿಕಾರಿಗಳು 500-600 ರೂಪಾಯಿಗಳ ಕೆಲಸವಾಗಿರುವ ಕಡೆ 5000-6000 ರೂಪಾಯಿಗಳವರೆಗೆ ಪೇಮೆಂಟ್ ಮಾಡಿದ್ದಾರೆಂಬ ಕಾರಣದಿಂದ ಅಂತಹ ಕೇಸ್‌ಗಳನ್ನು ವಿಜಿಲೆನ್ಸ್‌ಗೆ ರೆಫರ್ ಮಾಡಲಾಗಿತ್ತು. ವಿಜಿಲೆನ್ಸ್‌ನವರು ಕೂಡಲೆ ತನಿಖೆ ಮಾಡದೆ ನಾಲ್ಕು ವರ್ಷದವರೆಗೆ ರೆಕಾರ್ಡ್‌ಗಳನ್ನು ಹಾಗೆಯೇ ಇಟ್ಟುಕೊಂಡು ಈಗ ಫೈನಲ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಈಗ ಯಾವ ಕಂಟ್ರಾಕ್ಟರ್ ಬಂದು ಆ ಕೆಲಸ ಮಾಡುವುದಕ್ಕೆ ತಯಾರಿದ್ದಾನೆ. ತಪ್ಪು ಮಾಡಿದ ಅಧಿಕಾರಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದ ವಿಜಿಲೆನ್ಸ್ ಅಧಿಕಾರಿಗಳೇ ತಪ್ಪು ಮಾಡಿದ ಅಧಿಕಾರಿಗಳ ಮನೆಗೆ ಹೋಗಿ ಅವರಿಂದ ಸಾವಿರಾರು ರೂಪಾಯಿಗಳ ಲಂಚ ಪಡೆದಿದ್ದಾರೆಂದು ಗೊತ್ತಾಗಿದೆ. ತಪ್ಪು ಮಾಡಿದ ಅಧಿಕಾರಿಗಳು ಇಂದು ಬೇರೆ ಬೇರೆ ದೊಡ್ಡ ಹುದ್ದೆಯಲ್ಲಿದ್ದುಕೊಂಡು ಸಾವಿರಾರು ರೂಪಾಯಿಗಳ ಸಂಬಳ ಪಡೆಯುತ್ತಿದ್ದಾರೆ. ಇವರ ಮೇಲೆ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣ ಇವರುಗಳು ಮಂತ್ರಿಗಳಿಗೆ ಬೇಕಾದವರು ಎಂದು ಗೊತ್ತಾಗಿದೆ. ವಿಜಿಲೆನ್ಸ್‌ನವರು ಮಾಡಿದ ತಪ್ಪಿಗೆ ಅವರೇ ಅರ್ಧವಾಗಿರುವ ಬಾವಿ ಕೆಲಸಗಳನ್ನು ಪೂರ್ತಿ ಮಾಡಿಸಿಕೊಡಬೇಕು. ಒಬ್ಬ ಕೆಳದರ್ಜೆ ನೌಕರ 5 ರೂಪಾಯಿ ಲಂಚ ತೆಗೆದುಕೊಂಡರೆ ಮನೆಗೆ ಕೂಡಲೇ ಕಳಿಸಿಬಿಡುತ್ತಾರೆ. ಅದೇ ಸಾವಿರಾರು ರೂಪಾಯಿಗಳ ಸಂಬಳ ಪಡೆಯುವ ಅಧಿಕಾರಿಗಳು ತಪ್ಪು ಮಾಡಿದರೆ ಅವರನ್ನು ದಾಕ್ಷಿಣ್ಯದ ಮೇಲೆ ಬಿಟ್ಟುಬಿಡುತ್ತಿದ್ದಾರೆ. ಇದು ಸರಿಯಲ್ಲ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಹೆಚ್ಚು ಹಣ ಒದಗಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ).—ಮಾನ್ಯ ಸಭಾಧ್ಯಕ್ಷರೇ, ಇವೊತ್ತಿನದಿವಸ ನಮ್ಮ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಮಂಡಿಸಿರುವ 21, 25 ಮತ್ತು 27ನೇ ಡಿಮ್ಯಾಂಡ್‌ಗಳಿಗೆ ನನ್ನ ಸಂಪೂರ್ಣವಾದ ಬೆಂಬಲ ಕೊಡುತ್ತಾ ಈ ಸಮಾಜ ಕಲ್ಯಾಣ ಶಾಖೆಯ ವಿಚಾರದಲ್ಲಿ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ಇಂದು ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಮತ್ತು ಜಗತ್ತಿನೊಳಗೇ ಇರತಕ್ಕಂಥ ಸಮಾಜದಲ್ಲಿ ಶ್ರೀಮಂತರು, ಬಡವರು ಮತ್ತು ಹಿಂದುಳಿದ ವರ್ಗದವರು ಎಂಬ ಭೇದಭಾವ ಇದೆ, ಈ ಕಾರಣದಿಂದಲೇ ಜನತೆ ಮತ್ತು ಸಮಾಜ ಭಿನ್ನವಾಗಿದೆ. ನಮ್ಮ ಭಾರತದಲ್ಲಿ ಅದರಲ್ಲಿಯೂ ನಮ್ಮ ರಾಜ್ಯದಲ್ಲಿ ವಿಚಿತ್ರವಾದಂಥ ಸಮಾಜವಿದೆ ಷೆಡ್ಯೂಲ್ ಕ್ಯಾಸ್ಟ್ ಎಂದು ಏನು ಹೇಳುತ್ತೇವೆ, ಆ ಕ್ಯಾಸ್ಟ್‌ನಲ್ಲಿ ಮೂರು ಕುಂದುಗಳಿವೆ. ಈ ಮೂರು ಕುಂದುಗಳು ಎಂದರೆ, ಬಡತನ ಅಜ್ಞಾನ ಮತ್ತು ಅಸ್ಪೃಶ್ಯತೆ ಈ ಮೂರು ಕುಂದುಗಳು ಹೇಗೆ ನಿವಾರಣೆಯಾಗಬೇಕು ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇಂದು ಆರ್ಥಿಕ ಮತ್ತು ಸಾಮಾಜಿಕ ವಿಷಮತೆಗಳೆರಡೂ ಸಹ ಕೂಡಿಯೇ ಹೋಗುತ್ತಿವೆ. ನಮ್ಮಲ್ಲಿರುವ ಸಾಮಾಜಿಕ ವಿಷಮತೆಯು ಆರ್ಥಿಕ ವಿಷಮತೆಗೆ ಪ್ರೋತ್ಸಾಹ ಕೊಡುತ್ತಿದೆ. ಇದು ಹೋಗಬೇಕಾದರೆ ನಾವು ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಇದುವರೆಗೂ ಸರ್ಕಾರದವರು ಈ ಸಮಾಜದ ಉನ್ನತಿಗಾಗಿ ಸ್ವಲ್ಪ ಖರ್ಚು ಮಾಡುತ್ತಾ ಬಂದಿದ್ದಾರೆ. ಶಿಕ್ಷಣ ವಿಷಯದಲ್ಲಿ ಹೆಚ್ಚು ಪ್ರೋತ್ಸಾಹ ಕೊಡಬೇಕು. ಈ ಸಮಾಜದ ಉನ್ನತಿ ಆಗಬೇಕಾದರೆ, ಈ ಸಮಾಜದ ಕಲ್ಯಾಣ ಆಗಬೇಕಾದರೆ ಎಷ್ಟು ಹಣ ಖರ್ಚು ಮಾಡಿದರೂ ಆಗುವುದಿಲ್ಲ. ಆ ರೀತಿ ಸರ್ಕಾರದವರು ಖರ್ಚು ಮಾಡಿದಂತಹ ಹಣ ಆ ಜನತೆಗೆ ಮುಟ್ಟಬೇಕು. ಆ ದಿಶೆಯಲ್ಲಿ ಸರ್ಕಾರದವರು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಬೇಕು. ಈ ಸಮಾಜದ ಪರಿವರ್ತನೆಯಾಗಬೇಕು. ಕೆಲವು ಪ್ರಸಂಗಗಳಲ್ಲಿ ಸರ್ಕಾರದವರು ಈ ಜನಾಂಗದವರಿಗೆ ಕೊಟ್ಟಂತಹ ಸಹಾಯ ಸೌಲಭ್ಯಗಳು ಅವರಿಗೆ ಮುಟ್ಟುವುದಿಲ್ಲ. ಕೆಲವು ಸಂದರ್ಭದಲ್ಲಿ ಸರ್ಕಾರದಿಂದ ಏನು ಸೌಲಭ್ಯಗಳು ಈ ಜನಾಂಗದವರಿಗೆ ಸಿಕ್ಕುತ್ತವೆ ಅದನ್ನು ಯಾವರೀತಿ ಪಡೆಯಬೇಕು ಎಂಬುದು ಕೂಡ ಈ ಜನರಿಗೆ ಗೊತ್ತಿರುವುದಿಲ್ಲ. ಇದರಲ್ಲಿ ಏನು ಆತಂಕಗಳು ಬರುತ್ತವೆ ಎಂಬುದನ್ನು ನಾನು ತಮಗೆ ಹೇಳುತ್ತೇನೆ. ಸರ್ಕಾರದವರು ಈ ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್‌ಗಳನ್ನು ಮಂಜೂರು ಮಾಡುತ್ತಾರೆ. ಆದರೆ ಅವು ವಿದ್ಯಾರ್ಥಿಗಳಿಗೆ ಸರಿಯಾಗಿ ಸಿಕ್ಕುತ್ತಿಲ್ಲ. ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಭಾಗದಲ್ಲಿ ಒಂದು ಊರಿನಲ್ಲಿ 45 ಜನಗಳ ಪೈಕಿ 3 ಜನ ಹುಡುಗರಿಗೆ ಮಾತ್ರ ಸ್ಕಾಲರ್ ಷಿಪ್ ಕೊಟ್ಟು, ಉಳಿದವರಿಗೆ ಸ್ಕಾಲರ್‌ಷಿಪ್ ಬಂದು ಮಾಡಿದ್ದಾರೆ ಎಂದು ಬಂದು ನನಗೆ ಹೇಳಿದರು. ನನಗೆ ಆಶ್ಚರ್ಯವಾಯಿತು. ಏತಕ್ಕೆ ಆ ರೀತಿ ಆ ಹುಡುಗರಿಗೆ ಸ್ಕಾಲರ್‌ಷಿಪ್‌ಅನ್ನು ಬಂದು ಮಾಡಿದ್ದಾರೆ ಎಂದು ನಾನು ನಮ್ಮ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಕೇಳಿದಾಗ ಆ ಅರ್ಜಿಗಳು ತಪ್ಪಾಗಿ ಬಂದಿವೆ ಎಂದು ಗೊತ್ತಾಯಿತು. ಒಂದು ವೇಳೆ ಅರ್ಜಿಗಳು ತಪ್ಪಾಗಿ ಬಂದಿದ್ದರೆ ಆ ಅಧಿಕಾರಿಗಳು ಸಂಬಂಧಪಟ್ಟ ಹೈಸ್ಕೂಲಿನ ಮುಖ್ಯೋಪಾಧ್ಯಾಯರಿಗೆ ಬರೆದು ಸರಿಯಾದ ಅರ್ಜಿ

(ಶ್ರೀ ಪಿ. ಪಿ. ಸೆಗರೆ)

ಯನ್ನು ತರಸಿಕೊಂಡು ಹುಡುಗರಿಗೆ ಸ್ಕಾಲರ್‌ಷಿಪ್ ಮಂಜೂರು ಮಾಡಬಹುದಾಗಿತ್ತು. ಅರ್ಜಿಗಳು ತಪ್ಪಾಗಿ ಬಂದಿವೆ ಎಂದು ಸ್ಕಾಲರ್‌ಷಿಪ್ ತಿರಸ್ಕಾರ ಮಾಡಿದರೆ ಅವರ ಕೆಲಸ ಮುಗಿಯಿತು ಎಂದು ಅವರ ಭಾವನೆ. ಈ ರೀತಿಯಾಗಿ ನಮ್ಮಲ್ಲಿ ನಾಲ್ಕಾರು ಹುಡುಗರಿಗೆ ಸ್ಕಾಲರ್‌ಷಿಪ್ ಸಿಕ್ಕಿಲ್ಲ. ಇದರಲ್ಲಿ ಏನಾಗಿದೆ ಎಂದರೆ ಯಾರ ಕೈಯಲ್ಲಿ ಅಧಿಕಾರ ಇವೆಯೋ ಅವರಿಗೆ ಈ ಸಮಾಜದಲ್ಲಿ ಆಸ್ಥೆ ಇಲ್ಲ. ಈ ಸಮಾಜದ ಉನ್ನತಿಯಾಗಬೇಕೆಂದು ಅವರು ಬಯಸುವುದಿಲ್ಲ. ಈ ಸಮಾಜದ ಬಗ್ಗೆ ಅವರಲ್ಲಿ ತಿರಸ್ಕಾರವೇ ಆಗಿದೆ ಇಂಥ ಅಧಿಕಾರಿಗಳಲ್ಲಿ ಈ ಸಮಾಜದ ಕಲ್ಯಾಣವಾಗಬೇಕು ಎನ್ನುವಂಥಾ ತಳಮಳ ಇರಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಈ ಸಮಾಜದ ಉನ್ನತಿಗಾಗಿ ಹೃತ್ಪೂರ್ವಕವಾಗಿ ದುಡಿಯಬೇಕು ಎನ್ನುವಂಥಾ ತಳಮಳ ಇರಬೇಕು. ಆದ್ದರಿಂದ ಈ ಸಮಾಜ ಕಲ್ಯಾಣ ಸಾಧಿಸಬೇಕಾದರೆ ಈ ಸಮಾಜ ಕಲ್ಯಾಣ ಇಲಾಖೆಯಲ್ಲಿಯ ಮತ್ತು ಇತರ ಇಲಾಖೆಯಲ್ಲಿಯ ಮುಖ್ಯಸ್ಥಾನಗಳಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರ್ಯಾಯಬ್ಸ್ ಅವರನ್ನೇ ಇಲಾಖೆಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಸೇರಿಸಿಕೊಳ್ಳುವಾಗ ಅಂಥಾ ಜನರನ್ನು ಸೇರಿಸಿಕೊಳ್ಳಬೇಕು ಎಂದು ನಾನು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಎರಡನೆಯ ವಿಷಯ. ಯಾವುದೇ ಮನುಷ್ಯರಾಗಲೀ ಅವರು ಮುಂದೆ ಬರಬೇಕಾದರೆ ಅವನಿಗೆ ಆಸ್ತಿ ಬೇಕು, ಸಂಪತ್ತು ಬೇಕು, ಈ ಹರಿಜನಗಿರಿಜನರಿಗೆ ಯಾವುದೇ ಆಸ್ತಿ ಇಲ್ಲ, ಭೂಮಿ ಇಲ್ಲ, ಹೀಗಾದರೆ ಅವರು ಯಾವರೀತಿ ಬದುಕಬೇಕು ? ಈ ದಿಶೆಯಲ್ಲಿ ಸರ್ಕಾರ ಇದುವರೆಗೆ ಆ ಜನಗಳ ಬಗ್ಗೆ ವಿಚಾರ ಮಾಡಿದ ಹಾಗೆ ಕಾಣುವುದಿಲ್ಲ ಎಂದು ನಾನು ದುಃಖದಿಂದ ಹೇಳುತ್ತಿದ್ದೇನೆ. ಸ್ವಲ್ಪ ಸ್ಕಾಲರ್‌ಷಿಪ್ ಕೊಟ್ಟು ಅವರಿಗೆ ಕೆಲ ಮನೆಗಳನ್ನು ಕಟ್ಟಿಸಿ ಕೊಟ್ಟರೆ ಆ ಸಮಾಜದ ಉದ್ಧಾರ ಆಗುವುದಿಲ್ಲ. ಆ ಸಮಾಜದ ಉದ್ಧಾರ ಆಗಬೇಕಾದರೆ ಏನು ಮಾಡಬೇಕೆಂಬುದನ್ನು ವಿಚಾರ ಮಾಡಬೇಕು. ಆ ಸಮಾಜದವರು ದುಡಿಯುವುದಕ್ಕೆ ತಯಾರಾಗಿದ್ದಾರೆ, ಆದರೆ ಅವರಿಗೆ ದುಡಿಯುವುದಕ್ಕೆ ಕೆಲಸವನ್ನು ಕೊಡಬೇಕು. ಅವರು ದುಡಿದು ಕೆಲಸ ಮಾಡುವುದಕ್ಕೆ ಅವರಿಗೆ ಆಸ್ತಿಯಿಲ್ಲ. ದುಡಿಯಬೇಕಾದರೆ ಅವರಿಗೆ ಸ್ವಂತ ಭೂಮಿ ಇಲ್ಲ. ನೌಕರಿ ಮಾಡುವುದಕ್ಕೆ ಅವರಿಗೆ ಜ್ಞಾನವಿಲ್ಲ, ವಿದ್ಯೆ ಇಲ್ಲ. ಈ ಜನಾಂಗದ ಉದ್ಧಾರದ ಬಗ್ಗೆ ನಾನು ಕೊನೆಗೆ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಈ ಸಮಾಜಕ್ಕೆ ಶಿಕ್ಷಣ ಹೊರತು ಬೇರೆ ಮಾರ್ಗವಿಲ್ಲ. ಅವರಿಗೆ ಸರ್ಕಾರದವರು ಭೂಮಿ ಕೊಡುವುದಕ್ಕೆ ಸಾಧ್ಯವಿಲ್ಲ, ಕೆಲಸ ಕೊಡುವುದಕ್ಕೆ ಸಾಧ್ಯವಿಲ್ಲ. ಅವರು ಏನು ಮಾಡಬೇಕು? ಅವರು ಶಿಕ್ಷಣವನ್ನು ಪಡೆದು ಒಳ್ಳೆ ನಾಗರೀಕರಾಗಿ ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡಿ ಹೊಟ್ಟೆಯನ್ನು ತುಂಬಿಕೊಳ್ಳಬೇಕು. ಉಪಜೀವನವನ್ನು ಮಾಡಿಕೊಳ್ಳಬೇಕು, ಈ ದೃಷ್ಟಿಯನ್ನು ಇಟ್ಟುಕೊಂಡು ಸರ್ಕಾರದವರು ಅವರಿಗೆ ಸಹಾಯ ಮಾಡಬೇಕು. ಈ ಜನ ವಿದ್ಯಾವಂತರಾಗಿ ಸರ್ಕಾರದ ಮೇಲಿನ ಹುದ್ದೆಗಳಿಗೆ ಬರುವವರೆಗೂ ಈ ಜನರ ಕಲ್ಯಾಣ ಅಸಾಧ್ಯ ಎಂದು ನಾನು ಭಾವಿಸುತ್ತೇನೆ. ಕೀ ಪೋಸ್ಟುಗಳಲ್ಲಿ ಈ ಜನಾಂಗದವರು ಬರಬೇಕು. ಅವರು ಈ ಜನಾಂಗದವರ ಕಷ್ಟಗಳನ್ನು ಅರಿತು ಅವರಿಗೆ ಸಹಾಯ ಮಾಡಬೇಕು. ಸರ್ಕಾರದ ಮೇಲ್ಮಟ್ಟದ ಹುದ್ದೆಗಳಿಗೆ ಅವರು ಬರಬೇಕು. ಎಲ್ಲಿಯವರೆಗೆ ನಮ್ಮ ಜನ ಆ ಹುದ್ದೆಗಳಿಗೆ ಹೋಗುವುದಿಲ್ಲ ಅಲ್ಲಿಯವರೆಗೆ ಈ ಸಮಾಜವನ್ನು ಉದ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಹರಿಜನಗಿರಿಜನರಿಗೆ ಸರ್ಕಾರದವರು ಏನೋ ನಾಲ್ಕಾರು ಜನಗಳಿಗೆ ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ. ಅದು ಸಾಲುವುದಿಲ್ಲ. ಮುಖ್ಯವಾಗಿ ಈ ಜನಾಂಗದ ಮಕ್ಕಳಿಗೆ ಶಿಕ್ಷಣ ಪಡೆದು ವಿದ್ಯಾವಂತರಾಗುವುದಕ್ಕೆ ಹೆಚ್ಚು ಸಹಾಯ ಮಾಡಬೇಕು. ಈಗ ಕೊಡತಕ್ಕ 30–40–50 ರೂಪಾಯಿ ಸ್ಕಾಲರ್‌ಷಿಪ್ ಅವರಿಗೆ ಸಾಕಾಗುವುದಿಲ್ಲ. ಅದನ್ನು ಡಬಲ್ ಮಾಡಬೇಕು. ಅವರಿಗೆ ಯಾವುದೇ ಸ್ವಂತ ಆಸ್ತಿ ಇರುವುದಿಲ್ಲ. ಇದರಿಂದಾಗಿ ಅವರು ತಮ್ಮ ಕೈಯಿಂದ ಖರ್ಚು ಹಾಕಿ ವಿದ್ಯಾಭ್ಯಾಸ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಅವರಿಗೆ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿದ್ದರೆ ಕೆಲವು ಹರಿಜನ ಗಿರಿಜನ ಗ್ರಾಜುಯೇಟ್ಸ್ ಆಗಿದ್ದಾರೆ. ಅವರಿಗೆ ಯಾವುದಾದರೂ ಕೆಲಸಕ್ಕೆ ಇಂಟರ್‌ವ್ಯೂ ಬಂದಾಗ ಅವರು ಬೆಂಗಳೂರಿನ ಇಂಟರ್‌ವ್ಯೂಗೆ ಬರುವುದಕ್ಕೆ ಸಹ ಅವರ ಹತ್ತಿರ ಖರ್ಚು ಇಲ್ಲ. ಈ ಸಮಸ್ಯೆಯನ್ನು ಸರ್ಕಾರದವರು ಅರಿತುಕೊಳ್ಳಬೇಕು.

ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ಹೇಳಿದ ಹಾಗೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ 100 ಜನ ಹರಿಜನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಹಾಸ್ಟಲುಗಳನ್ನು ಪ್ರಾರಂಭ ಮಾಡಬೇಕು. ಅವರು ಗ್ರಾಜುಯೇಟ್ಸ್ ಆದರೆ ಅವರ ಶಿಕ್ಷಣ ಮುಗಿಯುವುದಿಲ್ಲ. ನಮ್ಮ ಹರಿಜನ

ಗಿರಿಜನರಲ್ಲಿಯು ಬುದ್ಧಿವಂತ ವಿದ್ಯಾರ್ಥಿಗಳನ್ನು ಆರಿಸಿ ಅವರನ್ನು ವುಚ್ಛ ಶಿಕ್ಷಣಕ್ಕೆ ಕಳುಹಿಸಬೇಕು, ಅವರಿಗೆ ಆರ್ಥಿಕವಾಗಿ ಸಹಾಯ ಮಾಡಬೇಕು, ಅವರಿಗೆ ನೌಕರಿಯಲ್ಲಿ ಮತ್ತು ಪ್ರಮೋಷನ್‌ನಲ್ಲಿ ಇಷ್ಟು ಪರ್ಸೆಂಟ್ ಎಂದು ರಿಜರ್ವೇಷನ್ ಇಡಬೇಕು. ಎಲ್ಲಿ ಹರಿಜನಗಿರಿಜನರಿಗೆ 18 ಪರ್ಸೆಂಟ್ ಕೆಲಸಗಳನ್ನು ಕೊಟ್ಟಿಲ್ಲ ಅಂಥಾಕಡೆ ಅದನ್ನು ತೀವ್ರವಾಗಿ ತುಂಬಬೇಕು. ಖಾಸಗಿ ಸಂಸ್ಥೆಗಳಲ್ಲಿ, ಕಾರ್ಖಾನೆಗಳಲ್ಲಿ ಹರಿಜನ ಗಿರಿಜನರಿಗೆ 18 ಪರ್ಸೆಂಟ್ ಕೆಲಸಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಎಲ್ಲಿ ಹರಿಜನ ಗಿರಿಜನರಿಗೆ ಸರ್ಕಾರದವರು ಕೊಡತಕ್ಕಂಥಾ ಸೌಲಭ್ಯಗಳು ಮುಟ್ಟುವುದಿಲ್ಲ ಅಂಥಾ ಕಡೆ ನೋಡಿ ಸರಿಪಡಿಸುವುದಕ್ಕೆ ಒಬ್ಬ ಯೋಗ್ಯ ವಿಸ್ತರಣಾಧಿಕಾರಿಯನ್ನು ನೇಮಕ ಮಾಡಬೇಕು. ಇವರಿಗೆ ಜಿಲ್ಲಾ ಕೇಂದ್ರಗಳಲ್ಲಿ ಸ್ವತಂತ್ರವಾದ ಆಫೀಸನ್ನು ಕೊಟ್ಟರೆ ಒಳ್ಳೆಯದು. ಏಕೆಂದರೆ ಅವರು ಇವತ್ತು ಇನ್ನೊಬ್ಬರ ಅಧೀನದಲ್ಲಿದ್ದುಕೊಂಡು ಕೆಲಸ ಮಾಡಬೇಕಾಗಿದೆ. ಇಲ್ಲದಿದ್ದರೆ ಇವರ ಹುದ್ದೆಯನ್ನು ಮೇಲಕ್ಕೆ ಏರಿಸಿ ಇವರಿಗೆ ಒಂದು ಸ್ವತಂತ್ರವಾದ ಆಫೀಸನ್ನು ಕೊಟ್ಟರೂ ಪರವಾಗಿಲ್ಲ. ಈ ಸಮಾಜಗಳ ಕಷ್ಟ-ನಷ್ಟಗಳನ್ನು ಅರಿತು ಅವನ್ನು ದೂರ ಮಾಡಲು ಸಮರ್ಥವಾಗುವದರ ಸಲುವಾಗಿ ಜಿಲ್ಲೆಯ ಸಮಾಜ ಕಲ್ಯಾಣ ಅಧಿಕಾರಿಗೆ ವಾಹನವನ್ನು ಒದಗಿಸಿ ಕೊಡಬೇಕು.

ಇನ್ನು ಅಸ್ಪೃಶ್ಯತೆ ಬಗ್ಗೆ ಕಾನೂನು ಇದ್ದರೂ ಏನು ಪ್ರಯೋಜನವಾಗುತ್ತಿಲ್ಲ. ನಾನು ಇದರ ಬಗ್ಗೆ ಮೊದಲು ಸಹ ಒಂದು ಸೂಚನೆ ಮಾಡಿದ್ದೆ. ಇದಕ್ಕೆ ಕೇವಲ ಕಾನೂನು ಮಾಡಿದರೆ ಹೋಗುವುದಿಲ್ಲ; ಇದಕ್ಕೆ ಒಂದು ಮಾನಸಿಕ ಬದಲಾವಣೆಯಾಗಬೇಕು. ನಮ್ಮ ಮೈಸೂರು ರಾಜ್ಯದ ಪಂಚಾಯತುಗಳು ಮತ್ತು ತಾಲೂಕು ಬೋರ್ಡುಗಳು ಕಾನೂನಿನಲ್ಲಿ ಸಾರ್ವಜನಿಕ ಸ್ಥಳಗಳಿಗೆ ಅಸ್ಪೃಶ್ಯರಿಗೆ ಪ್ರವೇಶ ದೊರಕಿಸಿ ಕೊಡುವ ಬಗ್ಗೆ ಆದೇಶ ಇದೆ. ಆದರೂ ಸಾರ್ವಜನಿಕ ಸ್ಥಳಗಳಲ್ಲಿ ಈ ಜನರಿಗೆ ಪ್ರವೇಶ ಸಿಗುವುದಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಬಾವಿ, ಹೋಟೆಲುಗಳಿಗೆ ಎಲ್ಲಿ ಪ್ರವೇಶ ಸಿಗುವುದಿಲ್ಲವೋ ಅಂಥ ಕಡೆಗಳಲ್ಲಿ ಪಂಚಾಯತುಗಳಿಗೆ ಮತ್ತು ತಾಲೂಕು ಬೋರ್ಡುಗಳಿಗೆ ಕೊಡುವಂತಹ ಗ್ರಾಂಟನ್ನು ನಿಲ್ಲಿಸಬೇಕು. ಇಂಥ ಕ್ರಾಂತಿಕಾರಕ ಕ್ರಮಗಳನ್ನು ಪಾಲನೆ ಮಾಡದಿದ್ದರೆ ಇದರಲ್ಲಿ ಯಾವ ಪ್ರಗತಿಯನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ.

ಅದೇ ರೀತಿ 18 ಪರ್‌ಸೆಂಟ್ ಹಣವನ್ನು ಪಂಚಾಯತಿಗಳು ಮತ್ತು ತಾಲೂಕು ಬೋರ್ಡುಗಳು ಇಡಬೇಕೆಂದು ಇದೆ. ಆದರೆ ಯಾರೂ ಆ ರೀತಿ ಮಾಡುತ್ತಾ ಇಲ್ಲ. ಇದನ್ನು ಸರ್ಕಾರ ನೋಡಿ, ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಉಪಾಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಯನ್ನು ಇಲ್ಲಿ ಮಾನ್ಯ ಮಂತ್ರಿಯವರು ಇಟ್ಟಿದ್ದಾರೆ. ಇದನ್ನು ಅಪೋಸ್ ಮಾಡುವ ಪ್ರಶ್ನೆ ಬರುವುದಿಲ್ಲ. ಇದಕ್ಕೆ ಸ್ವಲ್ಪ ಕಡಿಮೆ ಇಟ್ಟಿದ್ದಾರೆ. ಇದಕ್ಕೆ ಇನ್ನೂ ಹೆಚ್ಚಿಗೆ ಇಟ್ಟಿದ್ದರೆ ಚೆನ್ನಾಗಿತ್ತು. ಅದನ್ನು ಮಂತ್ರಿಯವರು ಕೇಳದೆ ಸುಮ್ಮನೆ ಕೂತಿದ್ದಾರೆಂದು ಕಾಣುತ್ತದೆ. ನಿನ್ನೆ ಒಂದು ಪ್ರಶ್ನೆಗೆ ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ಉತ್ತರ ಕೊಡುತ್ತಾ ಕಾರ್ಲ್ ಮಾರ್ಕ್ಸ್ ಬಗ್ಗೆ ಹೇಳಿದರು. ಆದರೆ ಆ ತತ್ವವನ್ನು ನೀವು ಪಾಲನೆ ಮಾಡುತ್ತೀರಾ ಎಂದು ಕೇಳುತ್ತೇನೆ. ಈ ಇಲಾಖೆಗೆ ಏನು ಹಣ ಖರ್ಚುಮಾಡುತ್ತಿದ್ದಾರೆ ಅದು ನೇರವಾಗಿ ಈ ವರ್ಗದ ಜನರಿಗೆ ಮುಟ್ಟುತ್ತದೆಯೇ ಎಂದು ನೋಡಿದರೆ ಅದರಲ್ಲಿ ಸಂಶಯ ಬರುತ್ತದೆ. ಹಿಂದಿನ 25 ವರ್ಷಗಳಿಂದ ಇದನ್ನು ಮಾಡುತ್ತಾ ಬಂದರೂ ಇದರಲ್ಲಿ ಯಶಸ್ವಿಯಾಗಲಿ. ಈ ಸರ್ಕಾರ ಸೋಶಿಯಲಿಸಂ ಹೆಸರು ಹೇಳಿಕೊಂಡು ಬಂದರೂ ಇಲ್ಲಿರುವ ಯಾವ ಸಮಸ್ಯೆಯನ್ನೂ ಇವರಿಗೆ ಟ್ಯಾಕ್ಲ್ ಮಾಡಲಿಕ್ಕಾಗಲಿಲ್ಲ. ಇವತ್ತು ಇದರಲ್ಲಿ ಬರುವಂತಹ ಒಂದು ಸಮಸ್ಯೆ ಅಂದರೆ, ಮಧ್ಯದಲ್ಲಿ ಏನೊಂದು ವರ್ಗ ಇದೆ ಅದುವೇ ಇದಕ್ಕೆ ಮೂಲ ಕಾರಣವೆಂದು ಹೇಳಬಹುದು. ಈ ವರ್ಗವೇ ಒಂದು ಎಕ್ಸ್‌ಪ್ಲಾಯಿಟೇಶನ್ ಕ್ಲಾಸ್ ಎಂದು ಹೇಳಬಹುದು. ಇವತ್ತು ಎಲ್ಲಾ ಎಕನಾಮಿಕ್ ಆಕ್ಟಿವಿಟೀಸ್ ಇವರ ಕೈಯಲ್ಲಿ ಇದೆ. ಇವರು ಈ ಹಿಂದುಳಿದ ವರ್ಗದ ಜನರಿಗೆ ಏನು ಅನುಕೂಲವನ್ನು ಸರ್ಕಾರ ಕಲ್ಪಿಸಿಕೊಡುತ್ತಿದ್ದಾರೆ ಅದನ್ನು ಮಧ್ಯದಲ್ಲಿಯೇ ಕಸಿದುಕೊಂಡು ಬಿಡುತ್ತಿದ್ದಾರೆ. ಆದ್ದರಿಂದ ಅವರ ಕೈಯಿಂದ ನಾವು ಯಾವಾಗ ಮೀನ್ಸ್ ಆಫ್ ಪ್ರೊಡಕ್ಷನನ್ನು ತೆಗೆದುಕೊಳ್ಳುವುದಿಲ್ಲ, ಮತ್ತು ಎಲ್ಲಿಯವರೆಗೆ ನಾವು ಒಂದು ಸೈಂಟಿಫಿಕ್ ಸೋಸಿಯಲಿಸಂ ಜಾರಿಗೆ ತರುವುದಿಲ್ಲ ಅಲ್ಲಿಯವರೆಗೆ ಈ ಜನರ ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಇದು ಮಾಡದಿದ್ದರೆ ನಿಮಗೆ ಎಷ್ಟು ಆನೆಸ್ಟ್ ಇಂಟೆನ್‌ಶನ್ ಇದ್ದರೂ ಕೂಡ ಯಶಸ್ವಿಯಾಗಿ ಇದನ್ನು ಕಾರ್ಯಗತ ಮಾಡುವುದಕ್ಕಾಗು

(ಶ್ರೀ ವಿ. ಎನ್. ಪಾಟೀಲ್)

ವುದಿಲ್ಲ. ಇದಕ್ಕೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಬಂಗ್ಲಾರ್ ಗ್ರಾಮ ಇದೆ. ಅಲ್ಲಿ ಸ್ಟೇಟ್ ರೂರಲ್ ಕಮ್ಯುನಿಕೇಶನ್ ಪ್ರಕಾರ 5 ಮೈಲಿನ ರಸ್ತೆ ಮಾಡಿದರೆ ಅದರಿಂದ ಟ್ರೈಬಲ್ ಏರಿಯಕ್ಕೆ ಅನುಕೂಲವಾಗುತ್ತದೆ. ಆದರೆ ಅದನ್ನು ಮಾಡಿದರೆ ಅಲ್ಲಿರುವಂತಹ ಶ್ರೀಮಂತರ ಹೊಲದ ಬೇಲಿಗೆ ತೊಂದರೆಯಾಗುತ್ತದೆ ಎಂದು ಅಲ್ಲಿನ ಗ್ರಾಮದ ಶ್ರೀಮಂತರು ಅದಕ್ಕೆ ಪರ್ಮಿಶನ್ನೇ ಕೊಡಲಿಲ್ಲ. ಇದರಿಂದ ಸರ್ಕಾರದವರು ತಮ್ಮ ಇಂಪೊಟೆನ್ಸಿಯನ್ನು ತೋರಿಸಿದ್ದಾರೆ. ಇದನ್ನು ನನಗೆ ಯಾವ ಭಾಷೆಯಲ್ಲಿ ಕ್ರಿಟಿಸೈಸ್ ಮಾಡಬೇಕೆಂದು ಅರ್ಥವಾಗುವುದಿಲ್ಲ. ಶ್ರೀಮಂತ ಜನರು ಯಾವ ತರಹ ಬಡ ಜನರ ಎಕ್ಸ್‌ಪ್ಲಾಯ್ಟೇಶನ್ ಮಾಡುತ್ತಿದ್ದಾರೆ ಮತ್ತು ಸರ್ಕಾರದವರು ಹೇಗೆ ಇದನ್ನು ನೋಡಿಕೊಂಡು ಕೂತಿದ್ದಾರೆಂದು ನಾವು ನೋಡುತ್ತಿದ್ದೇವೆ. ಅದೇ ಗ್ರಾಮದಲ್ಲಿ ಇರುವಂತಹ ಹರಿಜನವಾಡಿಗೆ ಲೈಟ್, ಮತ್ತು ಲೈಟ್ ಕಂಬಗಳನ್ನು ಕೊಡುವುದಕ್ಕೆ ಇವರು ತಯಾರಾಗಿಲ್ಲ. ಗ್ರಾಮ ಪಂಚಾಯತಿಯವರು ಇಲ್ಲಿಯವರೆಗೆ ಆ ಸೌಕರ್ಯ ಕೊಡುವುದಕ್ಕೆ ತಯಾರಾಗಿಲ್ಲ. ಏಕೆಂದರೆ ತಮ್ಮಂತೆ ಅವರು ಸಹ ಬೆಳಕಿನಲ್ಲಿ ಕೂತುಕೊಂಡು ಅದು ಒಂದು ರೀತಿಯ ಇನ್‌ಸಲ್ಟ್ ಎಂದು ಇವರು ಪರಿಗಣಿಸಿದ್ದಾರೆ. ಪಂಚಾಯತಿನಲ್ಲಿ ಯಾವುದೋ ಪಾರ್ಟಿಯ ಹೆಸರು ಹೇಳಿಕೊಂಡು ಬಂದು ಈ ರೀತಿ ಮಾಡುತ್ತಿದ್ದಾರೆ. ಇದರ ಬಗ್ಗೆ ಪಂಚಾಯತಿಯವರು ಒಂದು ರಿಸೊಲ್ಯೂಶನ್ ಮಾಡಿ ಅಲ್ಲಿಗೆ ಲೈಟ್ ಕಂಬಗಳನ್ನು ಹಾಕುವುದಕ್ಕೆ ಮನಸ್ಸು ಮಾಡಿಲ್ಲ. ಇದನ್ನು ನಾನು ಜಿಲ್ಲಾ ಡೆವಲಪ್‌ಮೆಂಟ್ ಕೌನ್ಸಿಲಿನಲ್ಲಿಯೂ ಡಿಸ್ಕಸ್ ಮಾಡಿದ್ದೇನೆ; ಮತ್ತು ಮಂತ್ರಿಯವರ ಜೊತೆ ಸಹ ಡಿಸ್ಕಸ್ ಮಾಡಿದ್ದೇನೆ. ಇವತ್ತು ಬರೇ ಡಿಸ್ಕಶನ್ ಮಾಡುವುದರಿಂದ ಭಾಷಣ ಮಾಡುವುದರಿಂದ ಈ ರಾಷ್ಟ್ರಘಾತುಕ ಶಕ್ತಿಗಳು ಏನಿವೆ, ಅವು ಕಮ್ಮಿಯಾಗುವುದಿಲ್ಲ. ಅದನ್ನು ನಾವು ಯಾವಾಗ ತುಳಿಯುವುದಿಲ್ಲವೋ ಅಲ್ಲಿಯವರೆಗೆ ನಾವು ಬರೇ ಭಾಷಣ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದೇ ರೀತಿ ಇವತ್ತು ಕಮ್ಯುನಿಟಿ ವೆಲ್ಫೇರ್ ಮಾಡಿದರೆ ಅದು ಏಕೆ ಸಕ್ಸಸ್ ಆಗುವುದಿಲ್ಲ ? ಇದಕ್ಕೆ ಹಲವಾರು ಕಾರಣಗಳು ಇವೆ. ಇವತ್ತು ನಿಮ್ಮ ಅಡ್ಮಿನಿಸ್ಟ್ರೇಟಿವ್ ಮೆಶಿನರಿ ಏನಿದೆ, ಅದನ್ನು ಸ್ಟ್ರೀಮ್‌ಲೈನ್ ಮಾಡಬೇಕು. ಇದರಲ್ಲಿ ಯಾರಿಗೆ ಫೈತ್ ಇಲ್ಲವೋ ಅವರನ್ನು ಈ ಕೆಲಸಕ್ಕೆ ಹಾಕಬಾರದು. ಅಂಥ ಜನರಿಂದ ಈ ಡೌನ್ ಟ್ರಾಡನ್ ಜನರೇನು ಇದ್ದಾರೆ, ಅವರಿಗೆ ನ್ಯಾಯ ಸಿಗುವುದಿಲ್ಲ ಮತ್ತು ಅವರು ಮುಂದೆ ಬರುವುದಿಲ್ಲ. ಇವತ್ತು ಒಬ್ಬ ಕಾಲಿಗೆ ಚಪ್ಪಲಿ ಹಾಕಿಕೊಂಡು ನಡೆದರೆ, ಬಾಕಿ ಜನರಿಗೆ ಅದನ್ನು ಕಂಡರೆ ಆಗುವುದಿಲ್ಲ. ಓಹೋ, ಏನು ಚಪ್ಪಲಿ ಹಾಕಿಕೊಂಡು ನಡೆಯುವುದಕ್ಕೆ ಪ್ರಾರಂಭ ಮಾಡಿದ್ದಾನೆ ಎಂದು ಟೀಕೆ ಮಾಡುತ್ತಿದ್ದಾರೆ. ಅಂಥ ಜನರು ಈಗಲೂ ಅನೇಕರು ಇದ್ದಾರೆ. ನಾವು ಇಲ್ಲಿ ಜಾತೀಯತೆಯನ್ನು ಹೋಗಲಾಡಿಸಬೇಕೆಂದು ಬಹಳ ಇಮೋಶನಲ್ಲಾಗಿ ಮಾತನಾಡಿ ಚರ್ಚೆ ಮಾಡುತ್ತಿದ್ದೇವೆ. ಅದೇ ರೀತಿ ಜಾತೀಯತೆ ವಿಚಾರ ಇಲ್ಲಿ ಬಂದಾಗ ಫುಟ್‌ಬಾಲ್ ಚೆಂಡು ಹಾರಿದ ಹಾಗೆ ಒಬ್ಬರ ಮೇಲೊಬ್ಬರು ಬಿದ್ದು ಹಾರುತ್ತಾರೆ. ಆದರೆ ಕಾರ್ಯದಲ್ಲಿ ಮಾಡುತ್ತಿರುವುದಾದರೂ ಏನು ? ನಾವು ಎಲ್ಲಿಯವರೆಗೆ ಈ ಜನರ ಎಕನಾಮಿಕ್ ಫೌಂಡೇಶನನ್ನು ಭದ್ರಗೊಳಿಸುವುದಿಲ್ಲವೋ ಅಲ್ಲಿಯವರೆಗೆ ಈ ಜನರನ್ನು ಮುಂದಕ್ಕೆ ತರುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಇವತ್ತು ನೀವು ಸಮಾಜಕಲ್ಯಾಣ ಇಲಾಖೆಯಲ್ಲಿ ಅಧಿಕಾರಿಗಳನ್ನು ನೇಮಕ ಮಾಡುವಾಗ ಅವರನ್ನು ಸ್ಕ್ರೀನ್ ಮಾಡಿ ತೆಗೆದುಕೊಳ್ಳಬೇಕು. ಇದರಲ್ಲಿ ಯಾರಿಗೆ ಫೈತ್ ಇಲ್ಲವೋ ಅಂಥವರನ್ನು ತೆಗೆದುಕೊಳ್ಳಬಾರದು. ನಮ್ಮ ದೇಶದಲ್ಲಿ ಸೋಶಿಯಲಿಸಂ ಅನುಷ್ಠಾನಕ್ಕೆ ಬರಬೇಕು, ಕಾಸ್ಟಿಸಂ ವ್ಯಾನಿಶ್ ಆಗಬೇಕು. ನಮ್ಮ ಬರಗಾಲ ಪ್ರದೇಶದಲ್ಲಿ 50–100 ಎಕರೆ ಜಮೀನು ಇದ್ದ ಜನರು ಸಹ ಕೂಲಿ ಕೆಲಸ ಮಾಡಬೇಕಾಗಿದೆ. ಅವರ ಹೊಲದಲ್ಲಿ ಒಂದು ಹುಲ್ಲುಕಡ್ಡಿ ಸಹ ಇವತ್ತು ಬೆಳೆಯುತ್ತಾ ಇಲ್ಲ. ಕೂಲಿ ಮಾಡುವಾಗ ಈ ಜಾತಿವಾದ ಬರುವುದಿಲ್ಲ. ಎಲ್ಲರೂ ಒಂದೇ ಕೆಲಸ ಮಾಡುವವರು. ಎರಡು ವರ್ಷಗಳಿಂದಲೂ ಏನೂ ಬೆಳೆಯುತ್ತಾ ಇಲ್ಲ. ಅವರಲ್ಲಿ ಕತ್ತಲೆಯೇ ಹುಟ್ಟಿಕೊಂಡು ಬಂದಿದೆ. ಅಲ್ಲಿ ಒಂದು ಟ್ರೇಡ್‌ಮಾರ್ಕ್ ಮಾಡಿಕೊಂಡು ಬಂದಿದ್ದಾರೆ. ಇದನ್ನು ಎಚ್.ಎಂ.ಟಿ. ಮತ್ತು ಬಿ.ಇ.ಎಲ್. ಅಧಿಕಾರಿಗಳಿಂದ ಏನಾದರೂ ಪಾಯಿಂಟ್ ಔಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ನಾನು ಕೇಳುತ್ತೇನೆ. ಪ್ರತಿಯೊಂದು ವರ್ಕಿಂಗ್ ಕ್ಲಾಸಿನಲ್ಲಿಯೂ ಕ್ಯಾಸ್ಟಿಜಂ ಬೆಳೆಯುತ್ತಾ ಇದೆ, ಹರಿಜನರಾಗಿರುವವರು ಮುಟ್ಟಿದರೆ ಅದನ್ನು ಯಾರೂ ಮುಟ್ಟುತ್ತಾ ಇಲ್ಲ. ಹರಿಜನರಿಗೆ ಒಳ್ಳೆಯ ನೀರನ್ನು ಕೊಡುತ್ತಾ ಇಲ್ಲ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ಕ್ಷೇತ್ರದ ಒಂದು ಸಣ್ಣ ಗ್ರಾಮದಲ್ಲಿ ಪ್ರತಿಯೊಂದು ಕಮ್ಯೂನಿಟಿಯವರೂ ಇದ್ದಾರೆ. ಅಲ್ಲಿ ಕೆಲವು ಸೆಕ್ಷನ್‌ಗಳನ್ನು ಮಾತ್ರ ಮುಂದಕ್ಕೆ ತರುತ್ತಿದ್ದಾರೆ. ಅಲ್ಲಿ ಕ್ಯಾಸ್ಟಿಜಂ ವಿಶೇಷವಾಗಿ

ಬೆಳೆಯುತ್ತಿದೆ. ಹೆಚ್ಚಿಗೆ ಜಂಗಮ, ಬ್ರಾಹ್ಮಣ ಮುಂತಾದ ಕಮ್ಯೂನಿಟಿಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಅಲ್ಲಿನ ಕ್ಯಾಸ್ಟಿಜಂನ್ನು ಕ್ರಷ್ ಮಾಡಬೇಕಾದರೆ ಮಂತ್ರಿಗಳು ಈ ವಿಚಾರದ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ಇವರ ಬಗ್ಗೆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿಯೂ ಹೋರಾಡಬೇಕು. ಒಟ್ಟಿನಲ್ಲಿ ತಮಗೆ ನಾನು ಈ ವಿಚಾರದಲ್ಲಿ ಬೆಂಬಲವನ್ನು ಕೊಡುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P. M.

† ಶ್ರೀ ಕೆ. ಪ್ರಭಾಕರ್ (ವರ್ತೂರ್).—ಮಾನ್ಯ ಅಧ್ಯಕ್ಷರೇ, ಈ ಸಮಾಜ ಕಲ್ಯಾಣ ಖಾತೆಯ ವಿಷಯದಲ್ಲಿ ಮಾತನಾಡುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಆದರೆ ಅದರ ಬಗ್ಗೆ ಬಡ್ಜೆಟ್ಟಿನಲ್ಲಿಟ್ಟಿರತಕ್ಕ ದುಡ್ಡು ಬಹಳ ಕಡಿಮೆ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಅದರಲ್ಲಿರತಕ್ಕ ಯೋಜನೆಗಳನ್ನು ಕಾರ್ಯಗತಮಾಡುವುದಕ್ಕೆ ವರ್ಷೇ ವರ್ಷೇ ಯಾವುದೋ ಒಂದು ದಾಮಾಷಾ ಪ್ರಕಾರ ಆ ಫಂಡನ್ನು ಬಳಸುವ ಹಾಗೆ ಭಾಸವಾಗುತ್ತಿದೆ. ಆ ಒಂದು ಗುರಿಯನ್ನು ಮುಟ್ಟುವುದಕ್ಕೆ ಎಷ್ಟು ದುಡ್ಡು ಬೇಕು, ಏನು ಆಗಬೇಕು, ಎಂತಹ ಅಡ್ಮಿನಿಸ್ಟ್ರೇಷನ್ ಸೆಟಪ್ ಮಾಡಬೇಕೆನ್ನುವ ಬಗ್ಗೆ ಒಂದು ಪೂರ್ಣವಾದ ವ್ಯವಸ್ಥೆ ಆಗಬೇಕು. ಮೊಟ್ಟ ಮೊದಲನೆಯದಾಗಿ ಹರಿಜನ ಅಭಿವೃದ್ಧಿ ಖಾತೆ ಎಂಬುದರ ಜೊತೆಗೆ ಸಾಮಾಜಿಕ ವಿಚಾರಗಳ ಅಭಿವೃದ್ಧಿ ಕಾರ್ಯಗಳು ಬೆಗ್ಗರಿ ಎಂಬುದಾಗಿ ಒಂದು ಮಿಸಿಲೇನಿಯಸ್ ಶಬ್ದದಲ್ಲಿ ಅದನ್ನು ಇಟ್ಟಿದ್ದಾರೆ. ಅದನ್ನು ಹರಿಜನ ವೆಲ್‌ಫೇರ್ ಎಂಬುದಾಗಿ ಬೇರೆ ಬೇರೆಯಾಗಿಟ್ಟು ಆದನ್ನು ಆ ಒಂದು ಅಳತೆ ಗೋಲಿನಿಂದ ನೋಡಿ ಅವರಲ್ಲಿ ಎಷ್ಟರ ಮಟ್ಟಿಗೆ ಪ್ರಗತಿಯಾಗಿದೆ ಎಂಬ ವಿಚಾರವನ್ನೂ ಸಹ ಅದರ ಜೊತೆಯಲ್ಲಿಯೇ ಇಡಬೇಕಾಗುತ್ತೆಂದು ನಾನು ಸಲಹೆಮಾಡುತ್ತೇನೆ. ಈಗ ವಿದ್ಯಾಭ್ಯಾಸ ಮತ್ತು ಕೈಗಾರಿಕೆಗಳಲ್ಲಿ ಹರಿಜನರ ವೆಲ್‌ಫೇರ ಬಗ್ಗೆ ಫಂಡನ್ನು ಬೇರೆ ಇಡಬೇಕು, ಬೆಗ್ಗರಿ, ಪ್ರೊಹಿಬಿಷನ್, ಪ್ರಾಸ್ಟಿಟ್ಯೂಷನ್, ವಿಡೋಸ್, ಮ್ಯಾರೇಜ್, ಡೆಸ್ಟಿಟ್ಯೂಟ್ ಹೋಮ್ಸ್ ಮುಂತಾದವುಗಳ ಬಗ್ಗೆ ಇತರ ಎಲ್ಲ ಅಂಶಗಳನ್ನು ಸೇರಿಸಿ 10 6 ಖಾತೆಗಳನ್ನು ಮಾಡಲಿ. ಹರಿಜನ ವೆಲ್‌ಫೇರ್ ಎಂಬುದರ ಬಗ್ಗೆ ಮಾತ್ರ ಬೇರೆ ಸೇರಿಸಿ. ಒಂದು ವೇಳೆ ಒಟ್ಟಿಗೆ ಇಟ್ಟಿರುವುದನ್ನು ಬೇರೆ ಮಾಡದಿದ್ದರೆ ಅದನ್ನು ಮೊಟ್ಟ ಮೊದಲು ಬೇರ್ಪಡಿಸಬೇಕು. ಕೊಡುವುದೇ ಕಡಿಮೆ, ಅದರಲ್ಲಿ ಲ್ಯಾಪ್ಸ್ ಆಗುವುದು ಜಾಸ್ತಿ. ಈ ಬಾಬಿನಲ್ಲಿ ಹರಿಜನ ವೆಲ್‌ಫೇರ್‌ನಲ್ಲಿ ಎಷ್ಟು ದುಡ್ಡು ಲ್ಯಾಪ್ಸ್ ಆಗಿದೆಯೆಂಬುದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯ. ಇವರು ದುಡ್ಡು ಕೊಡುವುದೇ ಕಡಿಮೆ. How efficiently funds are being spent and things are being administered ಎಂಬುದನ್ನು ನೋಡಿದರೂ ಬಹಳ ಆಶ್ಚರ್ಯವಾಗುತ್ತದೆ. ಈ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಸಕಾಲಕ್ಕೆ ಕೊಡಬೇಕೆಂಬ ಕೂಗು ಹತ್ತಾರು ವರ್ಷಗಳಿಂದಲೂ ಇದ್ದೇ ಇದೆ. ಈಗ ಸ್ವಲ್ಪಮಟ್ಟಿಗೆ ಅದನ್ನು ನೆಟ್ಟಗೆ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೆ ಸಂಪೂರ್ಣವಾಗಿ ಈ ರೋಗ ಇನ್ನೂ ಹೋಗಿಲ್ಲ. ಈ ಸೋಷಿಯಲ್ ಡಿಪಾರ್ಟ್‌ಮೆಂಟ್ ಏನಿದೆಯೋ ಅದನ್ನು it should be treated as a department. Each Minister should be entrusted certain amount of responsibility to design the work of his own department for the best advantage of the Scheduled caste welfare. ಇದರಲ್ಲಿ ಲಾಭ ಮಾಡುವುದಕ್ಕೆ ಸ್ಕೋಪ್ ಬೇಕಾದಷ್ಟು ಇದೆ. ನಾನು ಹೇಳುವುದಿಷ್ಟೇ. ಕಂಟ್ರಾಕ್ಟರ್ ಪದ್ಧತಿಯನ್ನು ರದ್ದುಮಾಡಿ ಸೊಸೈಟಿಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಅನುಕೂಲವಾಗುವ ಹಾಗೆ ವ್ಯವಸ್ಥೆಯಾಗಬೇಕು. ಇದಕ್ಕಾಗಿ ಪ್ರತಿಯೊಂದು ಇಲಾಖೆಯಲ್ಲಿಯೂ ಕೂಡ ಇನ್ನುಮುಂದೆ ಸರ್ಕಾರಿ ಮಟ್ಟದಲ್ಲ ಮತ್ತು ಸ್ಟೇಟ್ ಆಫೀಸರ್ ಮಟ್ಟದಲ್ಲಿ ಕೊ-ಆರ್ಡಿನೇಷನ್ ಮೀಟಿಂಗ್ ಮಾಡಬೇಕು. ಎಲ್ಲಾ ಜಿಲ್ಲೆಗಳಲ್ಲಿಯೂ ಡಿಸ್ಟ್ರಿಕ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ಗಳನು ಏರ್ಪಾಡು ಮಾಡುವ ಹಾಗೆ ಮಾಡಬೇಕು. ಪೀರಿಯಾಡಿಕಲ್ ಸ್ಕ್ರೂಟನಿಮಾಡಿ ಕೆಲಸ ಎಷ್ಟರಮಟ್ಟಿಗೆ ಪ್ರೋಗ್ರೆಸ್ ಆಗಿದೆಯೆಂಬುದನ್ನು ನೋಡಬೇಕು. ಇವರ ಬಗ್ಗೆ ಹೊಸ ಪದ್ಧತಿಯನ್ನು ಜಾರಿಗೆ ತರುವುದು ಲೇಸು. ಈ ಇಲಾಖೆಯಲ್ಲಿ ಇರತಕ್ಕ ಸ್ಕೀಮ್‌ಗಳಲ್ಲಿ ಟೈಲರ್ ಇನ್‌ಸ್ಟಿಟ್ಯೂಟ್, ಕಾಯರ್ ಮ್ಯಾಟ್ ಮೇಕಿಂಗ್ ಸ್ಕೀಮುಗಳು ಅತಿ ಪ್ರಾಮುಖ್ಯವಾದುವು. ಇದರಲ್ಲಿ ಬೇರೆಯವರಿಗೆ ಎಷ್ಟಿದೆ, ಹರಿಜನ ಗಿರಿಜನರಿಗೆ ಎಷ್ಟು ಇದೆಯೆಂಬುದನ್ನು ನೋಡಬೇಕ . ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ. ಈ ಯೋಜನೆಗಳಲ್ಲಿ ಬೇರೆಯವರಿಗೆ ಕೆಲಸಗಳು ಸಿಕ್ಕಿವೆ. ಹರಿಜನ ಗಿರಿಜನಾಂಗದವರಿಗೆ ಸಿಕ್ಕಿಲ್ಲ. ಯಾವುದೋ ಒಂದು ಕಾಲದಲ್ಲ ನಾಲ್ಕೈದು ಸ್ಕೀಮುಗಳನ್ನು ಹಾಕಿಕೊಂಡರು. ಅದರಿಂದೇನೂ ಪ್ರಯೋಜನವಾಗಿಲ್ಲ. ಎಜುಕೇಷನ್ ಇಕನಾಮಿಕ್ ಹೌಸಿಂಗ್ ಸ್ಕೀಮ್‌ನಲ್ಲಿ

(ಶ್ರೀ ಕೆ. ಪ್ರಭಾಕರ್)

ಅಪಾಯಿಂಟ್‌ಮೆಂಟ್ಸ್ ಸರಿಯಾಗಿ ಸಿಗುತ್ತಾ ಇಲ್ಲ. ಪ್ರತಿಯೊಂದು ವಿಷಯದಲ್ಲಿಯೂ ಕೇಂದ್ರ ಸರಕಾರದ ಮಂಜೂರಾತಿಯಾಗಿರುವುದರಿಂದ ಅವರನ್ನು ಮುಂದೆ ತರುವುದರಲ್ಲಿ ಎಜುಕೇಷನ್‌ನಲ್ಲಿ ಸ್ವಲ್ಪ ಸ್ಕೋಪ್ ಇದೆ. ಅದನ್ನು ಇನ್ನೂ ಹೆಚ್ಚಿಗೆ ಬೆಳೆಸುವುದಕ್ಕೆ ಅವರಿಗೆ ಸಕಾಲದಲ್ಲಿ ವಿದ್ಯಾರ್ಥಿ ವೇತನಗಳನ್ನು ಕೊಡಬೇಕು. ಅವರಿಗೆ ಕಂಪಲ್ಸರಿ ಎಜುಕೇಷನ್ ಇರಬೇಕು. ಮಾನ್ಯ ಮಂತ್ರಿಗಳು ಈ ವಿಚಾರದ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಇಕನಾಮಿಕ್ ಸ್ಕೀಮ್ಸ್ ಪೊಟೆನ್ಷಿಯಲ್ ಸ್ಕೀಮ್ಸ್ ಬಗ್ಗೆ ಸರ್ಕಾರ ಹೆಚ್ಚಿಗೆ ನಿಗಾ ಕೊಡಬೇಕು. ಆ ರೀತಿ ಮಾಡದೆ ಎಲ್ಲೋ ಕೆಲವರಿಗೆ ಕೋಳಿ, ಕುರಿ ಮುಂತಾದುವುಗಳನ್ನು ಕೊಡುವುದು, ಎತ್ತುಗಳನ್ನು ಕೊಡುವುದು ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆ ರೀತಿ ಕೊಟ್ಟರೆ ಅವು ಬಹು ಜಾಗ್ರತೆಯಾಗಿ ನಾಪತ್ತೆಯಾಗುತ್ತವೆ. ಅದರಿಂದ ಫೈನಾನ್ಷಿಯಲ್ ಕಾರ್ಪೊರೇಷನ್‌ಗಳನ್ನು ಮಾಡಿ ಅವುಗಳ ಮೂಲಕ ಇವರಿಗೆ ಹಣ ಸಹಾಯವನ್ನು ಒದಗಿಸಿಕೊಟ್ಟು ಇರತಕ್ಕ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಈಗ ಸರ್ಕಾರದ ಮಟ್ಟದಲ್ಲಿ ಹಾಗೂ ಡೈರೆಕ್ಟೊರೇಟ್ ಮಟ್ಟದಲ್ಲಿ ಒಂದು ಎಂಪ್ಲಾಯ್‌ಮೆಂಟ್ ಸೆಲ್ ಎಂಬುದಾಗಿ ಮಾಡಿಕೊಂಡಿದ್ದಾರೆ. ಅಲ್ಲಿ ಅಪಾಯಿಂಟ್‌ಮೆಂಟ್‌ಗಳನ್ನು ಕೊಡುವುದರಲ್ಲಿ ಬಹಳ ಅನ್ಯಾಯವಾಗುತ್ತಿದೆ. ಸರಿಯಾಗಿ ಪರ್ಸಂಟೇಜ್ ಬರುತ್ತಾ ಇಲ್ಲ, ಇದಕ್ಕೆ ಕಾರಣವೇನೆಂದರೆ ಇದಕ್ಕೆ ಸರ್ಕಾರ ಕೊಡುವ ಉತ್ತರ, ಸಾಕಷ್ಟು ಜನರು ಸ್ಕೂಲುಗಳಿಗೆ ಇನ್ನೂ ಸೇರಿಕೊಂಡಿಲ್ಲವೆಂಬುದು. ಆದ್ದರಿಂದ ಕೂಡಲೇ ಸರ್ಕಾರದವರು ಅವರ ಶಿಕ್ಷಣದ ಪ್ರಗತಿಗೋಸ್ಕರ ಹೆಚ್ಚಿನ ಯೋಜನೆಗಳನ್ನು ಹಾಕಿಕೊಂಡು ಅವನ್ನು ಕಾರ್ಯಗತಮಾಡಬೇಕು. ಬೀರಪ್ಪ ಕಮಿಟಿಯಲ್ಲಿ ಹೇಳಿರುವ ಪ್ರಕಾರ ಎಲ್ಲ ವ್ಯವಸ್ಥೆಗಳನ್ನು ಮಾಡಬೇಕು. ಏಕೆಂದರೆ ಈಗ ಲೋಕಲ್ ಅಪಾಯಿಂಟ್‌ಮೆಂಟ್ಸ್‌ಗೆ ಯಾವ ತರಹ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಈ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಇಲ್ಲ. ಆದ್ದರಿಂದ ಅವರಿಗೂ ಸಹ ರೂಲ್ಸ್ ಪ್ರಕಾರ ಅಪಾಯಿಂಟ ಮೆಂಟ್ಸ್ ಸಿಗುವ ವ್ಯವಸ್ಥೆ ಆಗಬೇಕು. ಅದರಲ್ಲಿ ಯಾವ ಒಂದು ಕ್ವಾಲಿಫಿಕೇಷನ್ ಸಹ ಇಲ್ಲ. ನಾನ್ ಅವೇಲಬಿಲಿಟಿ ಆಫ್ ಕ್ಯಾಂಡಿಡೇಟ್ಸ್ ಎಂದು ಹೇಳಿ ಯಾವುದೇ ಒಂದು ರೂಪದಲ್ಲಿ ಅವರಿಗೆ ಪರ್ಸಂಟೇಜ್ ಸಿಗದೆ ಇರುವ ಹಾಗೆ ಮಾಡಿದ್ದಾರೆ. ಕೆಲವು ಇಲಾಖೆಗಳಲ್ಲಿ ಇವರದು ಎಷ್ಟು ಪರ್ಸಂಟೇಜ್ ಇದೆಯೆಂದು ನೋಡಿದರೆ ಈ 5 ವರ್ಷಗಳಲ್ಲಿ ಅವರ ಬಗ್ಗೆ ಏನೂ ಪ್ರಗತಿಯಾಗಿಲ್ಲ. ಆ ಇಲಾಖೆಗಳಲ್ಲಿ ಇವರಿಗೆ ಅಪಾಯಿಂಟ್‌ಮೆಂಟ್ಸ್ ಸಾಕಷ್ಟು ಸಿಗದೇ ಇರುವಂಥ ಜನರು ಇದ್ದಾರೆ. ಅದಕ್ಕೆ ಸರಿಯಾಗಿ ಕೆಲವಾರು ಕಾನೂನುಗಳನ್ನು ಬೇರೆ ಮಾಡಿಟ್ಟಿದ್ದಾರೆ. ಆದ್ದರಿಂದ ಮುಂದೆ ಇವರೂ ಸಹ ಒಂದು ಸರಿಯಾದ ಪರ್ಸಂಟೇಜಿಗೆ ಬರುವ ವರೆಗೂ ಇವರಿಗೆ ಮಾತ್ರ ಲೋಕಲ್ ಅಪಾಯಿಂಟ್‌ಮೆಂಟ್ಸ್ ಕೊಡಿ. ಹಾಗೆ ಕೊಡದೆ ಇದನ್ನೂ ಅವರಿಗೆ ತಪ್ಪಿಸಿದರೆ ಹೇಗೆ ? ಅದರ ಬಗ್ಗೆ ಸರ್ಕಾರದ ಒಂದು ಸರ್ಕ್ಯುಲರ್ ಆರ್ಡರ್ ಬೇರೆ ಇದೆ. ಅದನ್ನು ಬೇಗ ರದ್ದು ಮಾಡಬೇಕು. ಸರ್ಕಾರದ ಈ ಆರ್ಡರ್ ಜೊತೆಗೆ ಕಾರ್ಪೊರೇಷನ್ನಿನ 10–16 ಬೋರ್ಡ್‌ಗಳು ಬೇರೆ ಇವೆ. ಒಟ್ಟಿನಲ್ಲಿ ಹರಿಜನ ಗಿರಿಜನರಿಗೆ ಸರಿಯಾದ ಪರ್ಸಂಟೇಜ್ ಸಿಗಬೇಕು. ರಾಜ್ಯದಲ್ಲಿ ಅವರಿಗೂ ಪ್ರೊಪೋರ್ಷನೇಟಾಗಿ ಅಪಾಯಿಂಟ್‌ಮೆಂಟ್ಸ್ ಸಿಗುವ ಹಾಗೆ ಮಾಡಬೇಕು.

ಗುಜರಾತ್ ಮತ್ತು ಪಂಜಾಬ್ ದೇಶಗಳಲ್ಲಿ ಬಡ್ಜೆಟ್ಟನ್ನು ತಯಾರಿಸತಕ್ಕ ಕಾಲದಲ್ಲಿ ಈ ನಿಮ್ನ ವರ್ಗದವರ ಅಭಿವೃದ್ಧಿಗಾಗಿ, ಇವರ ಏಳಿಗೆಗಾಗಿ ಬಡ್ಜೆಟ್ಟಿನಲ್ಲೇ ಶೇಕಡಾ 20ರಷ್ಟು ಹಣವನ್ನು ಮೀಸಲಾಗಿರುವಂಥ ಒಂದು ಪದ್ಧತಿಯನ್ನು ಅಲ್ಲಿ ಜಾರಿಗೆ ತಂದಿದ್ದಾರೆ ಎಂದು ಹೇಳುತ್ತಿದ್ದಾರೆ. ಅದೇ ರೀತಿ ಇಲ್ಲಿ ಕೂಡ ನಮ್ಮ ಸರ್ಕಾರ ಅಂಥಾ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದು ಸಲಹೆ ಮಾಡುತ್ತಿದ್ದೇನೆ. ಹಾಗೆ ಮಾಡಿದರೆ ಇವರ ಆರ್ಥಿಕ ಪರಿಸ್ಥಿತಿ ಸ್ವಲ್ಪ ಉತ್ತಮಗೊಳ್ಳಬಹುದು. ಆದರೆ ಇಲ್ಲಿ ಲೆದರ್ ಇಂಡಸ್ಟ್ರಿ ಎಂದು ಒಂದನ್ನು ಜಾರಿಗೆ ತಂದಿದ್ದಾರೆ. ಆದರೆ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದಕ್ಕಾಗಿ ಒಂದು ಸ್ಟಾಚ್ಯುಟರಿ ಬಾಡಿ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಹರಿಜನರಲ್ಲಿ ಬಹಳ ಜನ ಲಾ ಗ್ರ್ಯಾಜುಯೇಟುಗಳಿದ್ದಾರೆ. ಅವರು ಅಡ್ವೊಕೇಟುಗಳಾಗಿ ಎನ್ರೋಲಾಗಿ ಎಸ್ಟಾಬ್ಲಿಷ್ ಆಗಬೇಕಾಗಿದ್ದರೆ ಕನಿಷ್ಟ 5–6 ವರ್ಷಗಳು ಬೇಕು. ಅಷ್ಟರವರೆಗೆ ಇವರಿಗೆ ನಡೆದುಕೊಳ್ಳತಕ್ಕ ಚೈತನ್ಯವಿಲ್ಲ. ಈ ಡಾಕ್ಟರು ಮತ್ತು ಲಾಯರಾಗತಕ್ಕವರಿಗೆ ಮೊದಲು ಮೊದಲು ಅವರು ಎಸ್ಟಾಬ್ಲಿಷ್ ಆಗುವವರೆಗೂ ಅವರಿಗೊಂದು ಎಯಿಡ್ ಬೇಕೇ ಬೇಕು. ಅದಕ್ಕಾಗಿ ಅವರಿಗೆ ಸಹಾಯ ಸಿಗುವಂಥ ಒಂದು ಯೋಜನೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.— ಮಾನ್ಯ ಸದಸ್ಯರು ದಯವಿಟ್ಟು ಮುಗಿಸಬೇಕು, ತಮ್ಮ ಅವಧಿ ಆಯಿತು

ಶ್ರೀ ಕೆ. ಪ್ರಭಾಕರ್.—ಇನ್ನು ಬ್ಯಾಕವರ್ಡ್ ಕಮೀಶನ್ ಎಂದು ಏನು ನೇಮಕ ಮಾಡಿದ್ದಾರೆ ಆ ಕಮಿಟಿಯವರು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಇಂಥ ಒಂದು ಸ್ಟಾಂಡಿಂಗ್ ಕಮೀಟಿ ಯಾವಾಗಲೂ ಇರುವುದು ಒಳ್ಳೆಯದೆಂದು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ, ಇಲ್ಲಿ ಏನೇನು ಲೋಪದೋಷಗಳು ನಡೆಯುತ್ತಿವೆ ಎಂಬುದನ್ನು ಚೆಕ್ ಮಾಡುವುದಕ್ಕೆ ಇದು ಇರುವುದು ಬಹಳ ಅಗತ್ಯ.

Mr. DEPUTY SPEAKER.—Your time is up.

ಶ್ರೀ ಕೆ. ಪ್ರಭಾಕರ್. ಹೀಗೆ ಎಂದು ಹೇಳಿದ್ದರೆ ನಾನು ಮೊದಲೇ ಮಾತನಾಡುತ್ತಿರಲಿಲ್ಲ.

Mr. DEPUTY SPEAKER.—The hon. member will please learn to use a little more sober language. Whether he has to speak or not is a matter left to him. I have to acoommodate so many members. When I tell him that his time is over, he is continuing. Courtesy requires he should close ; I have to accommodate so many other hon. members.

ಶ್ರೀ ಕೆ. ಪ್ರಭಾಕರ್.—ಇನ್ನು ಲ್ಯಾಂಡ್ ರಿಫಾರಂಸ್ ಬಗ್ಗೆ ಒಂದು ಮಾತು. ಹರಿಜನರಿಗೆ ಕೆಲವು ಭೂಮಿಗಳನ್ನು ಹಿಂದಿನಿಂದಲೂ ಕೊಟ್ಟುಕೊಂಡು ಬಂದಿದ್ದಂಥ ಜಮೀನುಗಳನ್ನು ಈಗಲೂ ಇವರ ಹೆಸರಿಗಿನ್ನೂ ವರ್ಗಾಯಿಸಿಲ್ಲ. ಆದ್ದರಿಂದ ಆ ಜಮೀನುಗಳನ್ನು ಇವರ ಹೆಸರಿಗೆ ಕೂಡಲೆ ವರ್ಗಾಯಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕಾರ್ಮಿಕರ ಬಗ್ಗೆ, ಸಣ್ಣ ಭೂರಹಿತರ ಬಗ್ಗೆ ಸಣ್ಣ ಪುಟ್ಟ ಕೂಲಿಗಾರರ ಬಗ್ಗೆ ಸರ್ಕಾರ ಒಂದು ಯೋಜನೆಯನ್ನು ಮಾಡಬೇಕಾಗಿದೆ. ಹರಿಜನರಿಗೆ ಮುಜರಾಯಿ ದೇವಸ್ಥಾನಗಳಲ್ಲಿ ಪ್ರವೇಶಕ್ಕೆ ಅವಕಾಶ ಮಾಡಿದ್ದಾಗ್ಯೂ ಅನೇಕ ವರ್ಷಗಳಿಂದ ಆ ಮುಜರಾಯಿ ದೇವಾಲಯಗಳ ಕಮಿಟಿಗೆ ಹರಿಜನ ಪ್ರತಿನಿಧಿಗಳನ್ನು ಹಾಕುತ್ತಿಲ್ಲ, ಆ ಕಮಿಟಿಗಳಿಗೆ ಇವರನ್ನು ಹಾಕುವಂತೆ ಮಾಡಬೇಕೆಂದು ಹೇಳುತ್ತೇನೆ.

† Sri C.M. ARUMUGHAM (K.G.F,)—I rise to speak on the demand which touches more than 35 lakhs of population of the State. This House is interested to know the grievances of 35 lakhs of people who have been all along treated as slaves Therefore, I hope the Chair will permit me to speak for more time than the time alloottel in the beginning.

There are several provisions in the Constitution relating to the welfare of Scheduled Castes and Scheduled Tribes. Art. 338 provides for appointing a Spcial Officer to investigate the progress madé in regard to the welfare of Scheduled Castes and Scheduled Tribes. Several other articles are there in the Constitution which deal with the welfare of Scheduled Castes and Tribes. I have gone through these provisions and sometimes I get the feeling to tear it because the provisions are not implemented properly. The Government only talks but not implements what are stated in reveral articles of the Constitutions. But owing to the great regard I have for Dr. Ambedkar who drafted this Constitution, I am prevented from doing what I feel. But in Madras it has actually happened. The other day one of the hon. members was saying that everything is provided for in the Constitution and why should we want reservation. That is the way of dealing with the Scheduled Castes and Tribes. I have collected certain figures which I want to tell the House. I am constrained to state that several provisions contained in the Constitution are to be implemented by people who are actually acting against the interests of scheduled castes

(SRI C. M. ARUMUGAM)

and scheduled tribes. They are jealous at the safeguards provided for these people in the Constitution. There is provision for giving representation to these people in the matter of promotions and recruitment. When it is stated as recruitment, it is intitial recruitment and when it is stated as post, it means promotions. What is the progress you have made after 23 years of the Constitution coming into force. I have collected figures, But now I have figures to tell where we stand even after 25 years of independence. Some people talk without looking into figures. Some gentlemen say that constitutional provision is there and why should there be reservation for allotment of sites? In fact such people are there in power. What they say merely reflects the caste-ridden outlook they have. By merely giving representation in the services to these people would not be sufficient. I would have even torn the constitution into pieces, but for my reverance to my leader Mr. Ambedkar I am not touching it. This Constitution has never been implemented properly. Take for instance the educational bodies. At no time a scheduled caste person has been appointed as Vice-Chancellor. Take the Professors. There are 30 Professors in Bangalore University, out of which only 4 belong to scheduled caste ; in Mysore University out of 40 Professors there is only one belonging to scheduled caste ; in Karnatak University out of 25 Professors there is not even one scheduled caste; I want to burn this University including the Vice-Chanceller if I am permitted. Then in Agricultural University there are 30 Professors but no scheduled caste representation.

Then I come to Readers posts. In Bangalore University there are 70 Readers; in Mysore University 70 Readers ; in Karnataka University 50 Readers, and in Agricultural University there are 50 Readers. But in no University there is a single Reader belonging to scheduled caste. In case of Lecturers in Bangalore University out of 200 lecturers there only two belonging to scheduled caste; in Mysore University out of 200 there is not even one person belonging to scheduled caste ; in Karnataka University out of 120 there is not even one scheduled caste ; in Agricultural University there are 100 lecturers but not a single lecturer from scheduled caste. Sir, all these figures show that in these Universities which have been created recently by politicians to help their men and their communities have not provided or appointed scheduled caste people in various posts. I therefore demand the Hon. Chief Minister to furnish a list, castewise, of all appointments made in various departments of Government. There are about 30 Departments in the State of Mysore. I want him to furnish a list of appointments right from the day when Mr. Nijlingappa took-over as Chief Minister till to-date. If there is anybody here who could say that he does not belong to any caste I will treat him as God and I will worship him. If the Hon. Chief Minister

were to hide this information that would only show that he has become a toy in the hands of caste-ridden officers.

Then there are four Divisional Commissioners but not even one belong to scheduled caste ; there are over 24 super-time IAS Officers but none belonging to scheduled caste ; IAS senior scale there are only five ; MAS senior scale there are 50 posts but only four persons belong to scheduled caste.

Then coming to Police Department I would like to say that the Socil Welfare officer should be attached to the Home Department. He should also be made *ex-offleio* Additional Secretary to Home Department so that he could have direct control over the police. Most of the police officials are caste-ridden. Scheduled caste people are afraid of going to police stations. The Social Welfare officer's post must be upgraded and he must be made additional Secretary for Home so that he may have control over the police department. Many persons say that the Chief Minister is sympathetic towards scheduled caste people. But how far he is sympathetic in practice is not known. I know so many Avatars came here and spoke about these people and went away; so many mahatmas have born and have given new names to this community and went away ; but no improvement has taken place in this community. Sir, in the police officers cadres there are 3 IGPS but none from scheduled caste ; there are 10 DIGs but none from scheduled caste ; there are 37 selection grade Police Superintendents but there is nonefrom scheduled caste; there are 83 Dy. Superintendents and Asstistant Superintendent of Police but there are only 3from Scheduled caste. So even in this Police Department the representation to the Scheduled Caste after 23 years of implementation of the Constitution is quite inadequate. It is a shame for the Government. The Government has no face to tell the people that they have done anything to the Scheduled Caste and to the poor people.

Then coming to Forest Department there are 3 Chief Conservators of Forest but none from scheduled caste ; there are 10 Conservators of Forests but none from scheduled caste; there are 80 District Forest Officers but only one from scheduled caste. Sir, even in this Forest where Sri Rama had gone and lived for 14 years these people have not been given representatation. After all we are the people who could live in jungles and fight with the tigers. Even this Forest Department has no sympathy for us.

Mr. Deputy Speaker, I now come to the Department of Public Works headed by our deputy leader Sri H. M. Channabasappa. Though there are 10 Chief Engineers, still there is not a single person belonging to scheduled caste. There are 53 Superintending Engineers, but there is no Superintending Engineer belonging to scheduled caste. I say that this is wilfully done with an ulterior motive. This department is more communal. It is unbearable. As Rajaji put it, the P.W.D. may be called enemy Number One to the poor and scheduled caste people

There are 200 Executive Engineers. but there are only 12 belonging to scheduled caste, and out of 1000 Assistant Engineers only 20 Assistant Engineers belong to scheduled caste. Can this be tolerated? The upper class people when they talk about their caste, they call it nationalisation. All the Secretaries in the Secretariat talk about nationalisation, and they say that they do not belong to any caste. Bur, when we say that we want representation, they say it is communalism.

5-00 P.M.

In the Agriculture Department, there is one Director and 8 Joint Directors, and out of 8 Joint Directors, only one person belongs to Scheduled caste. Though there are 80 Deputy Directors in this department, there is not a single Deputy Director beloning to scheduled caste.

In the Animal Husbandry department, there is one Director and 4 Joint Directors and one Joint Director belongs to scheduled caste. In this department though there are 13 Deputy Directors, not a single Deputy Director belongs to schedoled caste. It is the scheduled caste people who clean the animals and take away the cow-dung. Even here, proper representation is not given to scheduled caste people.

I will now pass on to the Department of Public Health, the Department of my hon. friend Sri H. Siddaveerappa, Minister for Heath. There is one Director-of course, he belongs to some other community. But, out of 6 Joint Directors, only one person belongs to Scheduled caste. Though there are 10 Deans and Deputy Directors, there is no person beloning to scheduled castes ; there are 50 posts of District Health Officers in the State, but not a single D.H.O. belongs to scheduled caste. Sir, this Indira Congress Government could have straight away appointed 10 or 15 people to these posts.

Sir, in the Department of Education, though there are 3 Directors no representation is given to scheduled caste. There are 8 Joint Directors posts, yet there is only one person belonging to scheduled caste, and though there are 30 Deputy Directors of Public Instruction, there is no representation for scheduled caste. Even in this Department, the door is closed for scheduled caste people.

In the Judical Department, they may say that one requires a background to come to position. A man who practises become a High Court Judge or a Supreme Court Judge. Sometimes they say that these appointments are made on merit; sometimes they call it a political appointment. In the Mysore High Court, including the Chief Justice there are 17 Judges out of which only one person belongs to scheduled caste. There are 52 posts of District Judges, but here also there is only person who belongs to scheduled caste. My friends from Chikkodi will have to pardon me if I say a word about Chikkodi.

Chikkodi is known for pigs and pleaders ; in every house there is a pleader and in every street there are plenty of pigs. Most of these pleaders belong to scheduled caste. But there is no proper representation for these people. Though there are 50 posts of Civil Judges, there is only one Civil Judge belonging to scheduled caste.

In the Department of Co-operation, out of one Registrar and 15 Joint Registrars, only one person belongs to scheduled castes, and though there are 50 Deputy Registrars, still there is not a single person who belongs to scheduled caste.

Sir, only one class of people are ruling the Commercial Taxes Department. Here also though there are 12 posts of Deputy Commissiooners and 8 posts of Assistant Commissioners, representation is given for only one person belonging to scheduled caste in each category.

In the Horticulture department, though there are 3 Joint Directors and 25 Deputy Directors, there is no representation for scheduled caste. I do not know why. Sir, the Director of Horticulture got extension thrice because he is looking after the gardens in the residences of the Ministers and the flower garden in Vidhan Soudha. In the villages, there is dakness both in the day and in the night ; nobody cares for these people.

In the Department of Collegeate Education, out of 60 professors only one person belongs to scheduled caste, and out of 180 Readers only one person belongs to scheduled caste, and as against 480 lecturers, only 20 lecturers belong to scheduled castes.

Sir, this is the fate of the people belonging to scheduled caste in every department. I submit that the Government have flouted the Constitution ; they have not followed it. So, I condemn this Government for they have not been able to implement the constitutional provisions even after 23 long years. Constitution came into force in 1950. Article 17 of the Constitution says that untouchability should be abolished, and to this effect there is also a law in force since 1955. But the offences are on the increase. There is no protection for the scheduled caste people. To quote an instance, in Kolar taluk there is a village by name Chinnapur, where a scheduled caste person has not been able to get into the village even after several representations. What we need today is, we have to find out whether the constitutional safeguards provided to the Scheduled castes and scheduled Tribes people have been benefited by the concerned people. In order to find out this, it is necessary that the Government should come forward with a proposal to appoint a Commission to probe into this matter. Several crores of rupees were provided in the Fifth Five Year Plans. The Commission should find out whether the amount provided for the amelioration of the backward classes has actually reached them. So many commissions have been appointed in the past for Education and Agriculture. There

(SRI C. M. ARUMUGAM)

are 35 lakhs of Scheduled Castes and Tribes people in Mysore State. I request the Government to appoint a Commission and direct it to submit a report to this House whether any improvements have been made in the living conditions of these people. The Commission should also find out what were the conditions of these people before independence and what their conditions are after 23 years of independence.

With these few words, I conclude my speech.

† ಶ್ರೀ ಪಿ. ಎಂ. ಭಂಗಿ (ಜಮಖಂಡಿ).— ಮಾನ್ಯ ಉಪಾಧ್ಯಕ್ಷರೇ, ಇವೊತ್ತಿನ ದಿವಸ ರೂರಲ್ ಡೆವಲಪ್‌ಮೆಂಟ್, ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಮಿಸಲೇನಿಯಸ್ ಡಿಮ್ಯಾಂಡ್‌ಗಳ ಬಗ್ಗೆ ಸರ್ಕಾರದರಿಗೆ 27 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಿಕ್ಕೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮಂತ್ರಿಗಳು ಈ ಸಭೆಯನ್ನು ಬೇಡಿದ್ದಾರೆ. ಇದಕ್ಕೆ ನಾನು ತುಂಬಾ ಬೆಂಬಲ ಕೊಟ್ಟು ಈ ಬಗ್ಗೆ ನನ್ನ ಕೆಲವು ಸಲಹೆಗಳನ್ನು ಈ ಸಮಯದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ಮೂರು ಇಲಾಖೆಗಳ ಬಗ್ಗೆ ಸರ್ಕಾರದವರು ಸಾಕಷ್ಟು ಖರ್ಚು ಮಾಡಿದರೂ ಆ ಹಣದಿಂದ ಬರುವ ಪರಿಹಾರ ಜನರಿಗೆ ಮುಟ್ಟುವುದಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಬಿಜಾಪುರ ಜಿಲ್ಲೆಗೆ ಭೇಟಿ ಕೊಟ್ಟಿಲ್ಲ. ಅಲ್ಲಿ ನಿಮ್ನವರ್ಗದವರು ಎಷ್ಟು ದುಸ್ಥಿತಿಯಲ್ಲಿದ್ದಾರೆ ಎಂದು ಇವರಿಗೆ ಎಳ್ಳಷ್ಟು ಲಕ್ಷವಿಲ್ಲ, ಆದ್ದರಿಂದ ಈ ಸಂದರ್ಭದಲ್ಲಿ ಅಲ್ಲಿನ ಪರಿಸ್ಥಿತಿಯನ್ನು ಅವರ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ನಿಮ್ನವರ್ಗದವರಿಗೆ ಅಂದರೆ ಷೆಡ್ಯೂಲ್ಡ್ ಕಾಸ್ಟ್ ಹೆಂಗಸರು, ಮಕ್ಕಳು ಮಡಕೆಗಳನ್ನು ಇಟ್ಟುಕೊಂಡು ನೀರು ಹಾಕಿಸಿಕೊಳ್ಳಲಿಕ್ಕೆ ಎಷ್ಟು ಸಮಯ ಕಾದಿರುತ್ತಾರೆ ಎನ್ನುವುದು ನೋಡುವುದಕ್ಕೆ ಒಂದು ದಾರುಣ ಪ್ರಸಂಗವಾಗಿದೆ. ಈ ಊರಿನಲ್ಲಿ ಒಂದೇ ತಾಯಿಗೆ 7 ಜನ ಮಕ್ಕಳು ಇದ್ದರು, 6 ಮಕ್ಕಳನ್ನು ಖೂನಿ ಮಾಡಿದ್ದಾರೆ. 7ನೇ ಮಗ ಮುಂಬೈನಲ್ಲಿ ಇದ್ದುದರಿಂದ ಅವನು ಒಬ್ಬನಿದ್ದಾನೆ, ಅವನು ಊರಿನಲ್ಲಿ ಬಂದು ವಾಸಮಾಡುವುದಕ್ಕೆ ಸಾಧ್ಯವಿಲ್ಲ, ಇದು ಒಂದು ದುರ್ದೈವದ ಸಂಗತಿ. ನಿಮ್ನವರ್ಗದವರು ಬೇರೆಬೇರೆ ಬೋರ್ಡಿಂಗನಲ್ಲಿ ಇರತಕ್ಕವರು ಆ ಬೋರ್ಡಿಂಗನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವಿದ್ಯಾರ್ಥಿಗಳು ಯಾರು ಅಭ್ಯಾಸ ಮಾಡುತ್ತಿದ್ದಾರೆ ಅವರಿಗೆ ಗ್ರಾಂಟ್ ಕೊಡಬೇಕು ಎಂದು ಸಾಕಷ್ಟು ವಿನಂತಿ ಮಾಡಿಕೊಂಡರೂ ಸಾಕಷ್ಟು ಗ್ರಾಂಟು ಇಲ್ಲಿಯವರೆಗೂ ಕೊಟ್ಟಿಲ್ಲ. ಇದನ್ನು ಈ ಸಮಯದಲ್ಲಿ ನಾನು ಸೂಚಿಸಬಯಸುತ್ತೇನೆ. ಸೋಷಿಯಲ್ ವೆಲ್‌ಫೇರ್ ಬೋರ್ಡು ಅವಧಿ ಇವೊತ್ತು ಮುಗಿದು ಹೋಗಿದೆ. ಎಷ್ಟು ತಿಂಗಳು ಆದರೂ ಕೂಡ ಇನ್ನು ಫರ್ದರ್ ಆರ್ಡರ್ಸ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇನ್ನು ಗ್ರಾಮ ಪಂಚಾಯತಿ ವಿಷಯದಲ್ಲಿ ಅಲ್ಲಿ ಬಿಲ್ಡಿಂಗ್‌ಗಳನ್ನು ಕಟ್ಟುವ ಬಗ್ಗೆ ಸರ್ಕಾರದವರು ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ರೂಲ್ಸ್ ಮಾಡಿದ್ದರೆ, ಮನೆಗಳು ಬಿದ್ದು ಹೊಸ ಮನೆಗಳನ್ನು ಕಟ್ಟಬೇಕಾದರೆ ಆ ರೂಲ್ಸ್ ಪ್ರಕಾರ ಮನೆಯ ಎರಡೂ ಕಡೆಗಳಲ್ಲಿ 10 ಅಡಿ ಮತ್ತು 15 ಅಡಿ ಖಾಲಿ ಜಾಗ ಬಿಡಬೇಕೆಂಬ ನಿಯಮಗಳು ಇದ್ದರೂ ಸಹ ಆ ನಿಯಮದ ಪ್ರಕಾರ ಕಟ್ಟುತ್ತಿಲ್ಲ. ಹಳ್ಳಿಗಳಲ್ಲಿ ಇಂಥ ಮನೆಗಳು ಬಿದ್ದಂಥ ಸಂದರ್ಭದಲ್ಲಿ 2 ಪಾರ್ಟಿಗಳು ಇದ್ದು ಇದರ ದುರ್‌ಲಾಭ ಪಡೆದುಕೊಂಡು ಒಂದು ಪಾರ್ಟಿಯವರು ಮತ್ತೊಂದು ಪಾರ್ಟಿ ಮೇಲೆ ವ್ಯಾಜ್ಯ ಹೂಡುತ್ತಾರೆ, ಈ ಸಂಗತಿಯನ್ನು ಮಂತ್ರಿಗಳ ಗಮನಕ್ಕೆ ಇವೊತ್ತಿನ ದಿವಸ ತರ ಬಯಸುತ್ತೇನೆ. ಸ್ವಲ್ಪದರಲ್ಲಿ ಹೇಳಬೇಕಾದರೆ ತಾಲ್ಲೂಕು ಬೋರ್ಡುಗಳ ಆಡಳಿತ ಕೆಟ್ಟು ಹೋಗಿದೆ. ಆದುದರಿಂದ ಅಲ್ಲಿ ಕೆಲಸ ಮಾಡತಕ್ಕ ಒಬ್ಬೊಬ್ಬ ಕ್ಲರ್ಕ್ ಅಂಬಾಸಿಡರ್ ಕಾರುಗಳನ್ನು ಕೊಂಡುಕೊಂಡು ಆಡ್ಡಾಡುತ್ತಿದ್ದಾರೆ. ಈ ರೀತಿ ತಾಲ್ಲೂಕು ಬೋರ್ಡ್ ಆಡಳಿತ ನಡೆಯತಕ್ಕದ್ದು ಇದೆ. ಇದೇ ಪ್ರಕಾರ ಗ್ರಾಮಪಂಚಾಯಿತಿಯ ಆಡಳಿತವೂ ಕೂಡ ಶುದ್ಧ ರೀತಿಯಲ್ಲಿ ನಡೆದಿಲ್ಲ. ಆದ್ದರಿಂದ ಮಂತ್ರಿಗಳು ಮೇಲಿಂದಮೇಲೆ ಅಡ್ಡಾಡಿ ಹಳ್ಳಿಗಳಿಗೆ ಹೋಗಿ ನಿಮ್ನವರ್ಗದ ಜನರನ್ನು ಭೇಟಿಮಾಡಿ ಜನಗಳಿಗೆ ಅಲ್ಲಿರುವ ಅಡ್ಡಿ ಆತಂಕಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಕ್ಷಾಮ ಪರಿಸ್ಥಿತಿಯಲ್ಲಿ ಜನಗಳಿಗೆ ಸಾಕಷ್ಟು ಆಹಾರಧಾನ್ಯ ಸಿಕ್ಕುವುದಿಲ್ಲ. ಫೇರ್ ಪ್ರೈಸ್ ಷಾಪುಗಳಿಗೆ ಹೋಗಿ ಅಲ್ಲಿ ಬೇಕಾದ ಕಾಳು ಕಡ್ಡಿ ಕೊಳ್ಳುವುದಕ್ಕೆ ಅಲ್ಲಿನ ಜನರಿಗೆ ಸಾಮಾರ್ಥ್ಯವಿಲ್ಲ. ಕೇವಲ ಹರಿಜನರಿಗೋಸ್ಕರ ಫೇರ್‌ಪ್ರೈಸ್ ಷಾಪ್ ಓಪನ್ ಮಾಡಿಸಿ ಎಂದು ಅಸಿಸ್ಟೆಂಟ್ ಕಮಿಷನರ್‌ಗೆ ಅರ್ಜಿ ಕೊಟ್ಟರೂ ಕೂಡ ಇಲ್ಲಿಯವರೆಗೆ ಯಾವ ರೀತಿಯಿಂದಲೂ ಪರಿಹಾರ ಸಿಕ್ಕಿರುವುದಿಲ್ಲ, ಆ ದೃಷ್ಟಿಯಿಂದ ಸ್ವಲ್ಪದರದಲ್ಲಿ ಹೇಳಬೇಕಾದರೆ ನಮ್ಮ ಲೀಡರ್ಸ್ ಏನು

ಇದ್ದಾರೆ ಅವರು ಇದನ್ನು ಮೊದಲು ಸರಿಪಡಿಸಬೇಕು. ಮಾನ್ಯ ಶ್ರೀ ಆರ್ಮುಗಂರವರು ಬೇರೆ ಬೇರೆ ಇಲಾಖೆಗಳಲ್ಲಿ ನಿಮ್ನವರ್ಗದ ಜನಾಂಗಕ್ಕೆ ಸೇರಿದ ಅಧಿಕಾರಿಗಳು ಎಷ್ಟು ಕಡಿಮೆ ಇದ್ದಾರೆ ಎನ್ನುವ ಸಂಖ್ಯೆಯನ್ನು ಕೊಟ್ಟಿದ್ದಾರೆ. ಅಡ್ವೈರ್‌ಟೈಸ್‌ಮೆಂಟ್ ಮಾಡಿದರೂ ಕೂಡ ಸಾಕಷ್ಟು ವಿದ್ಯಾವಂತರುಗಳಿಂದ ಅರ್ಜಿಗಳು ಬರುತ್ತಾ ಇಲ್ಲ. ಇದು ನಮ್ಮ ದುರ್ದೈವ. ಈ ದೃಷ್ಟಿಯಿಂದ ಇವೊತ್ತಿಗೂ ಕೂಡ ಯೋಗ್ಯವಾದ ಉಮೇದುವಾರರನ್ನು ನೇಮಕ ಮಾಡಿಲ್ಲ. ಯೋಗ್ಯವಾದ ಉಮೇದುವಾರರು ದೊರಕಿಲ್ಲ ಎಂದು ಹೇಳಿ ಬೇರೆಯವರನ್ನು ನೇಮಕಮಾಡಿದ್ದರೆ ಅದು ತಪ್ಪಾಗುತ್ತದೆ. ಮಾನ್ಯ ಮಂತ್ರಿಗಳು ಈ ಕಡೆಗೆ ಸ್ವಲ್ಪ ಗಮನ ಕೊಡಬೇಕು. ಒಟ್ಟಿನಲ್ಲಿ ಹೇಳಬೇಕಾದರೆ ನಿರ್ಮಲವಾದ ಆಡಳಿತ ಜನತೆಗೆ ಸಿಗಬೇಕು. ಕಾರಖಾನರು ಲಕ್ಷಾಂತರ ರೂಪಾಯಿ ಗಳಿಸಿ, ಅಂಬಾಸಿಡರ್ ಕಾರ್ ಕೊಂಡುಕೊಂಡು ಅಡ್ಡಾಡುವ ಪ್ರಸಂಗ ತಪ್ಪಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಶ್ರೀಮಾನ್ ಭಂಗಿಯವರು ಅರ್ಜಿಗಳು ಬಂದಿಲ್ಲವೆಂದು ಹೇಳಿದರು. There are so many qualified candidates available in Mysore State without jobs. There are 25 M.B.B.S. passed, 3,000 S.S.L.C. Passed and 353 graduates who are wandering in the streets of Bangalore without jobs. This being so, I request him to correct his impression.

Sri H. S. SIDDAPPA.—May I know how many posts have been filled by Sri Azeez Sait in the M.S.R.T.C. ?

Mr. DEPUTY SPEAKER.—I cannot coreect any hon. member.

ಶ್ರೀ ಪಿ. ಎಂ. ಭಂಗಿ. –ಮಾನ್ಯ ಜಯಪ್ರಕಾಶ್‌ನಾರಾಯಣ್‌ರವರು ಹೇಳಿದ್ದು ಬೆಂಗಳೂರಿನಲ್ಲಿ ಅಷ್ಟು ಜನರು ಇದ್ದರೆ. ಅದೇ ಪ್ರಕಾರವಾಗಿ ಹಳ್ಳಿಗಳಲ್ಲೂ ಕೂಡ ಇದ್ದಾರೆ ಎಂದು ತಿಳಿದುಕೊಂಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಇದ್ದಂತೆ ಜೂನಿಯರ್ ಕಾಲೇಜು ಮತ್ತು ಹೈಸ್ಕೂಲುಗಳಿಗೆ ಬೇಕಾದ ಶಿಕ್ಷಕರು ಮತ್ತು ಪ್ರೊಫೆಸರ್ಸ್ ಬಗ್ಗೆ ಸಾಕಷ್ಟು ಜಾಹಿರಾತು ಕೊಟ್ಟಾಗ್ಯೂ ಒಂದು ಅರ್ಜಿ ಕೂಡ ಬಂದಿಲ್ಲ. ಆದುದರಿಂದ ಸಮಾಜದಲ್ಲಿರತಕ್ಕ ಇತರ ಜನಾಂಗದ ಜನಗಳನ್ನು ಆರಿಸುವ ಪ್ರಸಂಗ ಬಂದಿದೆ. 18 ಪರ್ಸೆಂಟ್ ಜಾಗಗಳನ್ನು ತುಂಬುವವರೆಗೆ ಯಾವತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಜನಗಳಿಗೇ ತುಂಬಬೇಕು, ಅವರಿಗೆ ನೇಮಕ ಮಾಡಬೇಕು ಎಂದು ಈ ಪ್ರಕಾರವಾಗಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಅದೇ ಪ್ರಕಾರವಾಗಿ ಕಮ್ಯೂನಿಟಿ ಡೆವಲಪ್‌ಮೆಂಟ್ ಮಂತ್ರಿಗಳು ಕೂಡ ಇನ್ನು ಮುಂದೆ ಯಾವ ಯಾವ ಜಾಗಗಳು ಖಾಲಿ ಬೀಳುತ್ತವೆ ಅವುಗಳನ್ನೆಲ್ಲಾ 18 ಪರ್ಸೆಂಟ್ ತುಂಬುವವರೆಗೆ ಹರಿಜನರಿಗೇ ಗಿರಿಜನರಿಗೇ ಕೊಡಬೇಕು ಎಂದು ಆಜ್ಞೆ ಹೊರಡಿಸಿ ಅವುಗಳನ್ನು ಸರಿಪಡಿಸಬೇಕು ಎಂದು ಈ ಸಮಯದಲ್ಲಿ ಸೂಚಿಸುತ್ತೇನೆ. ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).— ಮಾನ್ಯ ಉಪಸಭಾಪತಿಗಳೇ, ನಮ್ಮ ಮುಂದೆ ಇಟ್ಟಿರತಕ್ಕಂಥ ಡೆವಲಪ್‌ಮೆಂಟ್ ಬೇಡಿಕೆ ಏನು ಇವೆ ಆ ವಿಷಯದಲ್ಲಿ ನಾನು ಹೆಚ್ಚು ಕಾಲವನ್ನು ತೆಗೆದುಕೊಳ್ಳದೆ ಒಂದೆರಡು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಬಗ್ಗೆ ನನಗೆ ಪ್ರಾಮುಖ್ಯವಾಗಿ ಬೇಕಾಗಿರತಕ್ಕಂಥ ವಿಷಯ ತಾಲ್ಲೂಕು ಬೋರ್ಡುಗಳಿಗೆ ಮತ್ತು ಪಂಚಾಯಿತಿಗಳಿಗೆ ಚುನಾವಣೆ ನಡೆಸತಕ್ಕಂಥಾದ್ದರಲ್ಲಿ ಸರ್ಕಾರದ ಧೋರಣೆ ಏನು ? ಈ ವಿಷಯವನ್ನು ಸ್ಪಷ್ಟೀಕರಣ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಕೋರಲಿಚ್ಛಿಸುತ್ತೇನೆ. ಏತಕ್ಕೆಂದರೆ ಅವರು ಶಾಸಕ ಪಕ್ಷದಲ್ಲಿ ಮಾತನಾಡತಕ್ಕಂಥ ಒಂದು ಸನ್ನಿವೇಶದಲ್ಲಿ ಅಡ್ಮಿನಿಸ್ಟ್ರೇಟರ್ಸ್‌ನ್ನು ಅಪಾಯಿಂಟ್ ಮಾಡಿ ತಾಲ್ಲೂಕು ಬೋರ್ಡ್ ಚುನಾವಣೆಗಳನ್ನು ಮುಂದೂಡತಕ್ಕಂಥ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎನ್ನತಕ್ಕಂಥಾದ್ದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಈ ಸಂಧರ್ಭದಲ್ಲಿ ನಾನು ಸರ್ಕಾರವನ್ನು ಕೇಳುವುದು ಈ ಬಗ್ಗೆ ಒಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ತಿಳಿಸಬೇಕು ಎಂದು. ಈ ಒಂದು ವಿಷಯಕ್ಕೆ ನಾನು ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರು ಇದಕ್ಕೆ ವಿರುದ್ಧವಾಗಿ ಇದ್ದರು ಎಂದು ಕೇಳಿದ್ದೇನೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ, ವಿಶ್ವಾಸ ಇದೆ, ಆದರೆ ಈ ವಿಷಯದಲ್ಲಿ ನಾನು ಕಾರಣಕರ್ತನಾಗಲು ಸಾಧ್ಯವಿಲ್ಲ ಎಂದು ಹೇಳಿದುದನ್ನು ನಾನು ಕೇಳಿದ್ದೇನೆ. ಆದಕ್ಕಾಗಿ ಅವರು ಯಾವ ಪಕ್ಷದಲ್ಲಯೇ ಇರಲಿ ಅವರನ್ನು ನಾನು ಅಭಿನಂದಿ

(ಶ್ರೀ ಹೆಚ್. ಡಿ. ದೇವೇಗೌಡ)

ಸುತ್ತೇನೆ. ಆದರೆ ಕೆಲವು ಒತ್ತಡಗಳಿಂದ ಮತ್ತು ಸಚಿವ ಸಂಪುಟದ ಒತ್ತಡದಿಂದ ಈ ಒಂದು ನಿರ್ಣಯಕ್ಕೆ ಬರುವ ಸನ್ನಿವೇಶ ಆಯಿತು ಎಂದು ನಾನು ಕೇಳಿದ್ದೇನೆ. ಇದು ನಿಜಕ್ಕೂ ಪ್ರಜಾ ಪ್ರಭುತ್ವದ ಕಗ್ಗೊಲೆ ಆಗುತ್ತದೆ. ಹೀಗೇನಾದರೂ ಇದ್ದರೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ಸ್ಪಷ್ಟೀಕರಣ ನೀಡಬೇಕು ಎಂದು ಈ ಸಂದರ್ಭದಲ್ಲಿ ಅವರನ್ನು ಕೋರಲಿಚ್ಛಿಸುತ್ತೇನೆ. ಕಳೆದ ಮಾರ್ಚಿ ತಿಂಗಳಿನಲ್ಲಿ ಕೆಲವು ಜಿಲ್ಲೆಗಳಲ್ಲಿ ಬರಗಾಲ ಸನ್ನಿವೇಶ ಇದ್ದುದ ರಿಂದ ಆ ತಿಂಗಳು ಚುನಾವಣೆ ನಡೆಸುವುದಕ್ಕೆ ಆಗುವುದಿಲ್ಲ ಎಂದು ಮುಂದೂಡಿದರು. ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಇಡೀ ರಾಜ್ಯದಲ್ಲಿ ಚುನಾವಣೆಗಳನ್ನು ರದ್ದುಮಾಡಿ ಅಲ್ಲಿಗೆ ಅಡ್ಮಿನಿಸ್ಟ್ರೇಟರ್‌ಗಳನ್ನು ಹಾಕುವುದಾಗಲಿ, ಅಥವಾ ಅಡ್ವೈಸರಿ ಬಾಡಿಗಳನ್ನು ಕಾನ್ಸಿಟ್ಯೂಟ್ ಮಾಡು ವುದಾಗಲಿ ಸರಿಯಾದುದಲ್ಲ. ಈ ಬಗ್ಗೆ ಪಕ್ಷದಲ್ಲಿ ಏನಾದರೂ ಒಂದು ನಿರ್ಣಯ ತೆಗೆದುಕೊಂಡಿದ್ದರೆ ಅಥವಾ ಸಚಿವ ಸಂಪುಟದಲ್ಲಿ ಒತ್ತಡ ಬಂದಿದ್ದರೂ ಕೂಡ ಅದಕ್ಕೆ ಅವಕಾಶ ಕೊಡಬಾರದು ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ, ಮತ್ತು ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು ಎಂದು ಕೇಳುವುದಕ್ಕೆ ಇಚ್ಛಿಸುತ್ತೇನೆ.

ಇನ್ನು ಈ ಇಲಾಖೆ ಬಗ್ಗೆ ಹೇಳುವುದಾದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ 100ಕ್ಕೆ 70 ಪರ್ಸೆಂಟ್ ಜನ ಏನು ಇದ್ದಾರೆಯೋ ಆ ಜನತೆಯ ಕಲ್ಯಾಣಕ್ಕೆ ದುಡಿಯತಕ್ಕಂಥಾದ್ದು ಈ ಡೆವಲಪ್ ಮೆಂಟ್‌ನ ಒಂದು ಕಾರ್ಯವಾಗಿದೆ. ಆದರೆ ಈ ಕಾರ್ಯದ ವಿವರಣೆ ನೋಡುವುದಾದರೆ ಅಷ್ಟೊಂದು ತೃಪ್ತಿಕರವಾಗಿಲ್ಲ. ಬಹುಶಃ 1952ರಲ್ಲಿ ನಮ್ಮ ರಾಜ್ಯದಲ್ಲ ರಾಷ್ಟ್ರೀಯ ವಿಸ್ತರಣಾ ಯೋಜನೆ ಪ್ರಪ್ರಥಮವಾಗಿ ಪ್ರಾರಂಭವಾಯಿತು, 1952ರಿಂದ 1972ರ ಒಳಗೆ 20 ವರ್ಷಗಳ ಅವಧಿಯಲ್ಲಿ ಗ್ರಾಮಾಂತರ ಪ್ರದೇಶದ ಕಲ್ಯಾಣ ಎಷ್ಟರಮಟ್ಟಿಗೆ ಸುಧಾರಣೆಯಾಗಿದೆ ಎಂದು ಹೇಳುವುದಾದರೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಹೋಗಿಲ್ಲ ಎಂದು ಹೇಳುತ್ತೇನೆ. ಅದನ್ನು ಎಲ್ಲರೂ ಒಪ್ಪುತ್ತಾರೆ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರಿಗೂ ಕೂಡ ಇದರ ಅನುಭವ ಇದೆ. ಶ್ರೀಮಾನ್ ಘೋರ್ಪಡೆಯವರು ನಗರೀಕರಣ ಎಂದು ಹೇಳಿದರು. ಅಂದರೆ ನಗರ ಪ್ರದೇಶದಲ್ಲಿ ಕೆಲವು ಸವ ಲತ್ತುಗಳು ಏನು ಇವೆಯೋ ಅಷ್ಟನ್ನಾದರೂ ಕೂಡ ಗ್ರಾಮಾಂತರ ಪ್ರದೇಶದ ಜನರಿಗೆ ಒದಗಿಸಿ ಕೊಟ್ಟರೆ ಆ ಗ್ರಾಮಾಂತರ ಪ್ರದೇಶಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ದರು. ಇದು ದೇಶದಲ್ಲಿ ಯಾವ ದಿಕ್ಕಿನಲ್ಲಿ ಎಷ್ಟು ದೂರ ಸಾಗಿದೆ ಎನ್ನುವುದನ್ನು ತಿಳಿಸಬೇಕೆಂದು ನಾನು ನೊಂದ ಹೃದಯದಿಂದ ಕೇಳುತ್ತಿದ್ದೇನೆ. ಏತಕ್ಕೆಂದರೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಪ್ರಾರಂಭವಾದಾಗಿನಿಂದಲೂ ನನಗೆ ನಿಕಟ ಸಂಬಂಧ ಇದೆ. ತಾಲ್ಲೂಕು ಬೋರ್ಡ್‌ನಲ್ಲಿ ಮೆಂಬರ್ ಆಗಿ ಕೂಡ ಕೆಲಸ ಮಾಡಿದ್ದೇನೆ. ಒಂದು ವೇಳೆ ಈ ಇಲಾಖೆಯನ್ನು ಕಿತ್ತುಹಾಕಿದರೂ ಚಿಂತೆಯಿಲ್ಲ. ಎಂದು ಹೇಳಬೇಕಾಗಿದೆ. ಈವೊತ್ತು ಅಲ್ಲಿ ನಡೆಯುತ್ತಾ ಇರತಕ್ಕಂಥ ಕೆಲಸ ನೋಡಿದರೆ ಹೊಸ ದಾಗಿ ನಡೆಯತಕ್ಕಂಥಾದ್ದೇನೂ ಇಲ್ಲ. ಎಲ್ಲಾ ಹಿಂದಿನ ಕೆಲಸಗಳೇ. ಯಾವ ತಾಲ್ಲೂಕಿನಲ್ಲಿಯೇ ಆಗಲಿ ನಾವು ನಿರೀಕ್ಷಿಸಿದಷ್ಟು ಪ್ರಗತಿ ಆಗಿಲ್ಲ. ಅಧಿಕಾರಿಗಳು ಬೇಕಾದಷ್ಟು ಎಷ್ಟೋ ಜನ ಇರ ಬಹುದು. ಈವೊತ್ತು ಡೆವಲಪ್‌ಮೆಂಟ್ ಕಮೀಷನರ್‌ರವರು 6-7 ವರ್ಷದಿಂದಲೂ ಅದೇ ಹುದ್ದೆಯಲ್ಲಿ ಮುಂದುವರೆಸಿಕೊಂಡು ಬಂದಿರಬಹುದು. ಅವರು ವಿದೇಶದಲ್ಲಿ ಪ್ರವಾಸ ಮಾಡಿ ಜ್ಞಾನ ಹೆಚ್ಚಿರ ಬಹುದು, ಇಲ್ಲ ಎಂದು ಹೇಳುವುದಿಲ್ಲ. ಆದರೆ ಆ ಜ್ಞಾನ ಕೃತಿಗೆ ಇಳಿಯುವುದಕ್ಕೆ ಸಾಧ್ಯವಾಗಿಲ್ಲ. ನಾವು ಇದರ ಬಗ್ಗೆ ಏನೇನು ಯೋಜನೆಗಳನ್ನು ಹಾಕಿದ್ದೇವೆಯೋ ಅದೆಲ್ಲಾ ನಿಜಕ್ಕೂ ನೀರಿನಲ್ಲಿ ಹೋಮ ಮಾಡಿದ ಹಾಗಾಗುತ್ತದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನ್ಯೂಟ್ರಿಷನ್ ಪ್ರೋಗ್ರಾಂ ನಲ್ಲಿ ನಮ್ಮ ಮಿತ್ರರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರೂ ಕೂಡ ಕೆಲಸ ಮಾಡಿದ್ದಾರೆ. ಈವೊತ್ತು ಆ ಸ್ಕೀಂನಲ್ಲಿ ಒಂದು ಬ್ಲಾಕ್‌ಗೆ 5 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಆ ಸ್ಕೀಂನಲ್ಲಿ ಏನೇನು ಯೋಜನೆಗಳನ್ನು ಇಟ್ಟಿದ್ದಾರೆ ಆ ನ್ಯೂಟ್ರಿಷನ್ ಪ್ರೋಗ್ರಾಂನಂತೆ ಸರಿಯಾಗಿ ಕೆಲಸ ಆಗುತ್ತಿದೆಯೇ? ಈವೊತ್ತಿನ ದಿವಸ ಪೌಲ್ಟ್ರಿಫಾರಂ ಬೆಳೆಸಬೇಕು ಎಂದು ಏನು ಮಾಡಿದ್ದಾರೆ ಅದರಂತೆ ಪ್ರತಿಯೊಂದು ಯೂನಿಟ್‌ನಲ್ಲೂ ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದ್ದೀರಾ? ಈವೊತ್ತು ಅವರಿಗೆ ಏನು ಸಲಕರಣೆ ಕೊಟ್ಟಿದ್ದೀರೋ ಅದರಲ್ಲಿ ಎಷ್ಟೋ ಜನ ಮಾರಿಕೊಂಡು ಹೋಗಿದ್ದಾರೆ. ಬೇಕಾದರೆ ಇದರ ಬಗ್ಗೆ ಅಂಕಿಸಂಖ್ಯೆಗಳನ್ನು ಸಂಗ್ರಹಣೆ ಮಾಡಿಸಿ, ಮತ್ತು ಈ 5 ಲಕ್ಷ ರೂಪಾಯಿ ಏನು ಇಟ್ಟಿದ್ದೀರೋ ಅದರಿಂದ ಯಾವ ಗರ್ಭಿಣಿಯರಿಗಾಗಲಿ ಯಾವ ಹೆಂಗಸರಿಗಾಗಲಿ ಯಾವ ಸಮಾಜದಲ್ಲೇ ಆಗಲಿ ಪೌಷ್ಟಿಕ ಆಹಾರ ದೊರಕಿದೆಯೋ, ಇದರಿಂದ ಯಾರಿಗೆ ಲಾಭ ದೊರಕಿದೆ ಎನ್ನತಕ್ಕಂಥಾದ್ದರ ಬಗ್ಗೆಯೂ ವಿಚಾರಣೆ ಮಾಡಿಸಿ. ಏತಕ್ಕೆಂದರೆ ಇದರಿಂದ

ಕೇವಲ ಹಣ ವೆಚ್ಚವಾಗುತ್ತದೆಯೇ ವಿನಾ ಪ್ರಯೋಜನವಾಗುವುದಿಲ್ಲ. ಈ ಒಂದು ಯೋಜನೆಯಲ್ಲಿ ದೋಷ ಇದೆ ಎಂದು ಹೇಳುತ್ತೇನೆ. ಯಾರೋ ಒಬ್ಬರು ಕೇಂದ್ರದಲ್ಲಿ ಕೂತುಕೊಂಡು ಒಂದು ನಿರ್ಣಯ ಮಾಡಿಬಿಡುತ್ತಾರೆ. ಆದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳು ಹೋಗಿ ಅದರ ಮುಂದೆ ಕೂತುಕೊಂಡು ಒಂದು ದಿವಸಕ್ಕೆ ಎಷ್ಟು ಮೊಟ್ಟೆ ಇಡುತ್ತದೆ ಅವೆಲ್ಲವನ್ನೂ ಪರೀಕ್ಷೆ ಮಾಡಲು ಸಾಧ್ಯವೇ? ಅಧಿಕಾರಿಗಳು ಹೋದರೆ ಅವರಿಗೆ ಊಟ ಹಾಕಿ ಸರ್ಟಿಫಿಕೇಟ್ ತೆಗೆದುಕೊಂಡು ಬಿಡುತ್ತಾರೆ. ನಾವು ಹೋದರೆ ನಮಗೂ ಊಟ ಹಾಕಿ ನಮ್ಮಿಂದ ಸರ್ಟಿಫಿಕೇಟ್ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದುದರಿಂದ ಈ ಸ್ಕೀಂ ಬಗ್ಗೆ ಹೇಳುವುದಾದರೆ ಇನ್ ಟೋಟೋ ಫೈಲ್ಯೂರ್ ಆಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನೀವು ಯಾವುದಾದರೂ ಒಂದು ಬ್ಲಾಕ್‌ಗೆ ಕರೆದುಕೊಂಡು ಹೋಗಿ ಇದು ಸಕ್ಸಸ್‌ಫುಲ್ ಆಗಿದೆ ಎಂದು ತೋರಿಸಿದರೆ ನಾನು ಒಪ್ಪಿಕೊಳ್ಳುತ್ತೇನೆ. ನೀವು ಅಲ್ಲಿ ಕೊಟ್ಟಿರತಕ್ಕಂಥ ಪದಾರ್ಥಗಳೇ ಇರುವುದಿಲ್ಲ.

ಒಬ್ಬ ಸದಸ್ಯರು.—ಅದು ನಿಮ್ಮ ಸರ್ಕಾರದಿಂದಲೇ ಬಂದಿರುವುದು.

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೊಸಬರು. ಸರಿಯಾದ ವಿಚಾರ ತಮಗೆ ಗೊತ್ತಿಲ್ಲ. ಯಾವ ಸರ್ಕಾರ ಇದ್ದರೂ ಇಷ್ಟೇ. ಪೌಲ್ಟ್ರಿ ಫಾರಂ ಆಗಲಿ ಯಾವುದೇ ಆಗಲಿ ಗ್ರಾಮಾಂತರ ಪ್ರದೇಶದಲ್ಲಿ ಈ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ ಕಷ್ಟ ಇದೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈಗ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿದ್ದಾರೆ. ಅವರು ಇನ್‌ಸಿಸ್ಟ್ ಮಾಡಿ ಕೆಲಸ ಮಾಡಿಸಬಹುದು. ಆದರೆ ಅವರು ಪ್ರತ್ಯಕ್ಷವಾಗಿ ತಾವೇ ಹೋಗಿ ಕೂತುಕೊಂಡು ಆ ಕೋಳಿ ಎಷ್ಟು ಮೊಟ್ಟೆ ಇಡುತ್ತದೆ, ಈ ಕೋಳಿ ಎಷ್ಟು ಮೊಟ್ಟೆ ಇಡುತ್ತದೆ ಎನ್ನುವ ಅಂಕಿಸಂಖ್ಯೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ. ಆ ರೀತಿ ಒಂದು ಧೋರಣೆ ಇಟ್ಟುಕೊಂಡರೂ ಕೂಡ ಕೆಲಸ ಮಾಡುವುದಕ್ಕೆ ಕಷ್ಟ ಇದೆ. ಈ ಇಂಪ್ರಾಕ್ಟಿಬಲ್ ಸ್ಕೀಂ ಏನು ಇದೆ ಇದರಿಂದ ಹಣ ಪೋಲು ಆಗುತ್ತಿದೆಯೇ ಹೊರತು ನಾವು ನಿರೀಕ್ಷಿಸಿದ ಲಾಭ ಬರುವುದಿಲ್ಲ ಎಂದು ಹೇಳುತ್ತೇನೆ. ಹೀಗೆ ಹೇಳುತ್ತಾ ಹೋದರೆ ಇನ್ನೂ ಹಲವಾರು ಇವೆ.

ಇನ್ನು ಫಿಷರೀಸ್ ವಿಚಾರದಲ್ಲಿ ಹೇಳುವುದಾದರೂ ಕೂಡ ನಾವು ನಿರೀಕ್ಷಿಸಿದಷ್ಟು ಲಾಭ ಬರುವುದಿಲ್ಲ. ಇದನ್ನು ಪ್ರಾಕ್ಟಿಕಲ್ ಆಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿಯಾಗಿ ಹಣ್ಣು ಬೆಳೆಸುವುದು, ಕಿಚನ್ ಗಾರ್ಡನ್ ಮಾಡುವುದು ಇವೆಲ್ಲಾ ಬರೀ ಹೆಸರುಗಳಲ್ಲಿ ಇರುತ್ತದೆಯೇ ವಿನಾ ಇದನ್ನು ಕಾರ್ಯರೂಪಕ್ಕೆ ತರುವುದು ಕಷ್ಟ ಇದೆ.

ಶ್ರೀ ಎಂ. ಮಲ್ಲಪ್ಪ.—ನಮ್ಮ ಕಡೆ ಪೌಲ್ಟ್ರಿ ಫಾರಂ ಚೆನ್ನಾಗಿ ಕೆಲಸ ಮಾಡುತ್ತಾ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮಗೆ ಏನಾದರೂ ಕೋಳಿ ಮೊಟ್ಟೆ ತಿನ್ನುವ ಅಭ್ಯಾಸ ಇದ್ದರೆ ಹೇಳಿ. ಆ ರೀತಿ ಏನಾದರೂ ಇದ್ದರೆ ಆ ಕೋಳಿ ಇರುವುದಕ್ಕೇನೇ ಬಿಡುವುದಿಲ್ಲ.
ಕ್ರಾಷ್ ಪ್ರೋಗ್ರಾಂ ಏನಿದೆ ಅದರ ಪ್ರಕಾರ ದೇಹ ದಾರ್ಢ್ಯ ವ್ಯಕ್ತಿಗಳಿಗೆ ಕೆಲಸವನ್ನು ದೊರಕಿಸುವುದಕ್ಕಾಗಿ ಒಂದು ಪ್ರೋಗ್ರಾಂ ಕೊಟ್ಟಿದ್ದಾರೆ. ಇವರು ಕೊಟ್ಟಿರುವ ಪ್ರಕಾರ ಮೂರು ರೂಪಾಯಿ ಕೆಲಸವನ್ನು ಅವನು ಮಾಡಲಿಕ್ಕೆ ಸಾಧ್ಯವಿಲ್ಲ. ಮೂರು ರೂಪಾಯಿ ಕೆಲಸವನ್ನು ಕೊಡಸಲಿಕ್ಕೆ ಅಳತೆಯಲ್ಲಿ ಅಡ್ಜಸ್ಟ್ ಮಾಡಿ ಬಿಲ್ಲನ್ನು ಮಾಡತಕ್ಕ ಅನೇಕ ನಿರ್ದೇಶನಗಳಿವೆ. ಈ ಯೋಜನೆ ಕೆಟ್ಟದ್ದು ಎಂದು ಹೇಳುವುದಿಲ್ಲ. ಹಳ್ಳಿಯಲ್ಲಿರುವ ಜನತೆಗೆ, ಉದ್ಯೋಗವಿಲ್ಲದ ಜನತೆಗೆ ಕೆಲಸವನ್ನು ಕೊಡಬೇಕೆಂಬ ಸದುದ್ದೇಶದಿಂದ ತಂದಿರುವ ಯೋಜನೆ ಫಲಪ್ರದವಾಗಿ ನಡೆಯುವಂತೆ ಮಾಡುವುದಕ್ಕೆ ಈಗ ಇರತಕ್ಕ ಲೋಪದೋಷಗಳನ್ನು ಕಿತ್ತು ಹಾಕಲಿಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

5-30 P.M.

ಅಧಿಕಾರಿಗಳು ಬಹಳ ಚೆನ್ನಾಗಿ ಕಾಣುವಂತೆ ಬರೆದಿರುತ್ತಾರೆ. 259.31 ಲಕ್ಷ ಮ್ಯಾನ್ ಡೇಸ್ ಎಂದು ಹೇಳಿದ್ದಾರೆ. ಅದನ್ನು ನಿಮಿಷಗಳಿಗೆ ಪರಿವರ್ತನೆ ಮಾಡಿದರೆ ಎಷ್ಟಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅಂಕಿಗಳನ್ನು ಕೊಟ್ಟಿದ್ದಾರೆ. ಹಿಂದೆ ಶ್ರೀ ಕೆ. ತಿಪ್ಪೇರುದ್ರಯ್ಯನವರು ಜಿಲ್ಲಾಧಿಕಾರಿಗಳಾಗಿದ್ದಾಗ ಕಾಂಪೋಸ್ಟ್ ಪಿಟ್ಸ್ ಬಗ್ಗೆ ಕೊಟ್ಟಿದ್ದ ಅಂಕಿ ಅಂಶಗಳನ್ನು ನೋಡಿ, ಇಷ್ಟು ಪಿಟ್ಸ್ ಆಗಬೇಕಾದರೆ ಆ ಊರಿನಲ್ಲಿರುವ ಜಮೀನಿನಲ್ಲೆಲ್ಲ ಆಕ್ರಮಿಸಬೇಕಾಗಿತ್ತು ಎಂದು ಹೇಳಿದ್ದರು. ಆದ್ದರಿಂದ ಇವರು ಕೊಟ್ಟಿರುವುದೆಲ್ಲ ನೈಜವಾದ ಚಿತ್ರವಲ್ಲ. ಕೇವಲ ಕಾಲ್ಪನಿಕ

(ಶ್ರೀ ಎಚ್. ಡಿ. ದೇವೇಗೌಡ)

ದೃಷ್ಟಿಯಿಂದ ಕೆಲವು ಯೋಜನೆಗಳನ್ನು ಇಟ್ಟುಕೊಂಡು ಮುಂದುವರಿಸುವುದರಲ್ಲಿ ಅರ್ಥವಿಲ್ಲ. ಮುಂದುವರಿಸುವುದಾದರೆ ಇರತಕ್ಕ ಲೋಪದೋಷಗಳನ್ನು ತಿದ್ದಬೇಕು. ಆಗ ಮಾತ್ರ ನಿರೀಕ್ಷಿಸಿದ ಫಲ ದೊರಕುತ್ತದೆ. ಹಿಂದಿನ ಅನುಭವದಿಂದ ಮುಂದೆ ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಅದಿಲ್ಲದೆ ಹೋದರೆ ಹಣ ಪೋಲಾಗುತ್ತದೆ ಮತ್ತು ಹಳ್ಳಿಯ ಜನರ ಜೀವನ ಸುಗಮವಾಗುವುದಿಲ್ಲವೆಂದು ಹೇಳುತ್ತೇನೆ.

ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಬಗ್ಗೆ ಹೇಳುವುದಾದರೆ ಅನೇಕ ಗ್ರಾಮಗಳಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಿದ ಮೇಲೆ ಕರೆಂಟ್ ಚಾರ್ಜನ್ನು ಕಟ್ಟುವುದಕ್ಕಾಗದೆ ನೀರು ಸರಬರಾಜು ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ ಸಂಬಂಧಪಟ್ಟ ಕಾನೂನು ತಿದ್ದುಪಡಿ ಮಾಡಿ, ಲ್ಯಾಂಡ್ ರೆವೆನ್ಯೂನಲ್ಲಿ ಏನು ಭಾಗವನ್ನು ಪಂಚಾಯಿತಿಗಳಿಗೆ ಕೊಡಲಾಗುತ್ತದೆ ಅದರಲ್ಲಿ ಪವರ್ ಚಾರ್ಜಸ್ ಕೊಡಬೇಕಾದ್ದನ್ನು ಕಟ್ ಆಫ್ ಮಾಡಿ ನೀರು ಸರಬರಾಜು ಸರಿಯಾಗಿ ಆಗುವಂತೆ ಮಾಡಬೇಕು. ಲಕ್ಷಾಂತರ ರೂಪಾಯಿ ಸುರಿದು, ಪಂಚಾಯಿತಿಯವರು ಹಣ ಕಟ್ಟಲಿಲ್ಲವೆನ್ನುವ ಕಾರಣಕ್ಕಾಗಿ ಆ ಯೋಜನೆ ನಿರುಪಯುಕ್ತವಾದ ಸನ್ನಿವೇಶಕ್ಕೆ ಬರುವಂತೆ ಮಾಡುವುದು ಸರಿಯಲ್ಲ.

ಶ್ರೀ ಆರ್ಮುಗಂ ಅವರು ಕೆಲವು ವಿಷಯ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಪದೇ ಪದೇ ಅದನ್ನು ಹೇಳಿದ್ದೇನೆ. ಶ್ರೀ ದೇವರಾಜ ಅರಸು ಅವರು ಮುಖ್ಯ ಮಂತ್ರಿಯಾದ ಮೇಲೆ ಈ ವಿಷಯದ ಬಗ್ಗೆ ನಾನು ಒಂದು ಸ್ಪೆಷಲ್ ಮೋಷನ್ ತಂದು ಚರ್ಚೆ ಮಾಡಿದ್ದುಂಟು. ಆ ಹೊತ್ತು ಜಾತಿಯ ಭಾವನೆಯಿಂದ ಮಾತನಾಡುತ್ತಿದ್ದೇನೆನ್ನುವ ರೀತಿಯಲ್ಲಿ ಪರೋಕ್ಷವಾಗಿ ನನ್ನ ಮೇಲೆ ಆಪಾದನೆ ಮಾಡಿದ್ದನ್ನು ಬಲ್ಲೆ. ಯಾವ ಜಾತಿಗೇ ಅನ್ಯಾಯವಾಗಿರಲಿ ಅದನ್ನು ಸರಿಪಡಿಸತಕ್ಕದ್ದು ಪ್ರತಿಯೊಬ್ಬರ ಕರ್ತವ್ಯ. ಕಳೆದ 25 ವರ್ಷಗಳಿಂದ ಯಾವುದೇ ಜಾತಿಯನ್ನು ಅಲಕ್ಷ್ಯ ಮಾಡಿ, ಅವರಿಗೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸತಕ್ಕದು ನಮ್ಮ ಧರ್ಮ. ರಾಜ್ಯದಲ್ಲಿರುವ ಹಲವೊಂದು ಜಾತಿಗಳಿಗೆ ಏನಾದರೂ ಅನ್ಯಾಯವಾಗಿದ್ದರೆ ಅದರ ಬಗ್ಗೆ ಅಂಕಿ ಅಂಶ ಸಂಗ್ರಹಣೆ ಮಾಡಬೇಕು. ಅದಾದ ಮೇಲೆ ಯಾವ ಜಾತಿಗೆ ಅನ್ಯಾಯವಾಗಿದೆ ಅವರಿಗೆ ಹೆಚ್ಚು ಸವಲತ್ತು ಮತ್ತು ಸ್ಪೆಷಲ್ ಅಸಿಸ್ಟೆನ್ಸ್ ಯಾವುದು ಬೇಕಾದರೂ ಕೊಡೋಣ. ಅದಕ್ಕೆ ನಾನು ತಯಾರಾಗಿದ್ದೇನೆ. ಈ ಬಗ್ಗೆ ಅವಶ್ಯಕವಾದಲ್ಲಿ ಒಂದು ಆಯೋಗವನ್ನು ಕೂಡ ನೇಮಿಸಬೇಕು. ಬೇಕಾದ ಅಂಕಿ ಅಂಶಗಳನ್ನು ಸಂಗ್ರಹ ಮಾಡಿ ಅನ್ಯಾಯವಾಗಿರುವವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಹೇಳತ್ತೇನೆ.

†ಶ್ರೀಮತಿ ರೇಣುಕಾ ರಾಜೇಂದ್ರನ್ (ಬಾಗೇಪಲ್ಲಿ).—ಮಾನ ಸಭಾಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ ಪುನರ್ರಚನೆಯಾಗಬೇಕೆಂದು ಹೋದ ಸಾರಿ ನಾನು ಹೇಳಿದ್ದೆ. ಈ ಬಾರಿಯೂ ಪುನ: ಹೇಳುತಿದ್ದೇನೆ. ಈಗಾಗಲೇ ಈ ಇಲಾಖೆಯ ಪುನರ್ರಚನೆಯ ಬಗ್ಗೆ ಇಲಾಖಾಧಿಕಾರಿಗಳು ಕಳುಹಿಸಿರುವ ಸಿಫಾರಸುಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಒಳ್ಳೆಯ ಕೆಲಸ ನಡೆಯುವಂತೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಿ ಕೆಲವಾರು ಸಲಹೆಗಳನ್ನು ತಮ್ಮ ಮುಂದೆ ಇಡುತ್ತೇನೆ.

ಸಮಾಜಕಲ್ಯಾಣ ಇಲಾಖೆಯ ಆಡಳಿತವರ್ಗವೇನಿದೆ, ಆ ಅಧಿಕಾರ ವರ್ಗದ ಅಂತಸ್ತನ್ನು ಹೆಚ್ಚಿಸದೆ ಹೋದರೆ ಒಳ್ಳೆಯ ಕೆಲಸ ಮಾಡುವುದು ಸಾಧ್ಯವಾಗುವುದಿಲ್ಲವೆನ್ನುವ ವಿಚಾರವನ್ನು ಹೇಳಬೇಕಾಗಿದೆ. ಅದಕ್ಕಾಗಿ ಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ಈ ಇಲಾಖೆಗೆ ನೇಮಕ ಮಾಡಬೇಕು, ಹಾಗೆಯೇ ಜಿಲ್ಲೆಯಲ್ಲಿ ಕೆಲಸ ಮಾಡುವ ಅಧಿಕಾರಿಯನ್ನು ಜಿಲ್ಲಾಧಿಕಾರಿ ಮಟ್ಟದವರನ್ನಾಗಿ ಮಾಡಿ ತಾಲ್ಲೂಕು ಮಟ್ಟದ ಇನ್ಸ್‌ಪೆಕ್ಟರ್‌ಗಳ ಅಂತಸ್ತನ್ನು ಎಕ್ಸ್‌ಟೆನ್ಷನ್ ಆಫೀಸರ್ ಮಟ್ಟಕ್ಕೆ ಏರಿಸಬೇಕು. ಇಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ಹುದ್ದೆಗಳನ್ನು ಈ ಇಲಾಖೆಗೆ ಒದಗಿಸುವುದಾದರೆ ಒಳ್ಳೆಯ ಅಧಿಕಾರ ವರ್ಗವನ್ನು ಪಡೆದು ಉತ್ತಮ ಕೆಲಸಮಾಡುವುದಕ್ಕೆ ಅನುಕೂಲವಾತ್ತದೆ.

ಈ ಇಲಾಖೆಯಲ್ಲಿ ಯೋಜನೆಗಳಿಗೆ ಸರಿಯಾದ ಪ್ರಚಾರ ಸಿಕ್ಕುತ್ತಿಲ್ಲ. ಬೇಕಾದ ಅಂಕಿ ಅಂಶಗಳು ಸಿಕ್ಕುತ್ತಿಲ್ಲ ತಾಲ್ಲೂಕು ಮಟ್ಟದಲ್ಲಿ ಹರಿಜನ ಗಿರಿಜನರ ಜನಸಂಖ್ಯೆ ಎಷ್ಟಿದೆ, ಅವರಲ್ಲಿ ಎಷ್ಟು ಜನ ವಿದ್ಯಾವಂತರಿದ್ದಾರೆ, ನೌಕರಿಯಲ್ಲಿರುವವರೆಷ್ಟು ಜನ, ವ್ಯವಸಾಯಗಾರರೆಷ್ಟು ಜನ, ಸಣ್ಣ

ಪುಟ್ಟ ಕೈಗಾರಿಕೆಯನ್ನು ವೃತ್ತಿಯನ್ನಾಗಿ ಇಟ್ಟುಕೊಂಡಿರುವ ಕುಟುಂಬಗಳೆಷ್ಟು ಈ ತರಹ ಅಂಕಿ ಅಂಶಗಳು ಈಗ ಸಿಕ್ಕುತ್ತಿಲ್ಲ. ಆದುದರಿಂದ ಇದಕ್ಕಾಗಿ ಯಾವುದಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ವಿದ್ಯಾಭ್ಯಾಸದ ಯೋಜನೆಯಲ್ಲಿ ಹರಿಜನ ಗಿರಿಜನರಿಗೆ ಹಾಸ್ಟಲ್ ವ್ಯವಸ್ಥೆ ಇದೆ. ಹೈಸ್ಕೂಲು ವಿದ್ಯಾರ್ಥಿಗಳಿರುವ ಹಾಸ್ಟಲಿನಲ್ಲಿ ಸೂಪರಿಂಟೆಂಡಂಟ್ ಆಗಿ ಎಸ್.ಎಸ್.ಎಲ್.ಸಿ. ಪಾಸಾಗಿರುವವರನ್ನು ಮಾತ್ರ ನೇಮಕ ಮಾಡಿದ್ದಾರೆ. ಅಲ್ಲಿಗೆ ಪದವೀಧರರನ್ನು ನೇಮಕ ಮಾಡಿದರೆ ಒಳ್ಳೆಯದಾಗುತ್ತದೆ. ಸರ್ಕಾರ ಈ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದೆ ಸಿಬ್ಬಂದಿ ವರ್ಗ ಹೆಚ್ಚಾಗಿ ಕೆಲವು ಕಡೆ ಇದೆ. ಇದರ ಬಗ್ಗೆ ಸರಿಯಾದ ಅಂಕಿಅಂಶಗಳನ್ನು ತರಿಸಿಕೊಂಡು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಾನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ವಿದ್ಯಾರ್ಥಿ ವೇತನವನ್ನು ಎಲ್ಲ ಮಕ್ಕಳಿಗೂ ಕೊಡುತ್ತಿಲ್ಲ. ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಕೊಡದೆ ಇದ್ದರೆ ಹಾಸ್ಟಲುಗಳಲ್ಲಿ ಉಳಿದುಕೊಂಡು ವ್ಯಾಸಂಗ ಮಾಡುವುದಕ್ಕಾದರೂ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮೆರಿಟ್ ಸ್ಕಾಲರ್‌ಷಿಪ್‌ಗಳನ್ನು ಹಿಂದುಳಿದ ವರ್ಗಗಳವರಿಗೂ ಸಿಗುವಂತೆ ಏರ್ಪಾಡು ಮಾಡಬೇಕು. ರಾಜ್ಯದಲ್ಲಿ ಸುಮಾರು 250 ಜೂನಿಯರು ಕಾಲೇಜುಗಳನ್ನು ಆರಂಭಮಾಡಿದ್ದಾರೆ. ಇದರಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಹಾಗೂ ತಾಲ್ಲೂಕುಮಟ್ಟದಿಂದ ಬರುವ ಹಿಂದುಳಿದ ಮಕ್ಕಳಿಗೂ ಪ್ರವೇಶಾವಕಾಶ ಇರುವಂತೆ ವ್ಯವಸ್ಥೆಮಾಡಬೇಕು. ಸರಕಾರದ ನಿಯಮದಲ್ಲಿ ಹಿಂದುಳಿದ ವರ್ಗಗಳವರಿಗೆ ಮೀಸಲು ಇಡಬೇಕೆಂದು ಇದ್ದರೂ ಇದನ್ನು ಅಧಿಕಾರಿಗಳು ಸರಿಯಾಗಿ ಅನುಸರಿಸುತ್ತಿಲ್ಲ. ಯಾರು ಸರಕಾರದ ನಿಯಮವನ್ನು ಮೀರಿ ಕೆಲಸ ಮಾಡುತ್ತಾರೋ ಅಂತಹವರಿಗೆ ಐನೂರು ರೂಪಾಯಿಗಳ ದಂಡ ವಿಧಿಸುವಂತಹ ಶಿಕ್ಷೆ ಕೊಡಬೇಕು ಎಂದು ಮಾಡಬೇಕು. ಕೇಂದ್ರ ಸರಕಾರದವರು ಶೇಕಡಾ 18 ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕು ಎಂದು ರಾಜ್ಯ ಸರಕಾರಗಳಿಗೆ ಸೂಚನೆ ಕೊಟ್ಟಿದ್ದರೂ ಆ ರೀತಿ ಸರಕಾರ ಎಲ್ಲ ಕ್ಷೇತ್ರಗಳಲ್ಲೂ ಅನುಸರಿಸುತ್ತಿಲ್ಲ. ಇದರ ಕಡೆಗೆ ಲಕ್ಷ ಕೊಡಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹೊರಗಿನಿಂದ ತಂದು ಇಲ್ಲಿ ಡೆಪ್ಯೂಟಿ ಡೈರೆಕ್ಟರ ಎಂದು ಮಾಡಿದ್ದಾರೆ, ಇದಕ್ಕೆ ಬದಲು ಇದೇ ಇಲಾಖೆಯಲ್ಲಿರುವವರಿಗೆ ಅವಕಾಶ ಕೊಡಬೇಕು. ಮಾನ್ಯ ಪಿ. ಡಬ್ಲ್ಯೂ ಡಿ ಮಂತ್ರಿಗಳು ಶ್ರೀ ಜಯಪ್ರಕಾಶನಾರಾಯಣ್ ಹಾಗೂ ಇತರ ಸದಸ್ಯರು ಕಳುಹಿಸಿದ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುತ್ತಾ ಅಸಿಸ್ಟೆಂಟು ಇಂಜಿನೀಯರುಗಳನ್ನು ನೇಮಕ ಮಾಡುವಾಗ ಬಡತಿಯಿಂದ ಕೊಡಲಾಗುತ್ತದೆ ಎಂದು ಹೇಳಿದರು. ಈ ರೀತಿ ಬಡತಿ ಕೊಡುವುದಕ್ಕಿಂತ ಇಂತಹ ಹುದ್ದೆಗಳಿಗೆ ಡೈರೆಕ್ಟ್ ಆಗಿ ನೇಮಕ ಮಾಡುವುದೇ ನ್ಯಾಯವಾಗಿರುತ್ತದೆ ಎಂದು ಈ ಸಂದರ್ಭದಲ್ಲಿ ಸೂಚಿಸಲು ಇಷ್ಟಪಡುತ್ತೇನೆ. ತಾಲ್ಲೂಕು ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲ ಶೇಕಡಾ 18 ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಸೂಚನೆ ಇದ್ದರೂ ಸಹ ಅದನ್ನು ರಾಜ್ಯ ಸರಕಾರ ಮಾನ್ಯ ಮಾಡುತ್ತಿಲ್ಲ. ತಾಲ್ಲೂಕು ಬೋರ್ಡುಗಳಲ್ಲಿ ಹಾಸ್ಟಲುಗಳಿಗಾಗಿ ಸಾರ್ವಜನಿಕರಿಂದ ಬಂದ ವಂತಿಗೆಯನ್ನು ಅಡಜಸ್ಟ್ ಮಾಡುತ್ತಿದ್ದಾರೆ, ಇದನ್ನು ತಪ್ಪಿಸಬೇಕು ಮತ್ತು ಹಾಸ್ಟಲುಗಳಿಗೆ ಹೆಚ್ಚು ಗ್ರ್ಯಾಂಟುಗಳನ್ನು ಕೊಡಬೇಕು.

ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ನಾನು ಕೆಲವು ಮಾತುಗಳನು ಹೇಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್—ಅಧ್ಯಕ್ಷರೇ ಒಂದು ವಿಚಾರ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. 43 ಜನ ಸದಸ್ಯರು ಮನವಿ ಮನವಿಕೊಟ್ಟಿರುವುದರ ಬಗ್ಗೆ ಇಂದು ಸಂಜೆ ಪ್ರಸ್ತಾಪ ಮಾಡಲು ಅಧ್ಯಕ್ಷರು ನನಗೆ ಅವಕಾಶವನ್ನು ಕೊಟ್ಟಿದ್ದರು. ಇದರ ಬಗ್ಗೆ ತಮ್ಮನ್ನು ಕೇಳುತ್ತಿದ್ದೇನೆ.

MR DEPUTY SPEAKER —I was also present when the Speaker had just spoken about this. What she said at that time was that you may be given a chance after the demand is over. Earlier it was agreed that not only discussion should be over, but the reply of the Minister also should be over to day and the Demands should be put to vote.

ಶ್ರೀ ಕಾಗೋಡು ತಿಮ್ಮಪ್ಪ.—ಇಂದಿನ ಬೆಳಿಗ್ಗೆ ನಡೆದಿರುವ ಪ್ರೊಸೀಡಿಂಗ್ಸ್ ನೋಡಿದರೆ ನಮಗೆ ಇದು ಗೊತ್ತಾಗತ್ತದೆ. ಇದನ್ನು ತರಿಸಿ ತಾವು ನೋಡಬಹುದು.

Mr. DEPUTY SPEAKER.—It is up to the presiding officer to interpret also.

Sri KAGODU THIMMAPPA.—It need not require any interpretation at all. You may refer to the proceedings.

Mr. DEPUTY SPEAKER.—Mr. Thimmappa, I think you can understand that we cannot throw to the winds the List of Business. Do you agree ? Let us have a very benevolent interpretation of what she said.

Sri H. S. SIDDAPPA.—Sir, this is a very big Demand. I may be given some time. Even the Minister will not be unwilling to extend the discussion on this Demand.

Mr. DEPTY SPEAKER.—For you and for me, every Demand is big and it is very important. But it has been agreed with all the paeties concerned, that discussion should be over now. For your information at 3.45, I wanted to accommodate Sri J. L. Kabadi who was throwing hints that he may be given some time. With due consideration, I tried to acommodate him. Let us respect the decisions and agreements which have been arrived at. We must see that the Demands are pushed through. I personally would not object, if one demand is taken for the whole period. You can discuss this with the Leader of the Opposition.

I should also say that even if the Minister agrees, we cannot extend the time. It is for the Presiding Officer to regulate the business once there is agreement on the items of business.

Sri H. S. SIDDAPPA.—Sir, you said you want to show some consideration to Mr. J. L. Kabadi Why not have the same consideration towards me ? I want to submit to the Leaders on both sides to extend this discussion to tomorrow so that we can all speak.

ಶ್ರೀ ಪಾಟಾಳ್ ನಾಗರಾಜ್.—ನನಗೆ ಇಂದು ಸಾಯ್ಯಂಕಾಲ ಮಾತನಾಡಲ ಅವಕಾಶ ಕೊಡಬೇಕೆಂದು ಕೇಳಿದ್ದಕ್ಕೆ ಅಧ್ಯಕ್ಷರು ಒಪ್ಪಿದ್ದರು ಮತ್ತುನಾನು ಈ ಡಿಮ್ಯಾಂಡಿನ ಬಗ್ಗೆ ಮಾತನಾಡ ಬೇಕು.

Mr DEPUTY SPEAKER.-Let us have some sense of proportion. That is why I told you it will not be possible to accommodate you so far as this Demand is concerned, becacuse the Leaders of the various parties have agreed that we must stop discussion by 5.45. That is why I just wanted to accommodate Mr. J. L. Kabadi for five minutes as a special consideration. I have called upon him. Why do you rake up past things ?

ಶ್ರೀ ಕೋಣಂದೂರು ಲಿಂಗಪ್ಪ.— ನಮ್ಮ ಪಾರ್ಟಿಯವರಿಗೂ ಕೂಡ ಇದರಲ್ಲಿ ಮಾತನಾಡಲು ಅವಕಾಶ ಕೊಡಬೇಕು. ಇದರಲ್ಲಿರವ ಒಂದು ಡಿಮ್ಯಾಂಡಿನ ಬಗ್ಗೆ ಯಾರೂ ಇಲ್ಲಿ ಮಾತನಾಡಿಲ್ಲ.

Mr. DEPUTY SPEAKER.—If some member has not spoken on a certain demand, I cannot do anything. It is not within my powers. I do not want to use my discretion in a wild way. I will use it in a reasonable way.

ಶ್ರೀ ಕೋಣಂದೂರು ಲಿಂಗಪ್ಪ.—ಈ ಡಿಮ್ಯಾಂಡ್ ಬಗ್ಗೆ ನಮ್ಮ ಪಕ್ಷದವರು ಮಾತನಾಡ ಬಾರದು ಎಂದರೆ ಹೇಗೆ ? ಸಾಮಾಜಿಕ ಸಿದ್ಧಾಂತದ ಬಗ್ಗೆ ನಮಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ ಎಂದರೆ ಹೇಗೆ ? ತಾವು ನಮ್ಮನ್ನು ಸಹ ಕರುಣೆಯಿಂದ ನೋಡಿಕೊಳ್ಳಬೇಕು. ಈ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಸೋಷಿಯಲಿಸ್ಟ್ ಪಾರ್ಟಿಯವರು ಮಾತನಾಡಲು ಎರಡು ನಿಮಿಷಗಳ ಕಾಲಾವಕಾಶ ಇಲ್ಲ ಎಂದರೆ ಇದು ಯಾವ ಸಮಾಜವಾದ ಯಾವ ಸಮಾಜ ಕಲ್ಯಾಣ ; ಯಾವ ನೀತಿನಿಯಮ ಎಂದು ಕೇಳಬೇಕಾಗುತ್ತದೆ. ನಾವು ತಾಳ್ಮೆಯಿಂದ ಇರುವುದೇ ನಮ್ಮ ವೀಕ್‌ನೆಸ್ ಆಗಿದೆ ಎಂದು ಕಾಣುತ್ತಿದೆ.

Mr. DEPUTY SPEAKER.—The hon. Member Sri Lingappa is still young and I have my goodwill for him. I request the hon. Member to refrain from using ferocious language again and again. If he looks at yesterday's proceedings he will know how much time has been allotted to his party. He will also come to know that it was the leader of his party who initiated the discussion. He must have patience and restraint which are the essence of democracy. I have to give opportunities to all. Let him not make a charge which is unfounded.

Sri KONANDUR LINGAPPA.—I am not disobedient. The Chair said that I am using strong language. If the Chair itself says that, who is there to protect us ?

ಉಪಾಧ್ಯಕ್ಷರು.—ಈಗ ಕಬಾಡಿಯವರು ಮಾತನಾಡಬಹುದು.

† ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ಮಾನ್ಯ ಉಪಾಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮೊದಲು ತಮಗೆ ವಂದಿಸುತ್ತೇನೆ. ಮತ್ತು ನನಗೆ ಮಾತನಾಡಲು ವೇಳೆಯನ್ನು ಹೆಚ್ಚು ಕೊಡದೆ ಇದ್ದುದಕ್ಕೆ ವಿಷಾದಪಡುತ್ತೇನೆ. ಈ ಡಿಮ್ಯಾಂಡ್‌ನ ಮಂಡನೆ ಏನಿದೆ, ಇದು ಕೇವಲ ಕಣ್ಣೊರೆಸುವ ಡಿಮ್ಯಾಂಡ್ ಆಗಿದೆ ಎಂದು ಹೇಳಬಹುದು. ರಾಜ್ಯಾಂಗದ 46ನೇ ಆರ್ಟಿಕಲ್ ಪ್ರಕಾರ ಸೋಷಿಯಲಿ ಮತ್ತು ಎಕನಾಮಿಕಲಿ ಈ ದೃಷ್ಟಿಯಿಂದ ಹರಿಜನರಿಗೆ ಮತ್ತು ಗಿರಿಜನರಿಗೆ ಎಲ್ಲ ರೀತಿಯಿಂದಲೂ ಆಗುತ್ತಿರುವ ಶೋಷಣೆಯನ್ನು ಹೋಗಲಾಡಿಸಬೇಕೆಂದು ಹೇಳುತ್ತಾ ಬಂದಿದ್ದರೂ ಸಹ ಅದನ್ನು ಇಲ್ಲಿಯವರೆಗೆ ಯಾವ ಸರ್ಕಾರವೂ ಹೋಗಲಾಡಿಸಿಲ್ಲ ಎಂದು ಹರಿಜನರ ಪರವಾಗಿ ನಾನು ಹೇಳುವುದಕ್ಕೆ ಹಿಂಜರಿಯುವುದಿಲ್ಲ. ಇಂದು ಸಮಾಜ ಕಲ್ಯಾಣ ಇಲಾಖೆ ಯಾವುದೇ ಹೊಸ ಯೋಜನೆಯನ್ನು ತೆಗೆದುಕೊಂಡರೂ ಸಹ, ಅದನ್ನು ಫಾಲೋ ಅಪ್ ಮಾಡುವುದಕ್ಕೆ ಯಾವುದೇ ಕಳಕಳಿಯ ಪ್ರೋಗ್ರಾಮ್ ಇಲ್ಲದಿರುವುದರಿಂದ ಯಾವ ಯೋಜನೆಗಳೂ ಸಹ ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಸರ್ವಿಸಸ್ ವಿಚಾರದಲ್ಲಿಯೇ ಆಗಲೀ, ವಿದ್ಯಾಭ್ಯಾಸದ ವಿಚಾರದಲ್ಲಿಯೇ ಆಗಲೀ, ಮತ್ತೆ ಬೇರೆ ಯಾವ ವಿಷಯಗಳಲ್ಲಿಯೇ ಆಗಲೀ ನಾವು ಅನೇಕ ತರಹದ ಸೂಚನೆಗಳನ್ನು ಕೊಡುತ್ತಿದ್ದರೂ ಸಹ ಆ ಬಗ್ಗೆ ಫಾಲೋ ಅಪ್ ಇಲ್ಲದಿರುವುದರಿಂದ ಯಾವ ಯೋಜನೆಗಳೂ ಸಾಕಷ್ಟು ಯಶಸ್ವಿಯಾಗಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇಂದು ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ಖಾಸಗೀ ಬೋರ್ಡಿಂಗ್‌ಗಳಿವೆ. ಅವು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತಿವೆ, ಎಷ್ಟರಮಟ್ಟಿಗೆ ಗ್ರಾಂಟ್ ಪಡೆಯುತ್ತಿವೆ, ಎಷ್ಟರಮಟ್ಟಿಗೆ ಹುಡುಗರನ್ನು ಸಾಕಿ ವಿದ್ಯಾಭ್ಯಾಸ ಕೊಡುತ್ತಿದ್ದಾರೆ, ಅಲ್ಲಿಯ ಮೇನೇಜ್‌ಮೆಂಟ್‌ನ ವ್ಯವಸ್ಥೆ ಯಾವ ರೀತಿ ಇದೆ ಎಂಬ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಇಂದು ಈ ಖಾಸಗೀ ಬೋರ್ಡಿಂಗ್‌ಗಳ ಮೇನೇಜ್‌ಮೆಂಟ್‌ನಲ್ಲಿ ಬಹಳ ಅವ್ಯವಸ್ಥೆ ಇದೆ ; ಆದಕಾರಣ ಇಲಾಖೆಯವರು ಸಾಕಷ್ಟು ನಿಗಾ ವಹಿಸಬೇಕು. ಅವರಿಗೆ ಕೊಡುತ್ತಿರುವ ಗ್ರಾಂಟ್ ಸರಿಯಾಗಿ ಉಪಯೋಗವಾಗುತ್ತಿದೆಯೋ ಎಂಬುದನ್ನು ನೋಡುತ್ತಿರಬೇಕು.

(ಶ್ರೀ ಜೆ. ಎಲ್. ಕಬಾಡಿ)

ಇನ್ನು ಮನೆ ಇಲ್ಲದವರಿಗೆ ಮನೆ ಕೊಡುತ್ತೇವೆಂದು ಸರ್ಕಾರದವರು ಘೋಷಣೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸರ್ಕಾರದವರು ಏನಾದರ 3 ಸಾವಿರೂ ಜನರಿಗೆ ಮನೆಕಟ್ಟಿಕೊಳ್ಳಲು ಸೈಟ್‌ಗಳನ್ನು ಕೊಟ್ಟಿದ್ದರೆ ಅದರಲ್ಲಿ 300 ಸೈಟ್‌ಗಳನ್ನು ಮಾತ್ರ ಹರಿಜನರಿಗೆ ಕೊಟ್ಟಿದ್ದೇವೆಂದು ಹೇಳುವುದಾದರೆ ಅದು ಬಹಳ ವಿಷಾದಕರವಾದ ಸಂಗತಿ. 18 ಪರ್ಸೆಂಟ್ ಅದರೂ ಸೈಟ್‌ಗಳನ್ನು ಹರಿಜನರಿಗೆ ಕೊಟ್ಟಿದ್ದರೆ ಶ್ರೀಮಾನ್ ಬಸವಲಿಂಗಪ್ಪನವರ ಬಗ್ಗೆ ನಾನು ಹೆಮ್ಮೆ ಪಡುತ್ತಿದ್ದೆ. ಇಲ್ಲಿಯುವರೆಗೆ ಹರಿಜನರ ಬಗ್ಗೆ ಕೈಕೊಂಡಂಥ ಯೋಜನೆಗಳು ಸರಿಯಾಗಿ ಕಾರ್ಯಗತವಾಗದಿರುವುದಕ್ಕಾಗಿ ನಾನು ವಿಷಾದಪಡುತ್ತೇನೆ. ಕೇರಳಾ ಸರ್ಕಾರದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಡೆವಲಪ್‌ಮೆಂಟ್ ಫೈನಾನ್ಸ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಸಹ ಅದೇ ರೀತಿಯು ಒಂದು ಹರಿಜನರಿಗಾಗಿ ಒಂದು ಫೈನಾನ್ಸ್ ಕಾರ್ಪೊರೇಷನನ್ನು ರಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಐದನೇ ಪಂಚವಾರ್ಷಿಕ ಯೋಜನೆಯಲ್ಲಿ 9ಕೋಟಿ ಜನರಿಗೆ ಕೆಲಸ ಒದಗಿಸಬೇಕೆಂಬ ಒಂದು ಯೋಜನೆ ಇದೆ. ಈ ವಿಚಾರದಲ್ಲಿ ಹರಿಜನ ಮತ್ತು ಗಿರಿಜನರಿಗಾಗಿ ಒಂದು ಸ್ಪೆಷಲ್ ಟ್ರೈನಿಂಗ್ ಪ್ರೋಗ್ರಾಮನ್ನು ಹಾಕಿಕೊಂಡು ಈ ಜನರ ವಿದ್ಯಾರ್ಥಿಗಳಿಗೆ ಟೈಪಿಂಗ್‌ನಲ್ಲಿ ಕರಿಕರ್ ಪೋಸ್ಟ್ ವಿಚಾರದಲ್ಲಿ ಟ್ರೈನಿಂಗ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ರೀತಿ ಒಂದು ಟ್ರೈನಿಂಗ್ ಸ್ಕೀಮನ್ನು ಸರ್ಕಾರದವರು ತೆಗೆದುಕೊಳ್ಳದಿದ್ದರೆ ನಾಳೆ ನಮ್ಮ ಜನರಿಗೆ ಸರ್ವಿಸ್ ಪ್ರೋಗ್ರಾಮ್‌ನಲ್ಲಿ ಸಾಕಷ್ಟು ಕೆಲಸ ಸಿಗದಿರಬಹುದು ಎಂಬ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಇಂದು ಗುಜರಾತ್ ಮತ್ತು ಪಂಜಾಬ್ ರಾಜ್ಯಗಳಲ್ಲಿ 25 ಪರ್ಸೆಂಟ್‌ನಿಂದ 30 ಪರ್ಸೆಂಟ್‌ವರೆಗೆ ಹರಿಜನರಿಗೆ ಸರ್ವಿಸಸ್‌ನಲ್ಲಿ ಜಾಗಗಳನ್ನು ಕೊಡುತ್ತಿದ್ದರೂ ಸಹ ನಮ್ಮ ರಾಜ್ಯದಲ್ಲಿ ರಾಜ್ಯಾಂಗದ ಪ್ರಕಾರ 18ಪರ್ಸೆಂಟ್ ಸಹ ಕೊಡುತ್ತಿಲ್ಲ. ಇದೇ ವಿಚಾರವನ್ನು ಮಾನ್ಯ ಆರ್ಮುಗಂ ಅವರು ಸಹ ಒತ್ತಿ ಹೇಳಿದ್ದಾರೆ. ನಾನು ಹರಿಜನ-ಗಿರಿಜನ ಕಲ್ಯಾಣ ಸಮಿತಿಯ ಜೊತೆಯಲ್ಲಿ ರಾಜ್ಯದ ಎಲ್ಲ ಕಡೆ ಟೂರ್ ಮಾಡಿ ನೋಡಿದಾಗ ಯಾವ ಕಡೆಯಲ್ಲಿಯೂ ಎರಡು ಪರ್ಸೆಂಟ್‌ಗಿಂತ ಜಾಸ್ತಿ ಸೀಟ್‌ಗಳನ್ನು ಸರ್ಕಾರೀ ಸೇವೆಯಲ್ಲಿ ಕೊಟ್ಟಿಲ್ಲ. ಕೆಲವು ಕಡೆ ಜೀರೋ ಪರ್ಸೆಂಟ್ ಇದೆ. ವಿಶ್ವವಿದ್ಯಾನಿಲಯಗಳಲ್ಲಾಗಲೀ, ಬೇರೆ ಕಡೆಗಳಲ್ಲಾಗಲೀ ಸರಿಯಾದ ಪ್ರಾತಿನಿಧ್ಯವನ್ನು ಸರ್ವಿಸಸ್‌ನಲ್ಲಿ ಕೊಟ್ಟಿಲ್ಲ. ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟು ಪರ್ಸೆಂಟ್ ಕೊಡಲಾಗಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ಚೀಫ್ ಸೆಕ್ರೆಟರಿಯವರು ಕೊಡುವುದಕ್ಕೆ ತಯಾರಿಲ್ಲ. ಸರ್ಕಾರದಲ್ಲಿರತಕ್ಕಂಥ ಉನ್ನತ ಅಧಿಕಾರಿಗಳ ನಿಲುವು ಈ ರೀತಿ ಇದ್ದರೆ ನಾವು ಅವರ ಬಗ್ಗೆ ಏನು ಅನ್ನಬೇಕೋ ಗೊತ್ತಿಲ್ಲ.

ಐ. ಎ. ಎಸ್. ಮತ್ತು ಐ. ಪಿ. ಎಸ್. ಪರೀಕ್ಷೆಗೆ ಹರಿಜನರು ಮತ್ತು ಗಿರಿಜನರು ಕುಳಿತುಕೊಳ್ಳಲು ಅನುಕೂಲವಾಗುವಂತೆ ನಮ್ಮ ರಾಜ್ಯದಲ್ಲಿ ಟ್ರೈನಿಂಗ್ ಕ್ಲಾಸ್ ಇದ್ದರೂ ಸಹ ರಿಜಲ್ಟ್ ಮಾತ್ರ ಜಿರೋ ಪರ್ಸೆಂಟ್ ಬರುವುದಕ್ಕೆ ಯಾರು ಕಾರಣರು ? ಇವರುಗಳನ್ನು ಉದ್ದೇಶಪೂರ್ವಕವಾಗಿ ಫೇಲ್ ಮಾಡಿಸುವುದಕ್ಕೆ ಪ್ರಯತ್ನ ನಡೆಯುತ್ತಿದೆ ಎಂದು ಕಾಣುತ್ತದೆ. ಅದೇ ದೆಹಲಿಯಲ್ಲಿ 90 ಪರ್ಸೆಂಟ್‌ವರೆಗೆ ರಿಜಲ್ಟ್ ಬರುತ್ತಿದೆ. ಆದಕಾರಣ ನಮ್ಮ ಹುಡುಗರನ್ನು ದೆಹಲಿಗಾದರೂ ಕಳುಹಿಸಿಕೊಟ್ಟರೆ ಒಳ್ಳೆಯದು. ಅದಕ್ಕೆ ನಮ್ಮ ಅಡ್ಡಿ ಇಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು.—ತಾವು ಮುಕ್ತಾಯ ಮಾಡಬೇಕು.

ಶ್ರೀ ಜೆ. ಎಲ್, ಕಬಾಡಿ.—ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

6-00 P. M.

Mr. DEPUTY SPEAKER.—Discussion on these demands is over. The Minister will reply tomorrow. We will go to the next item—Calling Attention to Matters of Urgent Public Importance. The first one is in the name of B. Sathyanarana Singh. He has intimated me and it will be taken up tomorrow. Next one is in the name of Sri H. S. Siddappa.